
ಸಂಪುಟ 22 ಸಂಚಿಕೆ 29-30
ಜುಲೈ 23, 2000 ಬೆಲೆ ರೂ. 3.00

ಪೆಕ್ಟ್ರರಗ

ದುಡಿವ ಜನರ ಪ್ರಾಣಮಿತ್ರ


ಅವಸಾನದ ಅಂಚಿನಲ್ಲಿ ಕರ್ನಾಟಕದ ಕೈಗಾರಿಕೆಗಳು





ಚಂದ್ರಬಾಬುಗೆ ಜನ ನೀಡುತ್ತಿರುವ 'ಶಾಕ್'

ಸಿಐಟಿಯು 8ನೇ ರಾಜ್ಯ ಸಮ್ಮೇಳನ




ರೆಫ್ಯೂಜಿ

ಕಳೆದ ಸಂಚಿಕೆಯಲ್ಲಿ ಅಮೃತಸರದಲ್ಲಿ ನಡೆದ ಪಕ್ಷದ ವಿಶೇಷ ಅಧಿವೇಶನದ ಬಗ್ಗೆ ಬರೆದ ಬಸುರವರು ಈ ಸಂಚಿಕೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆಯಲ್ಲಿ ನಡೆದ ಎರಡನೇ ಹಣಕಾಸು ಆಯೋಗದ ಬಗ್ಗೆ ಆದ ಚರ್ಚೆಯನ್ನು ವಿವರಿಸಿದ್ದಾರೆ. ಹಾಗೂ 1959 ರಲ್ಲಿ ಪಶ್ಚಿಮಬಂಗಾಳದಲ್ಲಿ ನಡೆದ ಆಹಾರ ಚಳುವಳಿಗಳ ಬಗ್ಗೆ ಬರೆದಿದ್ದಾರೆ

ರಾಜ್ಯಕ್ಕೆ ಹೆಚ್ಚು ಅಧಿಕಾರದ ಹೋರಾಟ

ಪಶ್ಚಿಮ ಬಂಗಾಳದ ಬಗ್ಗೆ ಕೇಂದ್ರ ಸರಕಾರದ ಮಲತಾಯಿ ಧೋರಣೆಯತ್ತ ಓದುಗರ ಗಮನಸೆಳೆಯಲು ನಾನು ಬಯಸುತ್ತೇನೆ ಕೇಂದ್ರ-ರಾಜ್ಯ ಸಂಬಂಧಗಳು ಹಳಸುತ್ತಿದ್ದ ಬಗ್ಗೆಯೂ ಹೇಳಲು ಇಚ್ಚಿಸುವೆ.

ಪಶ್ಚಿಮ ಬಂಗಾಳದಲ್ಲಿ 1977 ರಲ್ಲಿ ಎಡರಂಗ ಅಧಿಕಾರಕ್ಕೆ ಬಂದ ಮೇಲೆ ಕೇಂದ್ರ-ರಾಜ್ಯ ಸಂಬಂಧಗಳ ಮರುಮೌಲ್ಯಮಾಪನ ಮಾಡಬೇಕೆಂಬ ಬೇಡಿಕೆ ಬಲಗೊಂಡಿತು. ಭಾರತದಲ್ಲಿ ಒಕ್ಕೂಟತತ್ವ ಕೇವಲ ಪುಸ್ತಕದ ಬದನೆಕಾಯಿಯಾಗಿತ್ತು. ಅಧಿಕಾರ ಬಹುತೇಕವಾಗಿ ಕೇಂದ್ರೀಕೃತಗೊಂಡಿತ್ತು. ಸ್ವಾತಂತ್ರ್ಯದ ನಾಲ್ಕು ದಶಕಗಳ ನಂತರ ಕಾಂಗ್ರೆಸ್ ಸರಕಾರಗಳು ತಮ್ಮ ಸ್ವಂತ ಹಿತಕ್ಕಾಗಿ ಅಧಿಕಾರವನ್ನು ಇನ್ನಷ್ಟು ಕೇಂದ್ರೀಕೃತಗೊಳಿಸಿದವು. ಇದರ ಪರಿಣಾಮವಾಗಿ ರಾಜ್ಯ ಸರಕಾರಗಳ ಅಧಿಕಾರಗಳು ಕೆಲವು ನಿರ್ದಿಷ್ಟ ಕ್ಷೇತ್ರಗಳಿಗೆ



ಮಾತ್ರ ಸೀಮಿತವಾಗಿವೆ. ಇದು ನಾವೆಲ್ಲ ಅರ್ಥಮಾಡಿಕೊಂಡಿರುವ ವಾಸ್ತವ.

ನಾವು ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದಾಗ ಎತ್ತಿದ ಬೇಡಿಕೆ ಈಗ ರಾಷ್ಟ್ರವ್ಯಾಪಿಯಾದ ಒಂದು ಪ್ರಮುಖ ವಿಷುವಾಗಿದೆ. ಆಗ ನಾವು ಹೇಳಿದ್ದನ್ನು ಅಂಗೀಕರಿಸಲು ತುಂಬಾ ಜನರು ಸಿದ್ಧರಿರಲಿಲ್ಲ; ಆದರೆ ಈಗ ಇಡೀ ಭಾರತಕ್ಕೆ ಸಮಸ್ಯೆಯ ಅರಿವಾಗಿದೆ. ಅಭಿವೃದ್ಧಿ ಮತ್ತು ತೀರಾ ಒಳ ಪ್ರದೇಶಗಳ ಕಲ್ಯಾಣಕ್ಕೆ ಕೇಂದ್ರ-ರಾಜ್ಯ ಸಂಬಂಧಗಳ ಮರು ಮೌಲ್ಯಮಾಪನ ಮಾಡದೆ ಬೇರೆ ದಾರಿಯೇ ಇಲ್ಲ.

ನಮ್ಮ ದೇಶದಲ್ಲಿ ಈಗ ಇರುವ ಬಂಡವಾಳಶಾಹಿ ಜಮೀನ್ದಾರಿ ರಾಜಕೀಯ ವ್ಯವಸ್ಥೆಯ ಸೀಮಿತ ಅವಕಾಶದ ಒಳಗಡೆ ನೀತಿಗಳನ್ನು ಸೂಕ್ತವಾಗಿ ಅನುಷ್ಠಾನಗೊಳಿಸಬೇಕಾದರೆ ರಾಜ್ಯಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಬೇಕು. ಪ.ಬಂಗಾಳದಲ್ಲಿ 1977 ರಲ್ಲಿ ನಾವು ಅಧಿಕಾರಕ್ಕೆ ಬಂದಾಗ ಇದನ್ನು ನಮ್ಮ ಪ್ರಮುಖ ಕಾರ್ಯಕ್ರಮವನ್ನಾಗಿ ಮಾಡಿದೆವು. ಹಾಗೆ ನೋಡಿದರೆ, ರಾಜ್ಯದಲ್ಲಿ ಹಿಂದೆ ಎರಡು ಬಾರಿ ಸಂಯುಕ್ತ ರಂಗ ಸರಕಾರಗಳು ಸಂಕ್ಷಿಪ್ತ ಅವಧಿ ಅಧಿಕಾರದಲ್ಲಿದ್ದಾಗಲೂ ನಾವು ಇದೇ ಬೇಡಿಕೆಯನ್ನು ಮುಂದಿಟ್ಟಿದ್ದೆವು ಕೇಂದ್ರದ ಪಕ್ಷಪಾತಿ ಧೋರಣೆ ವಿರುದ್ಧ ಹೋರಾಡಲು ಹೆಚ್ಚು ಅಧಿಕಾರ ಅಗತ್ಯ ಎಂಬುದು ನಮ್ಮ ಪ್ರತಿಪಾದನೆ.

ಹೆಚ್ಚೆಚ್ಚು ಅಧಿಕಾರಗಳನ್ನು ಕೇಂದ್ರದಲ್ಲೇ ಇಟ್ಟುಕೊಳ್ಳುವ ರಾಜಕೀಯ ಹುನ್ನಾರವನ್ನು ಬಯಲುಗೊಳಿಸಬೇಕೆಂದು ನಾವು ಹೇಳುತ್ತಲೇ ಬಂದಿದ್ದೇವೆ. ರಾಜ್ಯದಲ್ಲಿ ನಾವು ಪ್ರತಿಪಕ್ಷದಲ್ಲಿ ಇದ್ದಾಗ ಕೂಡ ಇದೊಂದು ಅಪಾಯಕಾರಿ ಪ್ರವೃತ್ತಿ ಎಂದು ಹೇಳಿದ್ದೆವು.

ನಮ್ಮ ನಿಲುವು ಸರಿಯೆಂಬುದನ್ನು ಇತಿಹಾಸ ಸಾಬೀತುಪಡಿಸಿದೆ.

1958 ಮಾರ್ಚ್‌ನಲ್ಲಿ ರಾಜ್ಯ ವಿಧಾನಸಭೆ ಈ ವಿಷಯದ ಮೇಲೆ ಚರ್ಚೆ ನಡೆಸಿತು. ಬಜೆಟ್ ಭಾಷಣದ ವೇಳೆ ಮುಖ್ಯಮಂತ್ರಿ ಕೇಂದ್ರ ಸರಕಾರ ತಾರತಮ್ಯ ಧೋರಣೆಯ ವಿರುದ್ಧ ಪದೇ ಪದೇ ದನಿ ಎತ್ತಿದರು. ರಾಜ್ಯಕ್ಕೆ ಅದರ ನ್ಯಾಯಯುತ ಪಾಲನ್ನು ಕೊಡಬೇಕು ಎಂದು ಹೇಳಿದರು. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಉನ್ನತ ಸಮಿತಿಯ ಸದಸ್ಯರಾಗಿದ್ದರೂ ಡಾ. ರಾಯ್ ಈ ವಿಷಯವನ್ನು ಎತ್ತಿದ್ದು ಅಭಿನಂದನೀಯ.

1958 ಮಾರ್ಚ್ 7 ರಂದು ಪಿ.ಎಸ್.ಪಿ.ಯ ದೇವೇನ್ ಸೇನ್ ಎರಡನೇ ಹಣಕಾಸು ಆಯೋಗದ ವಿಚಾರವಾಗಿ ರಾಜ್ಯ ವಿಧಾನಸಭೆಯಲ್ಲಿ ಚರ್ಚೆ ಆರಂಭಿಸಿದರು. ನಾನೂ ಚರ್ಚೆಯಲ್ಲಿ ಭಾಗಿಯಾದೆ. ದೀರ್ಘ ಭಾಷಣ ಮಾಡಿದೆ.

"ರಾಜ್ಯ ಸರಕಾರಗಳು ಕೇಂದ್ರ ಸರಕಾರದ ಇಷ್ಟಾನಿಷ್ಟಗಳ ಗುಲಾಮರಾಗಿ ಇರಬೇಕಿಲ್ಲ ಎಂದು ಮುಖ್ಯಮಂತ್ರಿ (ಡಾ.ರಾಯ್) ಹೇಳಿದ್ದಾರೆ. ಇದು ಈ ವಿಧಾನಸಭೆಯ ಸರ್ವಾನುಮತದ ಧೋರಣೆ ಹಾಗೂ ನಿರ್ಣಯ ಎಂದು ನಾನು ಭಾವಿಸುತ್ತೇನೆ" ಎಂದು ನಾನು ಹೇಳಿದೆ.

ಮುಖ್ಯಮಂತ್ರಿ ಡಾ. ರಾಯ್ ಬಜೆಟ್ ಭಾಷಣದಲ್ಲಿ ಹಣಕಾಸು ಆಯೋಗವನ್ನು ಟೀಕಿಸಿದ್ದರು. ಸ್ವಾವಲಂಬನೆಯ ಪ್ರಶ್ನೆಯನ್ನು ಚರ್ಚಿಸಿಯೇ ಇಲ್ಲ; ಜನಸಂಖ್ಯೆಯ ಬೆಳವಣಿಗೆಗೆ ಮಾತ್ರವೇ ಹೆಚ್ಚಿನ ಗಮನವನ್ನು ನೀಡಲಾಗಿದೆ ಎಂದವರು ಹೇಳಿದರು. ಈ ಬಜೆಟ್ ಭಾಷಣಕ್ಕಾಗಿ ನಾನು ಮುಖ್ಯಮಂತ್ರಿ ರಾಯ್‌ರನ್ನು ಅಭಿನಂದಿಸಿದೆ. ಕೇಂದ್ರಕ್ಕೆ ಒಂದು ಸರ್ವಪಕ್ಷ ನಿಯೋಗವನ್ನು ಒಯ್ಯಬೇಕೆಂಬ ನನ್ನ ಸಲಹೆ ಅಂಗೀಕಾರವಾಗಲಿಲ್ಲ. ಕಾಂಗ್ರೆಸ್ ತನ್ನ ಬಲದ ಆಧಾರದಲ್ಲಿ ಈ ಪ್ರಸ್ತಾವವನ್ನು ತಿರಸ್ಕರಿಸಿತು. ಕೇಂದ್ರದಿಂದ ನ್ಯಾಯ ಪಡೆಯುವ ಸಲುವಾಗಿ ಪ್ರತಿಪಕ್ಷದಲ್ಲಿದ್ದ ನಾವು ರಾಜ್ಯ ಸರಕಾರದ ಜತೆ ಸಹಕರಿಸಲು ಸಿದ್ಧರಿದ್ದೆವು. ಆದರೆ ಕಾಂಗ್ರೆಸ್ ಆಸಕ್ತಿ ತೋರಲಿಲ್ಲ. ಕಾಂಗ್ರೆಸ್‌ನ ವಿಶ್ವಾಸಘಾತದ ವಿಚಾರವಾಗಿ ಇತಿಹಾಸ ನಮ್ಮ ಪಕ್ಷಕ್ಕೆ ಒಂದು ಪಾಠವನ್ನು ಕಲಿಸಿತು.

ಊಟ ಕೇಳಿದರೆ ಏಟು:

1959 ಬಹಳಷ್ಟು ಘಟನಾವಳಿಗಳಿಂದ ಕೂಡಿದ ವರ್ಷ. ಆಹಾರ ಚಳವಳಿ ಪರಾಕಾಷ್ಠೆಗೇರಿತು. ಅಗತ್ಯ ಆಹಾರ ಸಾಮಾಗ್ರಿಗಳು ಮಂಗಮಾಯವಾಗಿದ್ದವು. ಅನೇಕ ಹಳ್ಳಿಗಳಲ್ಲಿ ಬರದ ಛಾಯೆ ಇಣುಕಿತ್ತು. ಕಾರ್ಮಿಕ ವರ್ಗ ಕ್ರುದ್ಧವಾಗಿತ್ತು. ಸಾಮೂಹಿಕ ಚಳುವಳಿಗಳು ಮತ್ತು ಮುಷ್ಕರಗಳನ್ನು ನಡೆಸಿ ಅದು ಬೀದಿಗಿಳಿಯಿತು. ಜನಸಮೂಹಕ್ಕೆ ಸಹಾನುಭೂತಿ ತೋರಿಸುವ ಬದಲು ಅಂದಿನ ಸರಕಾರ ತದ್ವಿರುದ್ಧವಾಗಿ ವರ್ತಿಸಿತು. ದಬ್ಬಾಳಿಕೆಗೆ ಇಳಿಯಿತು. ಜನ ಕೇಳಿದ್ದು ಆಹಾರ. ಸರಕಾರ ಕೊಟ್ಟಿದ್ದು ಅಶ್ರುವಾಯು ಮತ್ತು ಗುಂಡೇಟು. ಸುಮಾರು 80 ಜನರು ಹುತಾತ್ಮರಾದರು. ಬಹಳಷ್ಟು ಜನರನ್ನು ಅಂದಿನ ಕಾಂಗ್ರೆಸ್ ಸರಕಾರ ಬಂಧಿಸಿತು.

ಆಹಾರ ಚಳುವಳಿಯನ್ನು ಸ್ವಲ್ಪ ವಿವರವಾಗಿ ತಿಳಿಸುವುದು ಒಳ್ಳೆಯದೆನಿಸುತ್ತದೆ. ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಎಡಪಕ್ಷಗಳು ಬಹಳ ಪ್ರಮುಖ ಪಾತ್ರವನ್ನು ನಿರ್ವಹಿಸಬೇಕಿತ್ತು.

ಪಶ್ಚಿಮ ಬಂಗಾಳ ವಿದಾನಸಭೆಯ ಬಜೆಟ್ ಅಧಿವೇಶನದ ಮೊದಲ ದಿನವಾದ 1959 ಫೆಬ್ರವರಿ 3 ರಂದು ಪ್ರತಿಪಕ್ಷಗಳು 15 ನಿಲುವಳಿ ಗೊತ್ತುವಳಿಗಳನ್ನು ಮಂಡಿಸಿದವು. ಆ ಪೈಕಿ 9 ಕಮ್ಯುನಿಸ್ಟ್ ಪಕ್ಷದ್ದಾಗಿತ್ತು. ರಾಜ್ಯ ಸರಕಾರದ ತುರ್ತು ಕಾನೂನುಗಳಿಂದಾಗಿ ಬೆಲೆಗಳು ಗಗನಕ್ಕೇರಿವೆ ಎಂದು ಪ್ರತಿಪಕ್ಷಗಳು ಆಪಾದಿಸಿದವು.

ಆಹಾರ ಬಿಕ್ಕಟ್ಟಿನ ಚರ್ಚೆಯ ಸಂಬಂಧ ನಿರ್ಧಾರ ತೆಗೆದುಕೊಳ್ಳಬೇಕು ಹಾಗೂ ದಿನಾಂಕವನ್ನು ನಿರ್ಧರಿಸಬೇಕು ಎಂದು ಸ್ಪೀಕರ್‌ಗೆ ಸೂಚಿಸಿದೆ. ಪರಿಶೀಲಿಸುವುದಾಗಿ ಸ್ಪೀಕರ್ ಭರವಸೆ ಕೊಟ್ಟರು. ಆಗ ಶಂಕರ ದಾಸ್ ಬ್ಯಾನರ್ಜಿ ಅಸೆಂಬ್ಲಿ ಸ್ಪೀಕರ್ ಆಗಿದ್ದರು.

ಬೆಲೆಯೇರಿಕೆ ಮತ್ತು ಕ್ಷಾಮ ತಡೆಯಲು ರಚಿಸಲಾಗಿದ್ದ ಸಮಿತಿಯ ಪರವಾಗಿ ಕಾಂಗ್ರೆಸ್ ಸರಕಾರದ ವಿರುದ್ಧ ಹೊಸ ಚಳುವಳಿ ನಡೆಸುವ ನಿರ್ಧಾರವನ್ನು ಮೇ. 24 ರಂದು ಪ್ರಕಟಿಸಲಾಯಿತು. ಜೂನ್ 18 ರಂದು ಪ್ರತಿಭಟನೆ ದಿನವನ್ನು ಆಚರಿಸಲಾಯಿತು. ಕಲ್ಕತ್ತದಲ್ಲಿ ಒಂದು ಮುಖ್ಯ ರ್‍ಯಾಲಿ ನಡೆಯಿತು. ಅನೇಕ ಬೇಡಿಕೆಗಳುಳ್ಳ ಮನವಿಪತ್ರ ಸಲ್ಲಿಸಲಾಯಿತು. ಜಿಲ್ಲೆಗಳಲ್ಲಿ ಲವಲವಿಕೆಯಿಂದ ಪ್ರದರ್ಶನಗಳು ನಡೆದವು. ಜೂನ್ 25 ರಂದು ಸಂಯುಕ್ತ ಹರತಾಳ ಆಚರಿಸಲಾಯಿತು. ಹೊಸದಾಗಿ ರಚಿತವಾದ ಪಶ್ಚಿಮಬಂಗಾಳ ಕೃಷಿಕ ಸಭಾ ಮತ್ತು ಟಿಯುಸಿ ಹೋರಾಟ ಸಮಿತಿ ಅದಕ್ಕೆ ಕರೆ ಕೊಟ್ಟಿದ್ದವು. ಎಲ್ಲ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಮುಚ್ಚಿದ್ದವು ಆದರೆ ಪಿಎಸ್‌ಪಿ ಈ ಮುಷ್ಕರವನ್ನು ವಿರೋಧಿಸಿತ್ತು.

ರಾಜ್ಯ ಆಹಾರ ಸಲಹೆ ಸಮಿತಿಗೆ ಒಟ್ಟು 13 ಪ್ರತಿನಿಧಿಗಳು ರಾಜಿನಾಮೆ ನೀಡಿದರು. ಪ್ರಮುಖ ನೀತಿ ನಿರ್ಧಾರಗಳ ವಿಚಾರದಲ್ಲಿ ಸಮಿತಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎನ್ನುವುದು ಅವರ ಆರೋಪವಾಗಿತ್ತು.

ಆಗಸ್ಟ್ 20 ರಂದು ಹೊಸದಾಗಿ ಚಳುವಳಿ ಆರಂಭವಾಗುವುದೆಂದು ಎಡಪಕ್ಷಗಳ ನಾಯಕರು 17 ರಂದು ಪ್ರಕಟಿಸಿದರು. ಚಳುವಳಿ ಶಾಂತವಾಗಿರುತ್ತದೆ ಎಂದು ನಾವು ಹೇಳಿದರೂ ಲಾಲ್ ಬಜಾರ್‌ನಲ್ಲಿದ್ದ ಪೋಲೀಸ್ ಕೇಂದ್ರ ಕಚೇರಿಯನ್ನು ಸರಕಾರ ಪೂರ್ಣ ಸನ್ನದ್ಧ ಸ್ಥಿತಿಯಲ್ಲಿಟ್ಟಿತು.

(ಮಧ್ಯರಾತ್ರಿಯಲ್ಲಿ ಬಂಧನ ಪರ್ವ ಆರಂಭ- ಮುಂದಿನ ಸಂಚಿಕೆಯಲ್ಲಿ)

ಕಲ್ಕತ್ತ ಕಾರ್ಪೋರೇಷನ್ ಚುನಾವಣೆ

ಪುಟ 2 ರಿಂದ

ಕಲ್ಕತ್ತ ನಗರದ ಮೇಯರ್ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿಯು 4 ಮತಗಳಿಂದ ಸ್ಥಾನ ಕಳೆದು ಕೊಂಡಿರುವುದು ದೇಶದಾದ್ಯಂತ ಪ್ರಮುಖ ಸುದ್ದಿಯಾಗಿದೆ. ಕೆಲವೊಂದು ಪತ್ರಿಕೆಗಳು ಸಂಪಾದಕೀಯವನ್ನೇ ಬರೆದರೆ , ಇಂಡಿಯನ್ ಎಕ್ಸ್ ಪ್ರೆಸ್, ಟೈಂಸ್ ಆಫ್ ಇಂಡಿಯಾ ದೊಡ್ಡ ಸುದ್ದಿಯನ್ನೇ ಮಾಡಿದವು. ಮುಂದಿನ ವರ್ಷ ನಡೆಯುವ ಅಸೆಂಬ್ಲಿ ಚುನಾವಣೆಯ ರಿಹರ್ಸಲ್ ಎಂದು ಗೋಗರೆದವು.

ಕೋಮುವಾದಿ ಪಕ್ಷವೊಂದು ಕೇಂದ್ರದಲ್ಲಿ ಅಧಿಕಾರದ ಗದ್ದುಗೆಯಲ್ಲಿರುವಾಗ ಜಾತ್ಯಾತೀತ ಪರಂಪರೆಯ ಭದ್ರ ಕೋಟೆಯಾಗಿರುವ ಬಂಗಾಳದಲ್ಲಿ ಎಡರಂಗಕ್ಕೆ ಸೋಲುಂಟಾಗಿದೆ ಎಂಬುದು ದೇಶದ ಐಕ್ಯತೆಯನ್ನು ಬಯಸುವ ಶಕ್ತಿಗಳಲ್ಲಿ ಉಂಟಾಗಿರುವ ಕಳಕಳಿಯ ಅಂಶವನ್ನೂ ಕೆಲವೊಂದು ಪತ್ರಿಕೆಗಳು ತಿಳಿಸಿವೆ.

ಸಾಮಾನ್ಯವಾಗಿ ಪಶ್ಚಿಮ ಬಂಗಾಳ, ಕೇರಳ ತ್ರಿಪುರಗಳಲ್ಲಿ ಚುನಾವಣೆಗಳು ನಡೆದಾಗ ಪ್ರಮುಖ ಸುದ್ದಿಯಾಗಿ ಪತ್ರಿಕೆಗಳಲ್ಲಿ ಬಂದರೂ, ಸಿಪಿಐ(ಎಂ) ನೇತೃತ್ವದ ಎಡರಂಗ ಗೆದ್ದರೆ ಅದು ದೊಡ್ಡ ಸುದ್ದಿಯಾಗುವುದಿಲ್ಲ. ಉದಾಹರಣೆಗೆ ಎರಡು ತಿಂಗಳ ಹಿಂದೆ 78 ಮುನಿಸಿ ಪಾರ್ಲಿಮೆಂಟುಗಳಿಗೆ ನಡೆದ ಚುನಾವಣೆಗಳಲ್ಲಿ ಎಡರಂಗ ಭರ್ಜರಿ ವಿಜಯಗಳಿಸಿ (ಐಕ್ಯರಂಗ ಜೂನ್) ತೃಣ ಮೂಲ-ಬಿಜೆಪಿ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದು ಬಂಡವಾಳಶಾಹಿ ಪತ್ರಿಕೆ ಟಿ.ವಿ.ಗಳಲ್ಲಿ ದೊಡ್ಡ ಸುದ್ದಿಯಾಗಲಿಲ್ಲ. ಕಲ್ಕತ್ತದ ಜತೆಯಲ್ಲೇ ನಡೆದ ಬಿಧಾನನಗರ ಮುನಿಸಿ ಪಾಲಿಟಿ ಚುನಾವಣೆಯಲ್ಲಿ ಸಿಪಿಐ(ಎಂ) ಗೆದ್ದಿದ್ದು ಆಶ್ಚರ್ಯ ತರಲಿಲ್ಲ. ಅಥವಾ ಅದಕ್ಕೂ ಮೊದಲು ಜಿಲ್ಲಾ, ತಾಲ್ಲೂಕು ಗ್ರಾಮಪಂಚಾಯಿತು ಉಪ ಚುನಾವಣೆಗಳಲ್ಲಿ ಸಿಪಿಐ(ಎಂ) ಸಾಧಿಸಿದ ಪ್ರಚಂಡ ಜಯಭೇರಿ ಪತ್ರಿಕೆಗಳ ಗಮನಕ್ಕೆ ಬರಲಿಲ್ಲ.

ಈ ಮೂರು ರಾಜ್ಯಗಳಲ್ಲಿ ನಡೆಯುವ ಚುನಾವಣೆ ಎರಡು ರಾಜಕೀಯ ಗುಂಪುಗಳ ನಡುವಿನ ಸ್ಪರ್ದೆ ಮಾತ್ರಅಲ್ಲ. ಎರಡು ಚಿಂತನೆಗಳ ನಡುವಿನ ಸಂಘರ್ಷ-ಶೋಷಿತರ ಧ್ವನಿ, ಪ್ರಗತಿಪರ ಚಿಂತನೆ ಸಿಪಿಐ(ಎಂ) ನೇತೃತ್ವದ ಎಡರಂಗ ಪ್ರತಿನಿಧಿಸಿದರೆ, ಶೋಷಕರ ಪರವಾಗಿ, ಕೊಳೆತುನಾರುತ್ತಿರುವ ವ್ಯವಸ್ಥೆಯನ್ನು ಹಾಗೆಯೇ ಕಾಯ್ದುಕೊಳ್ಳಬೇಕೆಂಬ ಗುರಿಯುಳ್ಳ ಬಿಜೆಪಿ, ಕಾಂಗ್ರೆಸ್ ತೃಣಮೂಲ ಇತ್ಯಾದಿ ಇನ್ನೊಂದೆಡೆ

ಬಿಧಾನನಗರದಲ್ಲಿ ಸಿಪಿಐ(ಎಂ) ಗೆಲುವು

ಕಲ್ಕತ್ತದ ಬಗಲಲ್ಲಿರುವ ಭಿಧಾನನಗರ ಮುನಿಸಿಪಾಲಿಟಿ 'ಡಂಡಂ' ಲೋಕಸಭಾಕ್ಷೇತ್ರದ ಅಡಿಯಲ್ಲಿ ಬರುತ್ತದೆ. ಕಳೆದ ಎರಡು ಬಾರಿ ಲೋಕಸಭಾ ಚುನಾವಣೆಯಲ್ಲಿ ತೃಣ ಮೂಲ ಬೆಂಬಲಿತ ಬಿಜೆಪಿ ಅಭ್ಯರ್ಥಿ ಲೋಕಸಭಾ ಸದಸ್ಯರಾಗಿದ್ದಾರೆ. ಆದರೂ ಕೂಡಾ ಈ ಮುನಿಸಿ ಪಾಲಿಟಿಯನ್ನು 12-11 ಸ್ಥಾನಗಳ ಅಂತರದಲ್ಲಿ ಸಿಪಿಐ(ಎಂ) ತನ್ನ ದಾಗಿಸಿಕೊಂಡಿದೆ.

ಈ ಬಾರಿ ಹೇಗಾದರೂ ಸಿಪಿಐ(ಎಂ)ನ್ನು ಸೋಲಿಸಬೇಕೆಂದು ಎಲ್ಲ ಎಡ ವಿರೋಧಿ ಶಕ್ತಿಗಳೂ ಒಂದಾಗಿ ಸಮರ ಸಾರಿದವು. ಒಂದು ಹಂತದಲ್ಲಿ 11-11 ಸ್ಥಾನಗಳನ್ನು ಹಂಚಿಕೊಂಡಿದ್ದ ಸಿಪಿಐ(ಎಂ) 12 ನೇ ಸ್ಥಾನದ ಫಲಿತಾಂಶಕ್ಕಾಗಿ ಒಂದುವಾರ ಕಾಯಬೇಕಾಯಿತು ವಾರ್ಡ್ ನಂ. 16 ರಲ್ಲಿ 3 ಎ. ಮತಗಟ್ಟೆಯ ಮತ ಎಣಿಸುವ

ಪುಟ 10 ಕ್ಕೆ


ಸಿಪಿಐ(ಎಂ) ಕಚೇರಿಯ ಮೇಲೆ ಪೋಲೀಸರಿಂದ ಧಾಳಿ

ಭಾನುಮುಷ್ತಾಕ್‌ಗೆ ಮತೀಯ ಮೂಲಭೂತವಾದಿಗಳ ಫರ್ಮಾನು

ಮಸೀದಿಯಲ್ಲಿ ಪ್ರಾರ್ಥನೆ ಮಾಡಲು ಮುಸ್ಲಿಂ ಮಹಿಳೆಯರಿಗೂ ಅವಕಾಶ ಕೊಡಬೇಕೆಂದ ಲೇಖಕಿ, ನ್ಯಾಯವಾದಿ ಭಾನುಮುಷ್ತಾಕ್‌ರವರು ಕೇಳಿದ್ದಾರೆ. 'ಅಲ್ಲಾಹುವಿನ ಕಣ್ಣಲ್ಲಿ ಎಲ್ಲರೂ ಸಮಾನರು' ಎಂದು ದಿನಕ್ಕೆ ಕಡಿಮೆಯಂದರೂ ಮೂರು ಬಾರಿ ಸಾರುವ ಹಾಸನದ ಮಸೀದಿಯೊಂದರ ಮುಲ್ಲಾಗಳು ಕೆಂಡಮಂಡಲ ವಾಗಿದ್ದಾರೆ. ಇದು ಧರ್ಮದ ವಿರುದ್ಧದ ಮಾತು ಎಂದೆಲ್ಲಾ ಕೂಗಾಡಿ, ಭಾನು ಮುಷ್ತಾಕ್‌ಗೆ ಮತ್ತು ಅವರ ಕುಟುಂಬದವರಿಗೆ ಬಹಿಷ್ಕಾರ ಹಾಕಿಬಿಟ್ಟಿದ್ದಾರೆ. 'ದೇವರ ಕಣ್ಣಲ್ಲಿ ಮಹಿಳೆಯರು ಸಮಾನರು ಇರಬಹುದು ಆದರೆ ಮುಲ್ಲಾ ಕಣ್ಣಲ್ಲಿ ಅಲ್ಲ' ಎಂದೇ ಸಮರ್ಥಿಸಿ ಕೊಳ್ಳುತ್ತಿರುವ ಮೂಲ ಭೂತವಾದಿಗಳು ಕುದಿಯತೊಡಗಿದ್ದಾರೆ. ಇದು ಧರ್ಮದ್ರೋಹದ ವಿಚಾರ. ಮಹಿಳೆಯರು ಪ್ರಾರ್ಥನೆ ಸ್ಥಳಕ್ಕೆ ಬಂದರೆ ಮಸೀದಿ ಮಲಿನವಾಗುತ್ತದೆ, ಪ್ರಳಯವೇ ಸಂಭವಿಸಿ ಬಿಡುತ್ತದೆಂದೆಲ್ಲಾ ವಿಷದ ಮಾತುಗಳನ್ನಾಡುವ ಇವರು ಮಹಿಳೆಯರು ತಮ್ಮಂತೆ ಮನುಷ್ಯರು ಎಂಬುದನ್ನೇ ಮರೆಸುತ್ತಿದ್ದಾರೆ. ಮಹಿಳೆಯರನ್ನು ಪ್ರಾರ್ಥನಾ ಸ್ಥಳದಿಂದ ದೂರವಿಡುವ ವಿಚಾರ ಪವಿತ್ರ ಕುರಾನ್‌ನಲ್ಲಿ ಇಲ್ಲ. ಅಲ್ಲದೆ ಮುಸ್ಲಿಂರ ಪಾವಿತ್ರಸ್ಥಳವಾದ ಮಕ್ಕಾದಲ್ಲಿ ಪ್ರಾರ್ಥನೆ ಅವಕಾಶವಿದೆ. ಬೆಂಗಳೂರಿನ ಶಿವಾಜಿನಗರದ ಮಸೀದಿ ಒಳಗೊಂಡು ರಾಜ್ಯದಲ್ಲಿಯೂ ದೇಶದಲ್ಲಿಯೂ ಮಹಿಳೆಯರ ಪ್ರಾರ್ಥನೆಗೆ ಅಲ್ಲಲ್ಲಿ ಅವಕಾಶವಿರುವಾಗ ಈ ಕೇಳಿಕೆ ಧರ್ಮ ದ್ರೋಹ ಹೇಗಾದೀತು? ಎಂದರೆ ಮುಲ್ಲಾಗಳಲ್ಲಿ ಉತ್ತರವಿಲ್ಲ. ಇಂತಹ ಮತಾಂಧರಿಗೆ ವಿವೇಚನೆ, ವಿಶ್ಲೇಷಣೆ, ನ್ಯಾಯ-ನೀತಿಗಳು ಸಮಚಿತ್ತತೆ ಬೇಕಿಲ್ಲ. ಸಮಾನತೆ ಎಂಬುದು ಅವರಿಗೆ ಎಂದೂ ಆಗದ ಮಾತು.

ಈ ಎಲ್ಲಾ ಧರ್ಮಾಂಧರ ಧಾಳಿಗೆ ಬಲಿ ಮಹಿಳೆಯರೇ ಆಗಿರುವುದು ಗಂಭೀರ ಸಂಗತಿ. ಮಹಿಳೆಯರ ಹಕ್ಕು, ಸಮಾನತೆಯ ಬದುಕಿನ ವಿಷಯ ಬಂದಾಗಲೆಲ್ಲಾ ಮತಾಂಧರ ಕಟ್ಟುಪಾಡುಗಳು ಜಾಗೃತಗೊಂಡು 'ಫರ್ಮಾನು', 'ಧರ್ಮಾದೇಶ'ಗಳಾಗುತ್ತವೆ. ಉಳಿದಂತೆ ಅವೆಲ್ಲಾ ಕುಯ್‌ಗುಡುತ್ತಾ ಗೂಡು ಸೇರಿ ಪಕ್ಷಪಾತದಿಂದ ಮಲಗಿರುತ್ತವೆ. ಸ್ಥಾಪಿತ ಹಿತ ಗಳನ್ನು ಕಾಯುತ್ತವೆ. ಇದರಲ್ಲಿ ಹಿಂದೂ ಮತೀಯವಾದಿಗಳು ಮತ್ತು ಮುಸ್ಲಿಂ ಮೂಲಭೂತವಾದಿಗಳ ಮನಸು ಒಂದೇ ಕನಸೂ ಒಂದೇ.

ಪ್ರಾರ್ಥನೆಯ ಅವಕಾಶದ ಕೇಳಿಕೆ ಒಂದು ಪ್ರಜಾಸತ್ತಾತ್ಮಕ ಹಕ್ಕಿನ ಕೇಳಿಕೆ. ಶತಶತಮಾನಗಳಿಂದ ಕಗ್ಗತ್ತಲಿನಲ್ಲಿ ಕೊಳೆಯಲು ಹಾಕಿ, ಹೃದಯ, ಮನಸುಗಳನ್ನು ಬಂಧಿಸಿ


ಭಾನು ಮುಷ್ತಾಕ್

ಹಿಂಡುತ್ತಿರುವುದರ ವಿರುದ್ಧದ ಪ್ರತಿಭಟನೆ ಕೂಡ. ಮುಂದೆ ವೈಚಾರಿಕತೆ ಚಿಗುರಿ ಅರಳಲು ಸಮಾನ ಅವಕಾಶದ ಮೊದಲ ಮೆಟ್ಟಿಲು. ಈ ಸಂಘರ್ಷ ದಲ್ಲಿ ಎಲ್ಲಾ ಪ್ರಗತಿಪರರು, ಧರ್ಮನಿರಪೇಕ್ಷತರು ಮತ್ತು ಸಹಜ ಮನುಷ್ಯರು ನಿಲ್ಲಬೇಕಾದದ್ದು ಭಾನು ಮುಷ್ತಾಕರ ಹಾಗೂ ಅಂತಹವರ ಜೊತೆಗೆ. ಹಿಂದೂ-ಮುಸ್ಲಿಂ ಮೂಲಭೂತ ವಾದಿಗಳು ಒಬ್ಬರನ್ನೊಬ್ಬರು ಬಳಸಿಕೊಂಡು ಬೆಳೆಯುತ್ತಿರುವ ಅಪಾಯವಿರು ವಾಗಲೇ ಅವರನ್ನು ಎದುರಿಸಿಯೇ ಮುಂದೆ ಸಾಗಬೇಕಿದೆ ಎಂಬ ವಾಸ್ತವವನ್ನು ಮರೆಯ ಬಾರದು. ಇನ್ನು ಭಾರತದ ಜನತೆಯ ಮನಸು ಮತಾಂಧತೆಯ ವಿಷದಿಂದ ಪೂರ್ತಿ ತೋಯ್ದಿಲ್ಲ. ಅಂತಹ ಶಕ್ತಿಗಳಿಗೆ ಸವಾಲು ಒಡ್ಡುವ ಶಕ್ತಿ ಇನ್ನೂ ಜೀವಂತ ಇದೆಯೆಂಬುದು ಗಮನಾರ್ಹ.

ಹಾಸನದ ಮಸೀದಿಯ ಮುಲ್ಲಾರ ಫರ್ಮಾನು ಒಂದು ಕ್ರಿಮಿನಲ್ ಅಪರಾಧ. ಸರ್ಕಾರ ಕಾನೂನುಬದ್ಧವಾಗಿ ಕ್ರಮವಹಿಸ ಬಹುದಿತ್ತು. ಇದನ್ನು ಬಿಟ್ಟು 'ಸೂಕ್ಷ್ಮ ವಿಚಾರ, ಸ್ವಲ್ಪ ಸುಮ್ಮನಿರಿ' ಎಂದು ಭಾನುಮುಷ್ತಾಕರವರಿಗೆ ಪೋಲೀಸ್ ಅಧಿಕಾರಿಗಳಿಂದ ಯಾಕೆ ಹೇಳಿಸ ಬೇಕಿತ್ತು. ಮುಲ್ಲಾಗಳೇ ಮುಸ್ಲಿಂ ಸಮುದಾಯ ವೆಂದು ತಿಳಿಯುವ, ಮತಾಂಧರಿಗೆ ಮುಖಾ ಮುಖಿಯಾಗದ ಕಾಂಗ್ರೆಸ್‌ನ ಸಂದರ್ಭಸಾಧಕ ನೀತಿಗಳು ಬಹುಸಂಖ್ಯಾತ ಮೂಲಭೂತವಾದ ವನ್ನು ಬೆಳೆಸಬಲ್ಲದು/ಬೆಳೆಸಿದೆ.

ಕರ್ನಾಟಕ ಈ ವಾರ- ಎಸ್ಮಾ ಸರ್ಕಾರವಾದ ಕೃಷ್ಣಾ ಸರ್ಕಾರ

ಪೌರ ನೌಕರರ ಮುಷ್ಕರ: ಎಸ್ಮಾ ಹೇರಿಕೆ

ಪೌರ ಸೇವಾ ನೌಕರರ ಮುಷ್ಕರದಿಂದ ಎಲ್ಲಾ ಕೆಲಸಗಳು ಸ್ಥಗಿತಕೊಂಡು ಅರ್ಧ ತಿಂಗಳು ದಾಟುತ್ತಿದ್ದರೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸರ್ಕಾರ ಪೂರ್ಣವಾಗಿ ವಿಫಲವಾಗಿದೆ. ತನ್ನ ಹೊಣೆಗೇಡಿತನವನ್ನು ಮುಚ್ಚಿಕೊಳ್ಳುವುದಕ್ಕಾಗಿ ಎಸ್ಮಾ ಕಾನೂನು ಹೇರಿದೆ. ಪಿ.ಯು.ಸಿ. ಉಪನ್ಯಾಸಕರ ಮುಷ್ಕರ ವನ್ನು ಎಸ್ಮಾ ಲಾಗೂ ಮಾಡಿ ಮುರಿಯಲು ಪ್ರಯತ್ನಿಸಿದ ಕೆಲವೇ ತಿಂಗಳ ಒಳಗೆ ಮತ್ತೆ ಎಸ್ಮಾ. ತುರ್ತು ಪರಿಸ್ಥಿತಿಯ ಮೊದಲಿನ ಮತ್ತು ತುರ್ತುಪರಿಸ್ಥಿತಿಯ ಸಮಯದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತೊತ್ತಳದುಳಿದು ಅದರ ಕಹಿಫಲವನ್ನು ಅನುಭವಿಸಿದ ಕಾಂಗ್ರೆಸ್ ಇನ್ನೂ ಪಾಠ ಕಲಿತಿಲ್ಲವೆನ್ನುವುದುಕ್ಕೆ ಈ ಎಸ್ಮಾ ಕಾನೂನಿನ ಜಾರಿಯೇ ಸಾಕ್ಷಿ. ಚರ್ಚೆಯಲ್ಲಿ ಒಪ್ಪಿಕೊಂಡ ಬೇಡಿಕೆಗಳನ್ನು ಒಂದು ಸರ್ಕಾರಿ ದಾಖಲೆಯಾಗಿ ನೀಡಲು ಸಹ ಸರ್ಕಾರ ಸಿದ್ಧವಿಲ್ಲ. ಇಂತಹ ಬಾಯಿಮಾತಿನ ಭರವಸೆ ಗಳನ್ನು ಕಂಡು, ಮೋಸ ಅನುಭವಿಸಿರುವ


ನೋಡುಗ: ಗುರುಶಾಂತ್.ಎಸ್.ವೈ

ನೌಕರರು ಮುಷ್ಕರ ಮುಂದು ವರೆಸುತ್ತಿದ್ದಾರೆ. ನಾಗರೀಕ ಸೌಲಭ್ಯಗಳು, ಶುಚಿತ್ವವಿಲ್ಲದೇ ಅಸ್ತವ್ಯಸ್ತತೆ, ಅನಾರೋಗ್ಯ ಸ್ಥಿತಿ ನಿರ್ಮಾಣ ಗೊಂಡಿದೆ. ನೌಕರರು ಬೇಡಿಕೆಗಳ ಪಟ್ಟಿ ಸಲ್ಲಿಸಿ ಆರು ತಿಂಗಳಾದರೂ ಹೈಟೆಕ್ ಸರ್ಕಾರ ಬೇಡಿಕೆಗಳ ಪಟ್ಟಿ ನೋಡದೇ, ಮುಷ್ಕರ ಅನಿವಾರ್ಯಗೊಳ್ಳಲು ಹೊಣೆಗಾರನಾಗಿದೆ. ಒಂದು ಕಡೆ ಊರುಗಳನ್ನು ಸಿಂಗರಿಸಿ ಸಿಂಗಾಪೂರ ಮಾಡುವ ಮಾತು. ಆದರೆ ವಾಸ್ತವದಲ್ಲಿ ನೌಕರರನ್ನು ಕಡಿತಗೊಳಿಸಿ, ಎಲ್ಲಾ ಕೆಲಸಗಳನ್ನು ಖಾಸಗೀಕರಿಸುವ ದುಷ್ಟ ಪ್ರಯತ್ನಗಳು ನಡದೇ ಇವೆ.

ಈಗ ಎಸ್ಮಾ ಹೇರುವ ಬೆದರಿಕೆ ಬಂದಿದೆ

ಮುಖ್ಯವಾಗಿ ನೌಕರರ ಬೇಡಿಕೆ - ಪುರಸಭೆಯ ಕೆಲಸಗಳನ್ನು (ಶುಚಿತ್ವ ಇತ್ಯಾದಿ) ಖಾಸಗಿಯವರಿಗೆ ಕಂಟ್ರಾಕ್ಟ್ ನೀಡದೇ, ನೌಕರರಿಗೆ ವಹಿಸುವುದು, ಖಾಲಿ ಹುದ್ದೇ ತುಂಬುವುದು, ಅನಿಶ್ಚತೆಯಲ್ಲಿರುವ ಸಂಬಳ ನಿಯತಕಾಲಿಕವಾಗಿ ನೀಡಲು ಸೂಕ್ತ ವ್ಯವಸ್ಥೆ....... ಇತ್ಯಾದಿ.

ಪುರಸಭೆಗಳು ಜನರಿಂದ ಚುನಾಯಿತವಾದ ಸ್ಥಳೀಯ ಸಂಸ್ಥೆಗಳು ಆಡಳಿತದ ವಿಕೇಂದ್ರೀಕರಣ ದಲ್ಲಿ ಮಹತ್ವದ ಪಾತ್ರ ವಹಿಸುವಂತಹವು. ಇವು ಬಲಗೊಳ್ಳಬೇಕಿದೆ. ಕಾನೂನು-ಸುವ್ಯವಸ್ಥೆಯನ್ನು ಮೊದಲ್ಗೊಂಡು ಸರ್ಕಾರಿ ಕಛೇರಿ, ಶಾಖೆ, ಆರೋಗ್ಯ, ನಾಗರೀಕ ಸೌಲಭ್ಯಗಳು, ಸಂಪನ್ಮೂಲ..... ಹೀಗೆ ಇಡೀ ವಹಿವಾಟುಗಳು ಈ ಸಂಸ್ಥೆಗಳ ಅಧೀನದಲ್ಲಿರ ಬೇಕು. ಆದರೆ ಇದರ ಬದಲಾಗಿ ಪುರಸಭೆಗಳು ಕೇವಲ ಕಸಗುಡಿಸಿ ಹಾಕುವ ಮಟ್ಟಕ್ಕೆ ಉಳಿದುಬಿಟ್ಟಿವೆ ಮತ್ತು ಉಳಿಸಲಾಗಿದೆ. ಆರ್ಥಿಕ ಸಂಪನ್ಮೂಲಗಳಿಂದ ಸೊರಗಿ, ಅನೇಕ ಕಡೆ ತನ್ನ ನೌಕರರಿಗೆ ಸಂಬಳ ಒದಗಿಸುವ ಸ್ಥಿತಿಯಲ್ಲಿಯೂ ಇಲ್ಲದೆ ದಯನೀಯ ಸ್ಥಿತಿಯಲ್ಲಿವೆ. ಅಧಿಕಾರ ನಡೆಸುವವರು ಇವುಗಳತ್ತ ಗಮನಹರಿಸುವ ಗೋಜಿಗೆ ಹೋಗದೇ, ಖಾಲೀ ಇರುವ ಜಾಗಗಳ ಮಾರಾಟದ ದಂಧೆಗೆ ತಮ್ಮ ಸೇವೆಯನ್ನು ಸಮರ್ಪಿಸಿಕೊಂಡ ಉದಾಹರಣೆ ಗಳು ಅನೇಕ. ಆದ್ದರಿಂದ ಮುಖ್ಯವಾಗಿ ಪುರಸಭೆಗಳಿಗೆ ಆರ್ಥಿಕ ಅಧಿಕಾರ ಹೆಚ್ಚಿಗೆಬೇಕು. ಇದು ಕೇವಲ ನಾಗರೀಕರ ಮೇಲೆ ವಿಧಿಸುವ ತೆರಿಗೆಯಿಂದ ಮಾತ್ರವೇ ಸಂಪದ್ಭರಿತವಾಗಲು ಸಾಧ್ಯವಿಲ್ಲ. ಈ ತೆರಿಗೆ ವಿಧಿಸುವುದು ಸಹ ವಿಪರೀತ ತಾರತಮ್ಯವಿದೆ. ಹೋಟೆಲ್ ಉದ್ದಿಮೆ, ಕಾಂಪ್ಲೆಕ್ಸ್‌ದಾರರು, ಸಿನಿಮಾ, ಕಲ್ಯಾಣಮಂಟಪ ಮುಂತಾದ ಹೆಚ್ಚಿನ ವಹಿವಾಟುದಾರರಿಗು ಸಾಮಾನ್ಯ ನಾಗರಿಕರಿಗೂ ಬಹುತೇಕ ಒಂದೇ ತೆರನಾದ ತೆರಿಗೆ ದರಗಳಿವೆ. ಅಧಿಕ ಆಧಾಯದವರಿಗೆ ಅಂತಸ್ತಿಗನುಗುಣವಾಗಿ


ಮುಷ್ಕರ ನಿರತ ಪೌರ ಕಾರ್ಮಿಕರು

ತೆರಿಗೆ ಹಾಕಿ, ನಾಗರಿಕರಿಗೂ ಸುಲಭಗೊಳಿಸಿದರೆ ಆದಾಯವೂ ಹೆಚ್ಚುವುದು ತೆರಿಗೆ ತಪ್ಪಿಸಿಕೊಳ್ಳಲು ಶ್ರೀಮಂತರು ನಡೆಸುವ ಭ್ರಷ್ಟಾಚಾರ ವ್ಯಾಪಕವಿದೆ. ಬಹಳ ಪ್ರಮುಖವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆ ಪ್ರದೇಶಗಳಿಂದ ಸಂಗ್ರಹಿಸುವ ಮನೋರಂಜನೆ, ಮಾರಾಟ, ಆಸ್ತಿ ತೆರಿಗೆಯಂತಹ ವಿವಿಧ ರೀತಿಯ ತೆರಿಗೆ ಹಾಗೂ ಸುಂಕಗಳನ್ನು ಪೂರ್ಣ ಸೆಳೆಯುತ್ತದೆ. ಅದನ್ನು ಸ್ಥಳೀಯ ಸಂಸ್ಥೆಗಳಿಗೆ ಬಹುಪಾಲು ನೀಡಬೇಕು. ಹಿಂದೆ 'ಅಕ್ಟ್ರಾಯ್' ಸಂಗ್ರಹವನ್ನು ನಿಲ್ಲಿಸುವಾಗ ಸಂಗ್ರಹಿಸಿದ ತೆರಿಗೆಗಳಲ್ಲಿ ಒಂದು ಪಾಲನ್ನು ಪುರಸಭೆಗಳಿಗೆ ನೀಡಲು ಸರ್ಕಾರ ಒಪ್ಪಿತ್ತು. ಆದರೆ ಅದು ಜಾರಿಯಾಗಲೇ ಇಲ್ಲ.

ಆದ್ದರಿಂದ ಸರ್ವ ಅಧಿಕಾರ ಸಂಪನ್ನವಾದ ಪುರಸಭೆಗಳ ನಾಗರಿಕರಿಗೂ, ನೌಕರರಿಗೂ ಸೂಕ್ತ ಸೇವೆ, ಸೌಲಭ್ಯ ಕಲ್ಪಿಸಿಕೊಡಲು ಸಾಧ್ಯ. ಆದ್ದರಿಂದ ಸರ್ಕಾರದ ಮುಂದೆ ಮಂಡಿಸಿದ ನೌಕರರ ಬೇಡಿಕೆಗಳು ನ್ಯಾಯಸಮ್ಮತ ಮತ್ತು ಕನಿಷ್ಟ ಪ್ರಮಾಣದವು.

ಮುಷ್ಕರದ ಬಿಸಿ ಎಲ್ಲೆಡೆ ತಟ್ಟುತ್ತಿದ್ದರೂ ಕೃಷ್ಣರವರ ಸರ್ಕಾರ ತಣ್ಣಗೆ ಇದೆ. ಬಹುಶ ಹಿಂದೆ ಉಪನ್ಯಾಸಕರ ವಿರುದ್ಧ ಪಾಲಕರು, ವಿದ್ಯಾರ್ಥಿಗಳನ್ನು ಎತ್ತಿಕಟ್ಟಿ ಮುಷ್ಕರ ಮುರಿಯಲು ಯತ್ನಿಸಿದಂತೆ ಈಗಲೂ ನಾಗರೀಕರನ್ನು ಅಸಹನೆ ಬಳಸಬಹುದೆಂದು ಲೆಕ್ಕಾಚಾರ ಹಾಕಿರಬಹುದು. ಆದರೆ ಉದಾರೀಕರಣ ಈ ಆರಾಧಕರು ಅದಕ್ಕೆ ಅಪಾರ ಬೆಲೆ ತೆರಬೇಕಾಗುವುದು ಎಂಬುದು ನೆನಪಿಟ್ಟುಕೊಳ್ಳಬೇಕು.

ಜಾಗತೀಕರಣದ ಸವಾಲು ಮತ್ತು ಮಾತೃಭಾಷೆ

ಜಾಗತೀಕರಣದ ಲಾಭ ಪಡೆಯಲು ಎಲ್ಲರೂ ಇಂಗ್ಲೀಷ ಕಲಿಯುವುದೊಂದೇ ದಾರಿಯೆಂದು ಮನಮೋಹನ್‌ಸಿಂಗ್ ಮತ್ತು ಇನ್‌ಫೋಸಿಸ್ ನಾರಾಯಣಮೂರ್ತಿಯವರು ಆದೇಶಿಸಿದ್ದಾರೆ. ಕೇಂದ್ರ-ರಾಜ್ಯ ಸರ್ಕಾರಗಳು ಮೂರ್ತಿಯವರನ್ನು ಜಗದೋದ್ಧಾರಕರೆಂದೇ ಭಾವಿಸಿ ನಂಬಿಸುತಿದ್ದಾರೆ. ಕೇಂದ್ರದ ಸಚಿವ ಪ್ರಮೋದ್ ಮಹಾಜನ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೂರ್ತಿಯವರು 'ಹೈಟೆಕ್ ಗುರು' ಎಂದೆಲ್ಲಾ ಗಾಳಿ ಹಾಕಿ ಅವರ ಕೃಪಾಕಟಾಕ್ಷ ನಿರೀಕ್ಷಿಸಿದ್ದಾರೆ. ನಮ್ಮಲ್ಲಿಯ ಮಾಧ್ಯಮಗಳು, ಕೆಲವು ಬುದ್ಧಿಜೀವಿಗಳು ಇಂಗ್ಲೀಷ್‌ನ್ನು 'ಅಂತರ್ರಾಷ್ಟ್ರೀಯ ಭಾಷೆ'ಯೆಂದು ಕರೆದು ಅಪ್ಪಟ ಸುಳ್ಳನ್ನು ಬಿತ್ತುತ್ತಿದ್ದಾರೆ. ಕೆಲವರಂತೂ 'ತ್ರಿಭಾಷಾಸೂತ್ರ' ವೆಂಬ ಮೂರ್ಖ ಪಾಂಡಿತ್ಯವನ್ನು ಬಿಚ್ಚಿಟ್ಟಿದ್ದಾರೆ.

ಇಲ್ಲಿ ಪ್ರಶ್ನೆ ಯಾವ ಭಾಷೆ ಮೇಲು, ಯಾವುದು ಕೀಳು ಎಂಬ ತಾರತಮ್ಯದ್ದಲ್ಲ. ಅಥವಾ ನಮ್ಮ ಭಾಷೆಯೇ ಶ್ರೇಷ್ಠ ಎಂಬ ಭಾಷಾಂಧತೆಯೂ ಅಲ್ಲ. ಭಾಷೆ, ಸಂಸ್ಕೃತಿ ಹಾಗೂ ಬದುಕಿನ ನಡುವೆ ಇರುವ ಅವಿನಾವಭಾವ ಸಂಬಂಧಗಳ ಬಗ್ಗೆ ಪ್ರಾಥಮಿಕ ಕಾಳಜಿಯನ್ನು ಹೊಂದದೇ, ಮಾರುಕಟ್ಟೆ ಅರ್ಥಶಾಸ್ತ್ರದ ತೊತ್ತುಗಳಾಗಿ ಯೋಚಿಸುವುದು ಖಂಡನಾರ್ಹ. ಮಾತೃಭಾಷೆಯಲ್ಲಿ ಕಲಿತು ನಂತರ ಇಂಗ್ಲೀಷಿನಲ್ಲಿ ಪರಿಣಿತರಾದ ಉದಾಹರಣೆ ಯಥೇಚ್ಛವಾಗಿವೆ. ಹಲವಾರು ದೇಶಗಳು ಮಾತೃಭಾಷೆಯಲ್ಲೇ ಮೇಲುಗೈ ಸಾಧಿಸಿವೆ. ಪ್ರತಿಯೊಬ್ಬ ವ್ಯಕ್ತಿಗೂ ವಿಚಾರಶಕ್ತಿ, ವಿಶ್ಲೇಷಣಾ ಶಕ್ತಿ ದಕ್ಕುವುದು ಅವರ ಮಾತೃ ಭಾಷೆಯಿಂದ ಮಾತ್ರವೇ ಸಾಧ್ಯ. ಆದ್ದರಿಂದ ಪ್ರಾಥಮಿಕ ಶಿಕ್ಷಣ ಮಾತೃಭಾಷೆ ಯಲ್ಲಿರಬೇಕು. ಉಳಿದ ಬಾಷೆ ಕಲಿಕೆ ಐಚ್ಛಿಕ ವಾಗಿರಬೇಕು. ಇಲ್ಲವಾದರೆ ಇಂಗ್ಲೀಷಿನಂತಹ ಭಾಷೆ ಕಲಿತ ಗಿಳಿಗಳಾಗಿ ಉಲಿಯಬಹುದೇ ಹೊರತು ಕೌಶಲ್ಯ, ಪ್ರತಿಭೆಗಳು, ಸೃಜನಶೀಲತೆ ಬೆಳೆಯ ಲಾರದು. ಇಂತಹ ಮನೋಸ್ಥಿತಿಯಿಂದ ಜಾಗತೀಕರಣ, ಆಧುನಿಕ ತಂತ್ರಜ್ಞಾನವನ್ನು ಅವುಗಳು ಒಡ್ಡುತ್ತಿರುವ ಸ್ಪರ್ಧೆಯನ್ನು ಎದುರಿಸಲು ಸಾಧ್ಯವೇ ಇಲ್ಲ. ಹೆಚ್ಚೆಂದರೆ ಅಲ್ಲೊಂದು ಇಲ್ಲೊಂದು ನೌಕರಿ ಗಿಟ್ಟಿಸಬಹುದು. ಆದರೆ ಈಗಾಗಲೇ ಹೈಟೆಕ್ ಪದವೀಧರ ನಿರುದ್ಯೋಗಿ ಸೈನ್ಯ ಬೆಳೆಯುತ್ತಲೇ ಇದೆ. ಈಗ ಇಂಗ್ಲೀಷ್ ಕಲಿಯಲಾರಂಭಿಸಿ, ಪದವಿ ಪಡೆದ ಪರಿಣಿತರಾಗುವ ಹೊತ್ತಿಗೆ ಈ ತಂತ್ರಜ್ಞಾನವೇ ಕಾಲಬಾಹೀರವಾಗಿರಬಹುದು. ಆದ್ದರಿಂದ ಈ ಜಾಗತೀಕರಣ, ಹೈಟೆಕ್‌ಗಳು ಎಲ್ಲದಕ್ಕೂ ಮದ್ದಲ್ಲ. ಬದಲಾಗಿ ರೋಗವೂ ಹೌದು.

ಆತಂಕಕಾರಿಯಾದ ವಿಷಯವೆಂದರೆ ಮೂರ್ತಿ, ಸಿಂಗ್ ರಂತಹವರ ವಾದಗಳಿಗೆ ನೆಲಬಿಟ್ಟ ನಾಯಕರು ತಲೆ ಅಲ್ಲಾಡಿಸುತ್ತಿದ್ದಾರೆ. 'ಕನ್ನಡ ಮಾಧ್ಯಮ ಶಾಲೆ' ಎಂಬ ಬೋರ್ಡಿದ್ದ ಸುಮಾರು ಒಂದು ಸಾವಿರ ಶಾಲೆಗಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಲು ಸರಕಾರ ಉತ್ಸುಕವಾಗಿದೆಯೆಂಬ ವರದಿ. ಮೂಲತಃ ಕನ್ನಡದ ಬೋರ್ಡ್ ಇದ್ದರೂ ಅಲ್ಲಿ ಬೋಧಿಸುತ್ತಿದ್ದುದೇ ಇಂಗ್ಲೀಷ್ ಮಾಧ್ಯಮದಲ್ಲಿ ಎಂಬ ಶಂಕೆ ಎತ್ತಲಾಗಿದೆ. ಒಂದೆಡೆ ಕನ್ನಡ ಪರ ಘೋಷಣೆ ಹೊರಡಿಸುವ ಸರಕಾರವು ಈ ಸಂಚಿನಲ್ಲಿ ಭಾಗಿಯಾಗಿರುವುದು ತುಂಬಾ ಗಂಡಾಂತರಕಾರಿಯಾದುದು. ಈ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು. ನಿಲುವು ಬದಲಾಯಿಸಿಕೊಳ್ಳಬೇಕು. ಈ ಮೆದುಳಿನ ವಸಾಹತುಶಾಹಿ ಕರಣದ ವಿರುದ್ಧ ಧ್ವನಿಯೆತ್ತಬೇಕಿದೆ.

ಸಂಘ ಪರಿವಾರದ ಕುಕೃತ್ಯ ಬಯಲು

ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದ ಪಾತಕಿಗಳು

ಬಾಬರಿ ಮಸೀದಿಯ ವಿವಾದದ ನೆಪದಲ್ಲಿ ಮುಸ್ಲಿಂ ಜನಸಮುದಾಯದ ಮೇಲೆ ನೇರವಾಗಿ ದಾಳಿ, ಅಪಪ್ರಚಾರ, ದ್ವೇಷದ ಬೆಂಕಿ ಹತ್ತಿ ಉರಿಯುವಂತೆ ಮಾಡಿ ಅಧಿಕಾರದ ಗದ್ದುಗೆಯನ್ನು ಹಿಡಿದಿರುವ ಸಂಘ ಪರಿವಾರ ಈಗ ಕ್ರಿಶ್ಚಿಯನ್‌ರನ್ನು ಗುರಿ ಮಾಡಿಕೊಂಡಿದೆ.

ಸುಮಾರು ಕಳೆದೆರಡು ವರ್ಷಗಳಿಂದ ದೇಶದ ಹಲವೆಡೆ ಕ್ರಿಶ್ಚಿಯನ್ನರ ಮೇಲೆ ಪ್ರಾರಂಭವಾದ ಹಲ್ಲೆ, ಅಪಪ್ರಚಾರಗಳ ಮುಂದುವರಿಕೆಯೋ ಎಂಬಂತೆ ಇತ್ತೀಚೆಗೆ ಗೋವಾ, ಕರ್ನಾಟಕ, ಆಂಧ್ರಗಳಲ್ಲಿನ ಚರ್ಚ್‌ಗಳ ಮೇಲೆ ಬಾಂಬ್ ದಾಳಿ ನಡೆಯಿತು. ಮಥುರಾದಲ್ಲಿ ಒಬ್ಬ ಪಾದ್ರಿ, ಜಲಂಧರ್‌ನಲ್ಲಿ ಒಬ್ಬ ಬೈಬಲ್ ಪ್ರಚಾರಕನನ್ನು ಕೊಲೆ ಮಾಡಲಾಯಿತು. ಈ ಎಲ್ಲಾ ಘಟನೆಗಳಿಗೂ ನೇರ ಹೊಣೆ ಸಂಘ ಪರಿವಾರವೇ ಆಗಿದ್ದರೂ, ಈ ದೇಶದ ಗೃಹಮಂತ್ರಿ ಐ.ಎಸ್.ಐ. ನ ಕೈವಾಡದ ಶಂಕೆ ವ್ಯಕ್ತಪಡಿಸಿದ್ದಾರೆ. ದೇಶದ ಸಮಸ್ತ ಜನತೆಯ ಸ್ವಾಸ್ಥ್ಯ ರಕ್ಷಿಸುವ ನೈತಿಕ ಹೊಣೆ ಹೊತ್ತಿರುವ ಪ್ರಧಾನಿ ಮತಾಂತರದ ಬಗ್ಗೆ ಚರ್ಚೆಯಾಗಬೇಕು ಎಂದು ಬೊಗಳಿದ್ದಾರೆ.

ಅಡ್ವಾನಿಯ ಹೇಳಿಕೆಯು ಹಸೀ ಸುಳ್ಳು ಎಂದು ಸಾಬೀತು ಪಡಿಸುವ ಘಟನೆ ಬೆಳಗಾವಿ ಜಿಲ್ಲೆಯ ಸವದತ್ತಿ ಪಟ್ಟಣದಲ್ಲಿ ನಡೆದಿದೆ. ಅಲ್ಲಿರುವ ಕ್ರಿಶ್ಚಿಯನ್ ಆಶ್ರಮವೊಂದರ ಮೇಲೆ ದಾಳಿ ಮಾಡಿರುವ ಸಂಘ ಪರಿವಾರದ ಕಾರ್ಯಕರ್ತರು ರೆಡ್‌ಹ್ಯಾಂಡ್ ಆಗಿ ಸವದತ್ತಿ ಪೋಲೀಸರಿಗೆ ಕೈಗೆ ಸಿಕು ಬಿದ್ದು ನಮ್ಮನ್ನು ಪ್ರಚೋದಿಸಿದ್ದು ಸವದತ್ತಿಯ ಆರೆಸ್ಸೆಸ್ ಮುಖಂಡ ನರಸಿಂಹ ಕುಲಕರ್ಣಿ ಎಂದು ಹೇಳಿಕೆಯನ್ನು ನೀಡಿದ್ದಾರೆ.

ಘಟನೆಯ ವಿವರ

ಸವದತ್ತಿ ಪಟ್ಟಣದ ಹೊರವಲಯದಲ್ಲಿ ಕ್ರಿಶ್ಚಿಯನ್ ಆಶ್ರಮವೊಂದಿದೆ. ಭವ್ಯವಾದ ಶಿಲುಬೆ ಗುರುತಿರುವ ಕಟ್ಟಡ ಚರ್ಚ್ ಆಗಿರದೇ ಸಾಮಾನ್ಯವಾದ ಮನೆಯಂತಿರುವ ಇದು ಕ್ರೈಸ್ತ ವಿರಕ್ತ ಆಶ್ರಮವಾಗಿದೆ. ಆಶ್ರಮದಲ್ಲಿರುವ ಕೆಲವರ ಹೊಟ್ಟೆ ಪಾಡಿಗೆ ಸ್ವಲ್ಪ ಭೂಮಿಯನ್ನು ಈ ಆಶ್ರಮ ಹೊಂದಿದೆ. ರಸ್ತೆ ಪಕ್ಕದ ಬಯಲು ಜಮೀನಿನಲ್ಲಿ ಇರುವ ಈ ಆಶ್ರಮದ ಒಳಹೊಕ್ಕೊಡನೆ ಕಾಣಬರುವುದು ಓಂ ಚಿನ್ಹೆ. ಆ ಶ್ರಮದ ಸ್ವಾಮಿ (ಪಾದ್ರಿಗಳು ಅಲ್ಲ) ಗಳು ಕಾವಿ ಬಟ್ಟೆ ಧರಿಸುವ ಸಂಪ್ರದಾಯ ಇಲ್ಲಿದೆ. ಬೆಳಗಾವಿ ಜಿಲ್ಲೆಯ ದೇಶನೂರು (ಬೈಲಹೊಂಗಲ ತಾಲೂಕು) ತೋರಣಗಟ್ಟಿ (ರಾಮದುರ್ಗ ತಾಲ್ಲೂಕು) ಗಳಲ್ಲೂ ಈ ಆಶ್ರಮಗಳಿವೆ. ಧರ್ಮದ ಸೋಗಿನಲ್ಲಿ ತಮ್ಮ ಆಸ್ತಿ ವಿಸ್ತರಿಸುವ ಅಥವಾ ಮತಾಂತರ ಕೆಲಸ ಮಾಡುವ ಯಾವುದೇ ಮಹತ್ವಾಕಾಂಕ್ಷೆಯನ್ನು ಹೊಂದಿಲ್ಲದ ಈ ಮಠ ಯೇಸುವಿನ ಪ್ರಾರ್ಥನೆಯಲ್ಲೇ ಮಗ್ನರಾಗುವುದು ಮಾತ್ರ ಅವರ ಕೆಲಸ.

ವಿ.ಪಿ.ಕುಲಕರ್ಣಿ

ಸವದತ್ತಿಯಲ್ಲಿರುವ ಮಠ ಸುಮಾರು 30 ವರ್ಷಗಳಿಂದ ಅಸ್ತಿತ್ವದಲ್ಲಿ ಇದೆ. ಈಗಿರುವ ಯೇಸುದಾಸ್ ಎಂಬ ಸ್ವಾಮಿ ಸುಮಾರು 25-26 ವರ್ಷದ ಯುವಕ ಬಡಮಕ್ಕಳಿಗೆ ಉಚಿತವಾಗಿ ಪಾಠ ಹೇಳುತ್ತಾ ಲಭ್ಯವಿಲ್ಲದ ಪಠ್ಯ ಪುಸ್ತಕವುಳ್ಳ ಪುಟ್ಟ ಲೈಬ್ರರಿಯನ್ನು ಹೊಂದಿದ್ದಾರೆ.

ಈ ನಿರುಪದ್ರವಿ ಸ್ವಾಮಿ ಮತ್ತು ಆಶ್ರಮದ ಮೇಲೆ ಸ್ಥಳೀಯ ಆರ್.ಎಸ್.ಎಸ್. ನವರ ಕೆಂಗೆಣ್ಣು ಬಿತ್ತು. ನರಸಿಂಹ ಕುಲಕರ್ಣಿ ಎಂಬಾತ ಯುವಕರ ಮನಸ್ಸುಗಳಿಗೆ ಕೊಳ್ಳಿ ಇಡುವ ಕೆಲಸ ಮಾಡಿದ್ದಾನೆ.

ಯೇಸುದಾಸನು ಮತಾಂತರ ಮಾಡುತ್ತಿದ್ದಾನೆ, ಆತನನ್ನು ನಿಯಂತ್ರಿಸಿ ಎಂದು ನರಸಿಂಹ ಕುಲಕರ್ಣಿ ನೀಡಿದ ಅದೇಶವನ್ನು ಆರು ಜನ ಯುವಕರು ಪಾಲಿಸಿ ಯೇಸುದಾಸರನ್ನು ಹೊಡೆದು ಹಾಕಲು ಕಳೆದ ತಿಂಗಳು (23-6-2000) ರಾತ್ರಿ 10 ಘಂಟೆಗೆ ಫೋನ್ ಮತ್ತು ವಿದ್ಯುತ್ ಸಂಪರ್ಕ ಕತ್ತರಿಸಿ ಹಾಕಿ ಕತ್ತಲಲ್ಲಿ ಯೇಸುದಾಸರ ಬಯಲು ಆಶ್ರಮದಲ್ಲಿ ಜಮೀನಿನ ಕೆಲಸ ನೋಡಿಕೊಳ್ಳುತ್ತಿರುವ ಕಲ್ಲೊಳ್ಳೆಪ್ಪ ಉಪ್ಪಾರ ಎಂಬಾತನನ್ನು ಗಾಯಗೊಳಿಸಿ ಓಡಿಹೋಗಿದ್ದಾರೆ. ಭೀತರಾದ ಯೇಸುದಾಸರು ಘಟನೆಯ ಬಗ್ಗೆ ಪೋಲಿಸರಲ್ಲಿ ದೂರು ಸಲ್ಲಿಸಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಸಬ್‌ಇನ್‌ಸ್ಪೆಕ್ಟರ್ ನಾಗರಾಜ್ ದಾಳಿಗೆ ಕಾರಣರಾದ ಆರೂ ಜನರನ್ನು ಬಂಧಿಸಿದ್ದಾರೆ. ಅವರು ನರಸಿಂಹ ಕುಲಕರ್ಣಿ ಹೇಳಿಕೆ ಮೇರೆಗೆ ನಾವು ಈ ಕೆಲಸ ಮಾಡಿದ್ದೇವೆ ಎಂದು ತಿಳಿಸಿದೊಡನೆ ಡಾಕ್ಟರನೆಂದು ಹೇಳಿಕೊಳ್ಳುವ ಈ ಕೇಡಿಯನ್ನು ಬಂಧಿಸಿದ್ದಾರೆ.

ಮರುದಿನ ಸವದತ್ತಿಯ ಬಿಜೆಪಿ ಮುಖಂಡರು ಈ ಘನಕಾರ್ಯಮಾಡಿರುವ ಪುಂಡರನ್ನು ಜಾಮೀನಿನ ಮೇಲೆ ಬಿಡಿಸಿಕೊಂಡಿದ್ದಾರೆ.

ಈ ವಿವರ ತಿಳಿದ ಕೂಡಲೇ ಎಸ್.ಎಚ್. ಕಪ್ಪಣವರ, ಜಿ.ಬಿ.ತೊರಗಲ್, ವಿ.ಪಿ.ಕುಲಕರ್ಣಿ ಸಿಪಿಐ(ಎಂ) ನಿಯೋಗ ಇವರನ್ನೊಳಗೊಂಡ ದಾಸ್‌ರನ್ನು ಸಂತೈಸಿತು. ತಮ್ಮ ಮೇಲೆ ನಡೆದ ಹಲ್ಲೆಯ ಯತ್ನದ ಬಗ್ಗೆ ತೀವ್ರ ಆಘಾತಕ್ಕೆ ಒಳಗಾದಂತೆ ಕಂಡು ಬಂದ ಸ್ವಾಮಿ ಯೇಸುದಾಸ ಘಟನೆ ನೆನಸಿಕೊಂಡರೆ ಭೀತರಾಗುತ್ತಾರೆ.

ಈ ಮೂವತ್ತು ವರ್ಷಗಳಲ್ಲಿ ನಾವು ಒಂದೇ ಒಂದು ಮತಾಂತರ ಮಾಡಿದ ಉದಾಹರಣೆ ಇಲ್ಲ ಎನ್ನುವ ಸ್ವಾಮಿ ಯೇಸುದಾಸ ತಮ್ಮ ಮತ ಆಚರಣೆ ಮಾಡುತ್ತಾ ಇರುವುದು ಅಪರಾಧವೇ? ಎಂದು ಪ್ರಶ್ನಿಸಿದರು.

ಅವರಿಗೆ, ಸವದತ್ತಿ ಘಟನೆ ಏಕಾಏಕಿ ನಡದದ್ದು ಅಲ್ಲ. ದೇಶಾದ್ಯಂತ ನಡೆದಿರುವ ಇದೇ ರೀತಿಯ ದುಷ್ಕೃತ್ಯಗಳ ಮುಂದುವರಿಕೆಯಷ್ಟೇ ಎಂದು ಹೇಳಿ ನಾವು ನಿಮ್ಮೊಂದಿಗೆ ಇದ್ದೇವೆ ಎಂದು ಧೈರ್ಯ ಹೇಳಿ ನಿಯೋಗ ಹಿಂತಿರುಗಿತು.

ಮರುದಿನ ಎಲ್ಲ ವಿವರಗಳನ್ನು ಹೊಂದಿರುವ, ಘಟನೆಯ ಖಂಡಿಸುವ ಪತ್ರಿಕಾ ಹೇಳಿಕೆಯನ್ನು ಎಲ್ಲಾ ಪ್ರಮುಖ ಪತ್ರಿಕೆಗಳಿಗೂ ಕಳಿಸಿಕೊಟ್ಟರೂ ಪ್ರಜಾವಾಣಿ ಮಾತ್ರ ಪ್ರಕಟಿಸಿದೆ. ಈ ರೀತಿಯ ದುಷ್ಕೃತ್ಯಗಳ ಬಗ್ಗೆ ನಮ್ಮ ಪತ್ರಿಕಾ ಮಾಧ್ಯಮಗಳು ಹೊಂದಿರುವ ಗಂಭೀರತೆ ಯಾವ ರೀತಿಯದ್ದು ಎಂದು ಇದರಿಂದ ಕಂಡಬರುತ್ತದೆ.

ನಿರುಪದ್ರವಿ ಕ್ರೈಸ್ತ ಆಶ್ರಮದ ಮೇಲೆ ದಾಳಿ ಮಾಡಿ ಸಿಕ್ಕಿ ಬಿದ್ದಿರುವ ಸಂಘ ಪರಿವಾರದ ಕಾರ್ಯಕರ್ತರನ್ನು ರಕ್ಷಿಸಲು ಮುಂದಾಗುವಿರಾ? ಅಥವಾ ದೇಶದಲ್ಲಿ ಅಲ್ಪಸಂಖ್ಯಾತರು ಸುರಕ್ಷಿತರಾಗಿದ್ದಾರೆ ಎಂದು ತಿಪ್ಪೆ ಸಾರಿಸುವುದನ್ನು ಮುಂದುವರೆಸುವಿರಾ? ಎಂಬುದು ಅಡ್ವಾಣಿಗೆ ನಮ್ಮ ಪ್ರಶ್ನೆಯಾಗಿದೆ. ವಾಜಪೇಯಿ ಅಧಿಕಾರದಲ್ಲಿ ಭದ್ರವಾದೊಡನೆ ಈ ರೀತಿಯ ಹಲ್ಲೆಗಳು ಹೆಚ್ಚುತ್ತಿರುವುದು ಹಾಗೂ ಇದಕ್ಕೆ ಕೇಸರಿ ಬಣ್ಣ ಕಾರಣವಾಗಿದೆ ಎಂಬುದು ಸವದತ್ತಿಯ ಘಟನೆಯಲ್ಲಿ ಸಾಬೀತಾದಂತಾಗಿದೆ. ○

ಸಂಘಪರಿವಾರದ ಕುಕೃತ್ಯ ಬಯಲು
ಕ್ರಿಶ್ಚಿಯನ್ ಸಂಸ್ಥೆಯ ಮೇಲೆ ಧಾಳಿ-ಸಿಪಿಐ(ಎಂ) ಖಂಡನೆ

ಇದೇ ತಿಂಗಳ ಜೂನ್ 8 ರಂದು ಗುಲ್ಬರ್ಗಾ ಜಿಲ್ಲೆಯ ವಾಡಿಯ ಚರ್ಚ್ ನಲ್ಲಿ ಬಾಂಬ್ ಸ್ಫೋಟಗೊಂಡ ಬೆನ್ನಲ್ಲೇ ಬೆಳಗಾಂ ಜಿಲ್ಲೆಯ ಸವದತ್ತಿಯಲ್ಲಿರುವ ಕ್ರಿಶ್ಚಿಯನ್ ಸಂಸ್ಥೆಯ ಮೇಲೆ ಸಂಘಪರಿವಾರದವರು ಜೂನ್ 23 ರಂದು ರಾತ್ರಿ ಹಲ್ಲೆ ನಡೆಸಿದುದನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯು ಖಂಡಿಸುತ್ತದೆ.

ಆರೆಸ್ಸೆಸ್‌ನವರೇ ನೇರವಾಗಿ ಸಿಕಿ ಬಿದ್ದಿರುವಾಗಲೂ ಕೂಡ ಈ ಘಟನೆಗಳು ಐಎಸ್‌ಐ ಕೈವಾಡವೇ ಎಂದು ಅದ್ವಾನಿ, ವೆಂಕಯ್ಯನಾಯ್ಡು, ಯಡಿಯೂರಪ್ಪ ಮೊದಲಾದ ಬಿಜೆಪಿ ಮುಖಂಡರು ಜನರ ಕಣ್ಣಿಗೆ ಮಣ್ಣೆರಚಲು ಪ್ರಯತ್ನಿಸುವರೆ?

ಕಾನೂನು ಸುವ್ಯವಸ್ಥೆ ರಾಜ್ಯ ಸರ್ಕಾರಗಳ ಹೊಣೆ ಎಂದು ಜಾರಿಗೊಳ್ಳುವ ಹಾಗೂ ಇವು ಆಕಸ್ಮಿಕ ಅಪರೂಪದ ಘಟನೆಗಳು ಎಂದು ಬಣ್ಣಿಸುವ ಪ್ರಧಾನಿಯವರ ಹೇಳಿಕೆಗಳೇ ಈ ಕುಕೃತ್ಯಗಳಿಗೆ ನೇರಬೆಂಬಲವಾಗಿದೆ. ಬಿಜೆಪಿ ತನ್ನ ಪರಿವಾರದ ಮೇಲೆ ರಾಜಕೀಯ ಹತೋಟಿ ಸ್ಥಾಪಿಸಿ ಈ ಕೃತ್ಯಗಳನ್ನು ನಿಲ್ಲಿಸಬೇಕು ಮತ್ತು ಹೊಣೆಗಾರ ರಾಜಕೀಯ ಪಕ್ಷವೆಂದು ಸಾಬೀತು ಮಾಡಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಒತ್ತಾಯಿಸಿದೆ.

ಹುಬ್ಬಳ್ಳಿಯ ಚರ್ಚ್ ಮೇಲೆ ಬಾಂಬ್ ದಾಳಿ : ಸಂಘ ಪರಿವಾರದ ಕೈವಾಡ?

ಜುಲೈ 8,2000 ರಂದು ಮುಂಜಾನೆ ನಸುಕಿನಲ್ಲಿ ಹುಬ್ಬಳ್ಳಿಯ ಸೈಂಟ್ ಜಾನ್ ಲೂಥರ್ನ್ ಚರ್ಚ್‌ನ ಮೇಲೆ ಬಾಂಬ್ ದಾಳಿ ನಡೆಸಿ ಕ್ರಿಶ್ಚಿಯನ್ ಸಮುದಾಯದವರ ಪೂಜಾ ಮಂದಿರಕ್ಕೆ ಅಪಾರ ಹಾನಿ ಮಾಡಿರುವುದು ತೀವ್ರ ಅಘಾತಕಾರಿ ದುರ್ಘಟನೆಯಾಗಿದೆ. ಇತ್ತೀಚೆಗೆ ದೇಶದ ವಿವಿಧ ಪ್ರದೇಶಗಳಲ್ಲಿ, ನೆರೆಯ ರಾಜ್ಯಗಳಾದ ಗೋವಾ ಮತ್ತು ಆಂಧ್ರ ಪ್ರದೇಶ ಮತ್ತು ನಮ್ಮ ರಾಜ್ಯದ ಗುಲ್ಬರ್ಗ ಜಿಲ್ಲೆಯ ವಾಡಿಯಲ್ಲಿ, ಜುಲೈ 8 ರಂದು ಹುಬ್ಬಳ್ಳಿಯಲ್ಲಿ ಮತ್ತು ಪುನಃ ಮರುದಿನ ಬೆಂಗಳೂರಿನಲ್ಲಿ ಕ್ರಿಶ್ಚಿಯನ್ ಮಿಶನರಿಗಳು ಮತ್ತು ಅವರ ಚರ್ಚ್‌ಗಳ ಮೇಲೆ ನಡೆದ ಸರಣಿ ಬಾಂಬ್ ದಾಳಿ ನಡೆಯುತ್ತಿದ್ದ ಭಯೋತ್ಪಾದಕ ಕೃತ್ಯಗಳನ್ನು ಪಾಕಿಸ್ತಾನದ ಗುಪ್ತಚರ ಸಂಸ್ಥೆ (ಐ.ಎಸ್.ಐ) ಕೈವಾಡ ಎಂದು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಗೃಹಮಂತ್ರಿ ಎಲ್.ಕೆ.ಅಡ್ವಾಣಿ, ಯುವಜನ ಹಾಗೂ ಸಾಂಸ್ಕೃತಿಕ ಸಚಿವ ಅನಂತಕುಮಾರ್ ಮತ್ತಿತರ ಬಿಜೆಪಿ ವಕ್ತಾರರು ವ್ಯಾಖ್ಯಾನಿಸುತ್ತಿರುವುದು ಸೋಜಿಗದ ವಿಷಯವಾಗಿದೆ. ಹಾಗೆಯೇ ಇದು ಬೇಜವಾಬ್ದಾರಿಯಿಂದ ಕೂಡಿದೆ. ಜನಾಭಿಪ್ರಾಯದ ದಿಕ್ಕುತಪ್ಪಿಸುವ ದುರುದ್ದೇಶಪೂರಿತವಾಗಿದೆ.

ಹುಬ್ಬಳ್ಳಿಯಲ್ಲಾದ ಬಾಂಬ್ ಸ್ಫೋಟದ ಘಟನೆಯು ಕೆಲವೇ ತಿಂಗಳುಗಳ ಹಿಂದೆ ಹುಬ್ಬಳ್ಳಿಯ ನೇಕಾರ ಓಣಿಯಲ್ಲಿಯ ಒಬ್ಬ ಪಾದರರ ಮನೆಯ ಮೇಲೆ ಕೆಲವು ದುಷ್ಕರ್ಮಿಗಳು ದಾಳಿಯನ್ನು ಮಾಡಿ ಬೈಬಲ್‌ನ್ನು ಹರಿದು ಫಾದರರನ್ನು ಹಿಂಸಿಸಿದ್ದರು. ಹಾಗೆಯೇ ಡಾ. ಪಾಲ್ ಹುಬ್ಬಳ್ಳಿಯಲ್ಲಿ ತಮ್ಮ ಸ್ವಾಸ್ಥ್ಯದ ಕೂಟವನ್ನು ಏರ್ಪಡಿಸುವುದಕೋಸ್ಕರ ಅವರ ಪ್ರಚಾರಕರು ನೃಪತುಂಗ ಬೆಟ್ಟದಲ್ಲಿ ಪ್ರಚಾರ ಮಾಡುತ್ತಿದ್ದಾಗ ಅವರ ಜೀಪಿಗೆ ಬೆಂಕಿ ಹಚ್ಚಿ ಅದರಲ್ಲಿದ್ದ ಪ್ರಚಾರಕರನ್ನು ಹಿಂಸಿಸಲಾಗಿತ್ತು. ಕಳೆದ ವರ್ಷ ಹುಬ್ಬಳ್ಳಿಯ ಓರ್ವ ಕ್ರಿಶ್ಚಿಯನ್ ಶಿಕ್ಷಕಿಯ ಮೇಲೆ ಸ್ಥಳೀಯರಿಂದ ದಬ್ಬಾಳಿಕೆ ನಡೆದು ಅವರು ಧರ್ಮ ಪ್ರಚಾರ ಮಾಡುತ್ತಿದ್ದಾರೆ ಎಂಬ ಆಪಾದನೆಯನ್ನು ಹೊರಿಸಿ ಹಿಂಸಿಸಲಾಗಿತ್ತು. ಹುಬ್ಬಳ್ಳಿ-ಧಾರವಾಡ ಮಹಾನಗರದ ಕ್ರಿಶ್ಚಿಯನ್ ಕಾನ್ವೆಂಟ್‌ಗಳ ಮಕ್ಕಳಿಗೆ ನಿಶ್ಚಿತ ಸಮವಸ್ತ್ರದ ಬದಲಿಗೆ ಹಿಂದೂ ಹೆಣ್ಣು ಮಕ್ಕಳಂತೆ ಲಂಗ ಅಥವಾ ಸೀರೆ ಧರಿಸಬೇಕು, ಬಳೆ ತೊಡಬೇಕು, ಕುಂಕುಮ ಇಡಬೇಕು, ಇತ್ಯಾದಿ ಕಟ್ಟಳೆಗಳನ್ನು ಕೆಲವು ಮೂಲಭೂತವಾದಿಗಳು ಆಡಳಿತದವರ ಮೇಲೆ ಹೇರಲು ಹವಣಿಸಿದ್ದರು. ಈ ಹಿಂದಿನ ಎಲ್ಲಾ ದುರ್ಘಟನೆಗಳಲ್ಲಿ ಬಿಜೆಪಿ-ಸಂಘ ಪರಿವಾರದ ವಿಶ್ವಹಿಂದೂ ಪರಿಷತ್ ಹಾಗೂ ಭಜರಂಗ ದಳದವರ ಕೈವಾಡವಿದ್ದುದು ಬಹಿರಂಗಗೊಂಡಿದೆ.

ಸಿ.ಆರ್.ಭಟ್

ಮೇಲಾಗಿ ಕೆಲಕಾಲದ ಹಿಂದೆ ಭಾರತಕ್ಕೆ ಪೋಪ್ ಭೇಟಿಯನ್ನು ವಿರೋಧಿಸಿರುವುದು, ಮತಾಂತರ ಮತ್ತು ಇತರ ಧಾರ್ಮಿಕ ವಿಷಯಗಳ ಕುರಿತು ದೇಶಾದ್ಯಂತ ಅಲ್ಪಸಂಖ್ಯಾತರ ಮೇಲೆ ಮುಖ್ಯವಾಗಿ ಕ್ರಿಶ್ಚಿಯನ್ ಮಿಶನರಿಗಳ ಮೇಲೆ ನೇರವಾಗಿ ಹಾಗೂ ಸಾಮೂಹಿಕ ಮಾಧ್ಯಮಗಳ ಮೂಲಕ ನಿರಂತರ ಉದ್ರೇಕಕಾರಿ ಹೇಳಿಕೆಗಳನ್ನು ನೀಡುತ್ತಿದ್ದು ಅವರ ವಿರುದ್ಧ ದ್ವೇಷಪೂರಿತ ಪ್ರಚಾರಾಂದೋಲನವನ್ನು ಬಿಜೆಪಿ-ಸಂಘ ಪರಿವಾರದವರು ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಗುಜರಾತಿನಲ್ಲಿ ಬರಗಾಲಪೀಡಿತ ಪ್ರದೇಶಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲಿಕ್ಕೂ ಕ್ರಿಶ್ಚಿಯನ್ ಮಿಶನರಿಗಳಿಗೆ ಈ ಸಂಘ ಪರಿವಾರದವರು ತಡೆಯೊಡ್ಡುತ್ತಿದ್ದಾರೆಂದು ಇತ್ತೀಚೆಗೆ ತಿಳಿದುಬಂದಿದೆ. ಈ ಎಲ್ಲಾ ಹಿನ್ನೆಲೆಗಳನ್ನು ಗಮನಿಸಿದರೆ, ಹುಬ್ಬಳ್ಳಿಯಲ್ಲಿ ಈ ತಿಂಗಳ 8ರಂದು ಚರ್ಚ್‌ನ ಮೇಲೆ ನಡೆದ ಬಾಂಬ್ ದಾಳಿಯಲ್ಲಿ ಬಿಜೆಪಿ-ಸಂಘ ಪರಿವಾರದವರ ನೇರ ಕೈವಾಡವಿರುವುದನ್ನು ಬಲವಾಗಿ ಸಂಶಯಿಸಬೇಕಾಗಿದೆ.

ಶತಮಾನಗಳಿಂದ ಎಲ್ಲಾ ಧರ್ಮದವರು ಭಾರತದಲ್ಲಿ ತಮ್ಮ ಧರ್ಮ ಪ್ರಚಾರ ನಡೆಸುತ್ತಿದ್ದಾರೆ. ಹಾಗೆಯೇ ಭಾರತದ ಹಿಂದು, ಬೌದ್ಧ, ಜೈನ, ಸಿಖ್ ಧರ್ಮಗಳೂ ವಿದೇಶಗಳಲ್ಲಿ ಪ್ರಚಾರವಾಗುತ್ತಿವೆ. ಧಾರ್ಮಿಕ, ಶ್ರದ್ಧೆ, ಪೂಜಾ ಸ್ವಾತಂತ್ರ್ಯವನ್ನು ಪ್ರತಿ ಒಬ್ಬ ನಾಗರಿಕನ ಮೂಲಭೂತ ಹಕ್ಕಾಗಿ ಭಾರತ ಸಂವಿಧಾನ ಗೌರವಿಸಿದೆ. ಕ್ರಿಶ್ಚಿಯನ್ನರು ತಮ್ಮ ದೇಶದಲ್ಲಿ ಸುಮಾರು 2000 ವರ್ಷಗಳಿಂದ ಇದ್ದಾರೆ. ಆದರೆ ಅವರ ಜನಸಂಖ್ಯೆ ಭಾರತದ ಒಟ್ಟು ಜನಸಂಖ್ಯೆಯ ಶೇ 2 ಕ್ಕಿಂತ ಮೀರಿಲ್ಲ; ಮುಸ್ಲಿಮರು ನಮ್ಮ ದೇಶದಲ್ಲಿ 1000 ವರ್ಷಗಳಿಂದ ಇದ್ದಾರೆ. ಆದರೆ, ಅವರ ಸಂಖ್ಯೆಯೂ ದೇಶದ ಒಟ್ಟು ಸಂಖ್ಯೆಯ ಶೇ 15 ಕ್ಕಿಂತ ಹೆಚ್ಚಾಗಲಿಲ್ಲ. ಕ್ರಿಶ್ಚಿಯನ್ ಮಿಶನರಿಗಳು ಭಾರತದಲ್ಲಿ ಶತಮಾನಗಳಿಂದ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ, ನೋಬೆಲ್ ಪ್ರಶಸ್ತಿ ಹಾಗೂ ಭಾರತ ರತ್ನ ವಿಜೇತೆ ಮದರ್ ಥೆರೆಸಾ ಅವರು ಸೇರಿದಂತೆ, ಅವಿಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಅಲ್ಪಸಂಖ್ಯಾತರಾದ ಕ್ರಿಶ್ಚಿಯನ್ ಹಾಗೂ ಮುಸ್ಲಿಮರು ಸಾಮಾಜಿಕ, ಆರ್ಥಿಕ ಶೋಷಣೆಗಳಿಗೆ ಒಳಗಾದ ದಲಿತರ ಹಾಗೂ ಮಹಿಳೆಯರ ಭದ್ರತೆಗೆ ಮತ್ತು ಹಿತರಕ್ಷಣೆಗೆ ಎಲ್ಲ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳು ಮುಂದಾಗಬೇಕಾಗಿದೆ. ಇದು ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಗಳ ಅವಿಭಾಜ್ಯ ಅಂಗವಾಗಿದೆ.

ಹುಬ್ಬಳ್ಳಿಯಲ್ಲಿ ಚರ್ಚ್‌ನ ಮೇಲೆ ಬಾಂಬ್ ದಾಳಿ ನಡೆದ ಮರುದಿನವೇ ಸಿಪಿಐ(ಎಂ) ಧಾರವಾಡ ಜಿಲ್ಲಾ ಕಾರ್ಯದರ್ಶಿ ಸೈಂಟ್

ಪುಟ 10 ಕ್ಕೆ

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಜುಲೈ ಎರಡನೇವಾರ ಆಷಾಢಮಾಸದ ಮಳೆ ಧೋ ಎಂದು ಸುರಿದಿತ್ತು ಆದರೆ ಇಲ್ಲಿನ ಮಳೆ ಮಲೆನಾಡು, ಕರಾವಳಿಯ ಹಾಗಲ್ಲ. ಹಾಗೆ ಬಂದು ಹೀಗೆ ಹೋಗುವ ಅತಿಥಿಯಂತೆ ಈ ಮಳೆರಾಯ. ಜುಲೈ 12 ರವರೆಗೆ ಮಳೆ ಇತ್ತು. ಆದರೆ ಮರುದಿನ ಮಳೆ ನಿಂತಿತ್ತು. ವಾತಾವರಣ ಪ್ರಶಾಂತವಾಗಿತ್ತು. ಕುಳಿರ್ಗಾಳಿ ತಣ್ಣನೆ ಬೀಸುತ್ತಿತ್ತು.

ಇಂಥ ಮುದ ನೀಡುವ ವಾತಾವರಣದಲ್ಲಿ ನಗರದ ಹೃದಯಭಾಗದಲ್ಲಿ ಕೆಂಪು ಪತಾಕೆಗಳು ಗಾಳಿಯಲ್ಲಿ ಪಟ ಪಟನೆ ಹಾರುತ್ತಿದ್ದವು. ಕರ್ನಾಟಕದ ದುಡಿಯುವ ವರ್ಗದ ಪ್ರತಿನಿಧಿಗಳು ಸಂಭ್ರಮದಿಂದ ಇಲ್ಲಿ ನೆರೆದಿದ್ದರು. ತಮ್ಮ ದೈನಂದಿನ ಹೋರಾಟಕ್ಕೆ ಮಾರ್ಗದರ್ಶನ ಸ್ಫೂರ್ತಿ ನೀಡುವ ಸಂಘಟನೆಯ ರಾಜ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಅವರಿಲ್ಲಿ ಬಂದು ಸೇರಿದ್ದರು.

ಅತ್ತ ಮಂಡ್ಯ ಜಿಲ್ಲೆಯಲ್ಲಿ ಹೀನಾಯ ಜೀತ ಪದ್ಧತಿಯ ಅಸ್ತಿತ್ವ ಅನಾವರಣಗೊಳ್ಳುತ್ತಿದ್ದಾಗ ಇತ್ತ ದುಡಿಯುವ ಜನವಿಭಾಗದ ಜೀವನ ಪರಿಸ್ಥಿತಿಯ ಸುಧಾರಣೆಗಾಗಿ ಸಮಾಲೋಚಿಸಲು ಸಿಐಟಿಯು 8ನೇ ರಾಜ್ಯ ಸಮ್ಮೇಳನ ಅಣಿಯಾಗಿತ್ತು.

13 ರಂದು ಪುರಭವನದಲ್ಲಿ ಉದ್ಘಾಟನೆ ಅಧಿವೇಶನ ಹಿರಿಯ ಮುಖಂಡ ಸೂರ್ಯನಾರಾಯಣರಾವ್ ಕೆಂಪು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನಕ್ಕೆ ನಾಂದಿ. ಆ ನಂತರ ಭರ್ತಿಯಾಗಿದ್ದ ಪುರಭವನ ಸಭಾಂಗಣದಲ್ಲಿ ಇ.ಎಂ.ಎಸ್. ವೇದಿಕೆ ಮೇಲೆ ಉದ್ಘಾಟನೆ ಅಧಿವೇಶನ.

ಭಾರತದ ದುಡಿಯುವ ವರ್ಗದ ಹೋರಾಟಕ್ಕೆ ಸಮರ್ಪಕ ಮಾರ್ಗದರ್ಶನ ಮಾಡುತ್ತಾ ಬಂದಿರುವ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಇದರ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಡಾ। ಎಂ.ಕೆ. ಪಂಧೆ ಸಮ್ಮೇಳನವನ್ನು ಉದ್ಘಾಟಿಸಿದರು.

ಜಾಗತೀಕರಣ ಮತ್ತು ಉದಾರೀಕರಣ ಕಾರ್ಮಿಕ ವರ್ಗವನ್ನು ಮತ್ತು ಇಡಿಯಾಗಿ ಜನಸಮುದಾಯವನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ಪರಿಯನ್ನು ಕಾಂ. ಪಂಧೆ ತಮ್ಮ ಭಾಷಣದಲ್ಲಿ ಎಳೆ ಎಳೆಯಾಗಿ ಬಿಡಿಸಿಟ್ಟರು.

ಡ.ಬ್ಯ್ಯೂ.ಆರ್. ವರದರಾಜನ್, ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ರಾಜ್ಯ ಮುಖಂಡರಾದ ಸಿ.ನಂಜುಂಡಪ್ಪ ಮತ್ತು ರಾಜ್ಯ ಸಮಿತಿಯ ಪದಾಧಿಕಾರಿಗಳು ವೇದಿಕೆ ಮೇಲೆ ಇದ್ದರು. ಐಟಕ್ ಮುಖಂಡ ಎಂ.ಸಿ. ನರಸಿಂಹನ್ ಶುಭಕೋರಿ ಮಾತನಾಡಿದರು.


ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಬೆಂಬಲ ಕುಮ್ಮಕ್ಕು ಪಡೆದ ಧಾರ್ಮಿಕ ಮುಲಭೂತವಾದಿ ಶಕ್ತಿಗಳು ಜನತೆಯ ಒಗ್ಗಟ್ಟನ್ನು ಮುರಿಯಲು ಯತ್ನಿಸುತ್ತಿವೆ. ಇದರ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಪ್ರತ್ಯೇಕತಾದಿ ಛಿದ್ರಕಾರಿ ಶಕ್ತಿಗಳಿಂದ ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ಬಂದಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಳೆದ ಸಮ್ಮೇಳನದ ನಂತರದ ಅವಧಿಯಲ್ಲಿ ಅಗಲಿದ ಹಿರಿಯ ನೇತಾರರಾದ ಕಾಮ್ರೇಡ್ ಇ.ಎಂ.ಎಸ್. ನಂಬೂದರಿಪಾಡ್, ಬಿನಯ್ ಚೌಧರಿ, ವಿಮಲಾ ರಣದಿವೆ ಮತ್ತು .ಪಿ. ರಾಮಚಂದ್ರರಾವ್ ಹಾಗೂ ಇತರ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ ಇತ್ತಿಚಿನ ದಿನಗಳಲ್ಲಿ ಕ್ರೈಸ್ತರು ಹಾಗೂ ಅವರ ಪ್ರಾರ್ಥನ ಸ್ಥಳಗಳ ಮೇಲೆ ಮತಾಂಧರು ನಡೆಸುತ್ತಿರುವ ಹಲ್ಲೆಯನ್ನು ಖಂಡಿಸುವ ಗೊತ್ತುವಳಿಯನ್ನು ಉದ್ಘಾಟನಾ ಅಧಿವೇಶನ ಅಂಗೀಕರಿಸಿತು.

ಒಂದಲ್ಲ, ಎರಡಲ್ಲ; 700 ಕೋಟಿ ರೂಪಾಯಿ. ಹೌದು ಪಿಎಫ್‌ನಲ್ಲಿ ಸುಮಾರು 70,000 ಕೋಟಿ ರೂಪಾಯಿ ಇದೆ. ಅದರ ಶೇಕಡ 1 ಅಂದರೆ 700 ಕೋಟಿ ರೂಪಾಯಿ ಆಗುತ್ತದೆ ಎಂದು ಡಾ। ಪಂಧೆ ಅಂಕಿ ಅಂಶ ಸಹಿತ ತಿಳಿಸಿದರು. ಬಡ್ಡಿದರ ಕಡಿತ ಮಾಡುವ ಕೇಂದ್ರದ ನೀತಿಯ ವಿರುದ್ಧ ರಾಷ್ಟ್ರವ್ಯಾಪಿಯಾಗಿ ಎಲ್ಲಾ ಕಾರ್ಮಿಕ ಸಂಘಟನೆಗಳು ಐಕ್ಯ ಹೋರಾಟ ನಡೆಸಲು ಸಿಐಟಿಯು ಮುತುವರ್ಜಿ ವಹಿಸಲಿದೆ ಎಂದು ಪಂಧೆ ಪ್ರಕಟಿಸಿದರು.

. ಇಪಿಎಫ್ ಮತ್ತು ಪಿಂಚಣಿ ನಿಧಿಯ ಹಣವನ್ನು ಷೇರು ಮಾರುಕಟ್ಟೆಯಲ್ಲಿ



ಸಮ್ಮೇಳನ ಉದ್ಘಾಟಿಸಿದ ಕಾಂ. ಪಂಧೆ

ಐಕ್ಯ ಹೋರಾಟ: ಜಾಗತೀಕರಣ ರೋಗಕ್ಕೆ ಮದ್ದು - ಡಾ. ಪಂಧೆ

ಜಾಗತೀಕಣವನ್ನು 'ಸಿಟು' ವಿರೋಧಿಸುತ್ತಿರುವುದಕ್ಕೆ ಬಂದಿರುವ ಟೀಕೆಯನ್ನು ಪ್ರಸ್ತಾಪಸಿ ಪಂಧೆ ಸಿಟು ಜಾಗತೀಕರಣಕ್ಕೆ ವಿರೋಧಿಯಲ್ಲ ಎಂದು ಸ್ಪಷ್ಟಪಡಿಸಿದರು. ವಾಸ್ತವವಾಗಿ ಜಾಗತೀಕರಣದ ಮೊದಲ ಘೋಷಣೆ ಮೊಳಗಿದ್ದೇ ಕಾರ್ಮಿಕ ವರ್ಗದಿಂದ ಎಂದವರು ನೆನಪಿಸಿದರು., 'ಜಗತ್ತಿನ ಕಾರ್ಮಿಕ ವರ್ಗವೇ ಒಂದಾಗಿ ಎಂಬ ಘೋಷಣೆಯನ್ನು ನೆನಪಿಗೆ ತಂದರು.

ಜನತೆಯ ಜೀವನ ಉತ್ತಮಗೊಳ್ಳಲು ಸಾಮಾಜಿಕ ಜಾಗತೀಕರಣವಾಗಬೇಕಿದೆ. ಮಹಿಳೆ ಪುರುಷರ ಸಮಾನತೆಯ ಜಾಗತೀಕರಣ ವಾಗಬೇಕಿದೆ. ಆದರೆ ಈಗೇನಾಗುತ್ತಿದೆ? ಹಣಕಾಸಿನ ಜಾಗತೀಕರಣ ಆಗುತ್ತಿದೆ, ನಿರುದ್ಯೋಗದ ಜಾಗತೀಕರಣವಾಗುತ್ತಿದೆ, ಬಂಡವಾಳದ ಜಾಗತೀಕರಣ ಆಗುತ್ತಿದೆ. ಅಂತರ್ರಾಷ್ಟ್ರೀಯ ಹಣಕಾಸು ನಿಧಿ, ವಿಶ್ವಬ್ಯಾಂಕ್, ವಿಶ್ವವಾಣಿಜ್ಯ ಸಂಘಟನೆ (ಡಬ್ಲ್ಯೂಟಿಓ) ಗಳ ಮಾರ್ಗದರ್ಶನ ದಲ್ಲಿ ನಡೆಯುತ್ತಿರುವ ಈ ಜಾಗತೀಕರಣ ಶೋಷಣೆಯ ಸಾಧನವಾಗಿದೆ ಎಂದು ಕಾಂ। ಪಂಧೆ ವಿವರಿಸಿದರು.

ಒಟ್ಟಿನಲ್ಲಿ ಜನತೆಯ ಅಭಿವೃದ್ಧಿ ಆಗುವಂಥ ಜಾಗತೀಕರಣ ಬೇಕೆ ಹೊರತು ಶೋಷಣೆಯನ್ನು ಗಟ್ಟಿಗೊಳಿಸುವ ಜಾಗತೀಕರಣ ಅಲ್ಲ ಎಂದರು. ಮಾನವ ಭವಿಷ್ಯವನ್ನು ಹಾಳುಮಾಡುತ್ತಿರುವ ಉದ್ಯೋಗರಹಿತ ಬೆಳವಣಿಗೆಯನ್ನು ನಾವು ವಿರೋಧಿಸುತ್ತೇವೆ ಎಂದರು.

ಕೇಂದ್ರ ಹಣಕಾಸು ಸಚಿವರ ಹಲವಾರು ನಿರ್ಧಾರಗಳನ್ನು, ಕ್ರಮಗಳನ್ನು ಡಾ.ಪಂಧೆ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಷೇರುಮಾರುಕಟ್ಟೆ ಸ್ಥಿರವಾಗಿದ್ದರೆ ಆರ್ಥಿಕತೆ ಸ್ಥಿರವಾಗಿರುತ್ತದೆ ಎಂಬ ಯಶವಂತ ಸಿನ್ಹಾರ ಧೋರಣೆಯನ್ನು ಟೀಕಿಸಿದರು. ಬಹುರಾಷ್ಟ್ರೀಯ ಕಂಪೆನಿಗಳಿಗೆ ಅನುಕೂಲವಾಗುವಂತೆ ದುಡಿಯುವ ಜನರನ್ನು ಶೋಷಣೆಗೆ ಒಳಪಡಿಸಲು ಸಹಾಯಕವಾಗುವಂತೆ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಸರಕಾರ ಹೊರಟಿದೆ ಎಂದು ಹೇಳಿದರು.

ಮುಕ್ತ ವಾಣಿಜ್ಯದ ಮಾತು ಆಡುತ್ತಿರುವ ಬಂಡವಾಳಶಾಹಿ ದೇಶಗಳು ವಾಸ್ತವವಾಗಿ ತಮ್ಮ ಅನುಕೂಲಕ್ಕಾಗಿ ಈ ನೀತಿಯನ್ನು ಬಳಸುತ್ತಿದ್ದು ಬಡದೇಶಗಳ ವಾಣಿಜ್ಯ ವ್ಯವಹಾರ ಕುಸಿಯುವಂತೆ ಮಾಡಿ ಅಲ್ಲಿನ ಆರ್ಥಿಕತೆಯನ್ನೇ ಹಾಳುಮಾಡುತ್ತಿವೆ ಎಂದು ತಿಳಿಸಿದರು.

ವಿಜ್ಞಾನ,ತಂತ್ರಜ್ಞಾನದ ಕ್ರಾಂತಿಯನ್ನು ಜನತೆಯ ಹಿತಕ್ಕಾಗಿ ಬಳಸಲು ಬಂಡವಾಳಶಾಹಿ ವ್ಯವಸ್ಥೆ ವಿಫಲವಾಗಿದೆ ಎಂದರು.

ಸ್ವದೇಶಿ ಮಂತ್ರ, ವಿದೇಶಿ ವ್ಯಾಮೋಹ

ಕೇಂದ್ರ ಸರಕಾರ ಸ್ವದೇಶಿ ಮಂತ್ರ ಹಾಡುತ್ತಿದೆ. ಆದರೆ ಅದರ ವ್ಯಾಮೋಹ ಪೂರ್ಣ ವಿದೇಶಗಳ ಮೇಲೆ ಎಂದು ಪಂಧೆ ವ್ಯಂಗ್ಯವಾಡಿದರು.

ಸಾರ್ವಜನಿಕ ವಲಯದ ಉದ್ದಿಮೆಗಳಿಂದ ಬಂಡವಾಳ ವಾಪಸು ಪಡೆಯುವ ನೀತಿಯನ್ನು ಬದಲಾಯಿಸಿ ಸಾರಾಸಗಟಾಗಿ ಅವುಗಳನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಾರಾಟ ಮಾಡುವ ಕೇಂದ್ರದ ನಿರ್ಧಾರ ಅಪಾಯಕಾರಿ ಯಾದುದು ಎಂದು ಹೇಳಿದರು. ಸರಕಾರಿ ಉದ್ದಿಮೆಗಳನ್ನು ಖರೀದಿಸಲು ಭಾರತದ ಬಂಡವಾಳಶಾಹಿಗಳು ಸಿದ್ಧರಿಲ್ಲ ಹಾಗಾಗಿ ವಿದೇಶಿ ಕಂಪೆನಿಗಳಿಗೆ ಮಾರುತ್ತೇವೆ ಎಂಬ ಕೇಂದ್ರ ಸರಕಾರದ ನಿಲುವಿನಿಂದ ಅಪಾಯಕಾರಿ ಸನ್ನಿವೇಶ ಸೃಷ್ಟಿಯಾಗಿದೆ ಎಂದರು.

ಈ ಎಲ್ಲಾ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗದ ಮತ್ತು ಇತರೇ ಜನವಿಭಾಗಗಳ ಐಕ್ಯ ಹೋರಾಟವಷ್ಟೇ ಸರಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ತಡೆಯಲು, ಜಾಗತೀಕರಣ-ಉದಾರೀಕರಣದ ದುರಂತ ದಿಂದ ಜನತೆಯನ್ನು ಪಾರು ಮಾಡಲು ಇರುವ ಮಾರ್ಗ ಎಂದು ಕಾಮ್ರೇಡ್ ಪಂಧೆ ಘೋಷಿಸಿದರು.

ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷ ಎಸ್ ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಕೇಂದ್ರ ಸಮಿತಿ ನಾಯಕ ಸ್ವಾಗತ ಸಮಿತಿ ಅಧ್ಯಕ್ಷ, ವಕೀಲ ವೆಂಕಟೇಶ ಗೌಡ ಸ್ವಾಗತಿಸಿದರು. ಮೀನಾಕ್ಷಿ ಸುಂದರಂ ಧನ್ಯವಾದ ಅರ್ಪಿಸಿದರು.

ಖಾಸಗೀಕರಣ ವಿರುದ್ಧ 3 ದಿನ ಮುಷ್ಕರ

ಸಾರ್ವಜನಿಕ ವಲಯದ ಉದ್ಯಮಗಳನ್ನು ಮಾರಾಟ ಮಾಡುವುದೂ ಸೇರಿದಂತೆ ಖಾಸಗೀಕರಣ ಮತ್ತು ಸರಕಾರದ ಇತರ ಹಲವಾರು ಕಾರ್ಮಿಕ ವಿರೋಧಿ ಜನವಿರೋಧಿ ನೀತಿಗಳನ್ನು ಪ್ರತಿಭಟಿಸಿ ಸಾರ್ವಜನಿಕರಂಗದ ನೌಕರರು ಆಗಸ್ಟ್ 17 ರಿಂದ 19 ರವರೆಗೆ ಮುಷ್ಕರ ನಡೆಸಲಿದ್ದಾರೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಪಂಧೆ ಘೋಷಿಸಿದರು. ಕೇಂದ್ರ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಒಕ್ಕೂಟ ಈ ಹೋರಾಟಕ್ಕೆ ಕರೆ ನೀಡಿದೆ ಎಂದು ಸಿಐಟಿಯು ರಾಜ್ಯ ಸಮ್ಮೇಳನವನ್ನು ಉದ್ಘಾಟಿಸುವ ಸಂದರ್ಭದಲ್ಲಿ ಪಂಧೆ ತಿಳಿಸಿದರು.

ರಾಜ್ಯದಲ್ಲಿಯೂ ಈ ಮುಷ್ಕರವನ್ನು ಯಶಸ್ವಿಗೊಳಿಸಲು ಸಿದ್ಧತೆ ನಡೆಸಬೇಕೆಂದು ಅವರು ಸೂಚಿಸಿದರು. ಮುಷ್ಕರ ಹೋರಾಟಗಳ ಮಹತ್ವವೇನು ಎಂಬುದನ್ನು ಅವರು ಈ ಸಂದರ್ಭದಲ್ಲಿ ವಿಶ್ಲೇಷಿಸಿದರು.

ಕಾರ್ಮಿಕ ವರ್ಗದ ಸಿಐಟಿಯು ಹೋರಾಟ ಇಲ್ಲವಾಗಿದ್ದರೆ ಅದೆಷ್ಟೋ ಕಾರ್ಮಿಕ ವಿರೋಧಿ ನೀತಿಗಳು ಅನುಷ್ಠಾನ ಗೊಳ್ಳುತ್ತಿದ್ದವು. ಇಂಥ ಹೋರಾಟಗಳ ಪರಿಣಾಮವಾಗಿ ಅವುಗಳ ಅನುಷ್ಠಾನದ ಗತಿ ನಿಧಾನವಾಗಿದೆ, ಅದು ಕೂಡ ಹೋರಾಟದ ಸಾಧನೆಯೇ ಎಂದು ನುಡಿದರು.

ಈಗ ಕೂಡ ಆರ್ಥಿಕ ಸ್ವಾವಲಂಬನೆಯನ್ನು ನಾಶಮಾಡಿ ದೇಶವನ್ನು ವಿನಾಶದ ಅಂಚಿಗೆ ತಳ್ಳುತ್ತಿರುವ ಸರಕಾರದ ನೀತಿಗಳನ್ನು ಸೋಲಿಸಲು ದುಡಿಯುವ ವರ್ಗದ ಐಕ್ಯ ಹೋರಾಟದಿಂದ ಸಾಧ್ಯ ಎಂಬ ವಿಶ್ವಾಸವನ್ನು ಭಾರೀ ಕರತಾಡನದ ನಡುವೆ ವ್ಯಕ್ತಪಡಿಸಿದರು.

ದುಡಿವ ಜನಕ್ಕೆ ಸರಕಾರದಿಂದ 700 ಕೋಟಿ ರೂಪಾಯಿ ವಂಚನೆ

.ನೌಕರರ ಭವಿಷ್ಯ ನಿಧಿ (ಇ.ಪಿ.ಎಫ್) ಗೆ ನೀಡುವ ಬಡ್ಡಿ ದರದಲ್ಲಿ ಶೇಕಡ ಒಂದರಷ್ಟು (ಶೇ1) ಕಡಿತ ಮಾಡುವ ಕೇಂದ್ರ ಹಣಕಾಸು ಸಚಿವರ ನಿರ್ಧಾರವನ್ನು ಕಾ. ಪಂಧೆ ಉಗ್ರವಾಗಿ ವಿರೋಧಿಸಿದರು.

ಭವಿಷ್ಯ ನಿಧಿ ಹಣ ನೌಕರರು, ಕಾರ್ಮಿಕರು ಶ್ರಮದಿಂದ ದುಡಿದ ಹಣ. ಅದರ ಬಡ್ಡಿದರವನ್ನು ಇಳಿಸುವ ಅಧಿಕಾರ ಸರಕಾರಕ್ಕೆ ಇಲ್ಲ ಎಂದು ಅವರು ವಿವರಿಸಿದರು.

ಬಡ್ಡಿಯನ್ನು ಶೇ.1 ಕಡಿತ ಮಾಡಿದರೆ ದುಡಿಯುವ ವರ್ಗಕ್ಕೆ ಆಗುವ ನಷ್ಟ ಎಷ್ಟು ಗೊತ್ತೇ?

ತೊಡಗಿಸುವುದಾಗಿ ಹಣ ಕಾಸು ಮಂತ್ರಿ ಹೇಳಿರುವುದಕ್ಕೆ ಪಂಧೆ ಕಳವಳ ವ್ಯಕ್ತಪಡಿಸಿದರು ಇದು ಅಪಾಯಕಾರಿ ನಿಲುವು ಎಂದರು. ಇದರ ವಿರುದ್ಧವೂ ಸಂಘಟಿತ ಹೋರಾಟ ಅಗತ್ಯ ಎಂದರು.

ಕಾರ್ಮಿಕ ರಂಗದ ಕೋಮುವಾದೀಕರಣ

ಶಿಕ್ಷಣ, ಸಾಹಿತ್ಯ, ಇತಿಹಾಸ ಕಲೆ ಇವುಗಳ ಕೋಮುವಾದೀಕರಣ; ಅಥವಾ ಕೇಸರೀಕರಣ; ಯತ್ನದ ನಂತರ ಇದೀಗ ಕಾರ್ಮಿಕ ರಂಗದ ಸರದಿ!

ಕೇಂದ್ರ ಸರಕಾರ ರಚಿಸಿರುವ ಎರಡನೇ ಕಾರ್ಮಿಕ ಆಯೋಗದ ಸ್ವರೂಪವನ್ನು ನೋಡಿದರೆ ಸರಕಾರದ ಉದ್ದೇಶ ಸ್ಪಷ್ಟವಾಗುತ್ತದೆ.

ಆಯೋಗದ ಒಂಬತ್ತು ಸದಸ್ಯರ ಪೈಕಿ ಐದು ಜನರು ಕಟ್ಟಾ ಆರ್ ಎಸ್.ಎಸ್.ನವರು ಈ ಚಡ್ಡಿಗಳಿಗೆ ಕಾರ್ಮಿಕ ಆಯೋಗದಲ್ಲೇನು ಕೆಲಸ?

ಇನ್ನು ಇದರ ಏಕೈಕ ಪೂರ್ಣ ಕಾಲದ ಸದಸ್ಯ ಮಾಲಿಕರ ಸಂಘಗಳ ಮುಖಂಡರಾಗಿದ್ದವರು ಇದರ ಅಧ್ಯಕ್ಷ ರವೀಂದ್ರ ವರ್ಮಾ ಎಂಬ ನಿವೃತ್ತ ಉನ್ನತ ಅಧಿಕಾರಿ. 1980 ರ ದಶಕದಲ್ಲಿ ಕಾರ್ಮಿಕ ವಿರೋಧಿ ಮಸೂದೆಯನ್ನು ರೂಪಿಸಿದ ಸೂತ್ರಧಾರಿ ಈ ವರ್ಮಾ ಅಂದ ಮೇಲೆ ಈ ಎರಡನೇ ಕಾರ್ಮಿಕ ಆಯೋಗದ ಉದ್ದೇಶವೇನು, ಅದು ಏನನ್ನು ಸಾಧಿಸೀತು ಎಂಬುದನ್ನು ಊಹಿಸುವುದು ಕಷ್ಟವಲ್ಲ.

ಕಾಂ. ಪಂಧೆ ತಮ್ಮ ಭಾಷಣದಲ್ಲಿ ಈ ವಿವರ ನೀಡಿದರು.

ಆಸ್ಟ್ರೇಲಿಯಾ ಸೇಬು! ನೆದರ್ಲೆಂಡ್ ತುಪ್ಪ!!

ಆಸ್ಟ್ರೇಲಿಯಾದ ಸೇಬು ಹಣ್ಣು, ನೆದರ್ಲೆಂಡಿನ ತುಪ್ಪ ಭಾರತಕ್ಕೆ ಬರುತ್ತದೆ! ನಮ್ಮ ದೇಶದಲ್ಲಿ ಇದಕ್ಕೇನು ಕೊರತೆಯೇ? ಖಂಡಿತಾ ಇಲ್ಲ. ನಮ್ಮಲ್ಲಿ ಸೇಬು ರಫ್ತು ಮಾಡುವಷ್ಟು ಪ್ರಮಾಣದಲ್ಲಿ ಬೆಳೆಯುತ್ತದೆ. ಹೈನು ಸಂಪತ್ತು ಕೂಡ ಹೇರಳವಾಗಿಯೇ ಇದೆ.

ಆದರೆ ಕೇಂದ್ರ ಸರಕಾರದ ನೀತಿಯಿಂದಾಗಿ ಆಸ್ಟ್ರೇಲಿಯನ್ ಸೇಬು ತಿನ್ನುವ ನೆದರ್ಲೆಂಡ್‌ನ ತುಪ್ಪ ಸವಿಯುವ ಭಾಗ್ಯ ಭಾರತೀಯರಿಗೆ ಬಂದಿದೆ!


ಸರಕಾರದ ಮುಕ್ತ ಲೈಸೆನ್ಸ್ (OGL) ನೀತಿ ಇದಕ್ಕೆ ಅವಕಾಶ ಕಲ್ಪಿಸಿದೆ. ಓಜಿಎಲ್ ಪ್ರಕಾರ 700ಕ್ಕೂ ಹೆಚ್ಚು ವಸ್ತುಗಳು ಭಾರತದ ಮಾರುಕಟ್ಟೆಯನ್ನು ಮುಕ್ತವಾಗಿ ಪ್ರವೇಶಿಸಲು ಅವಕಾಶವಿದೆ. ಹಪ್ಪಳ ಸಂಡಿಗೆ ಉಪ್ಪಿನಕಾಯಿ, ಬೀಡಿ ಕೂಡ ಈ ಪಟ್ಟಿಯಲ್ಲಿದೆ ಎಂದು ಪಂಧೆ ತಿಳಿಸಿದರು.



ಉದ್ಘಾಟನಾ ಅಧಿವೇಶನದಲ್ಲಿ ನೆರೆದಿದ್ದ ಕಾರ್ಮಿಕರು

ಅವಸಾನದ ಅಂಚಿನಲ್ಲಿ ಕರ್ನಾ

ಬೆಂಗಳೂರಿನಲ್ಲಿ ಕೈಗಾರಿಕೆಗಳ ಸ್ಥಿತಿ



ಉದಾರೀಕರಣ, ಜಾಗತೀಕರಣದ ದುಷ್ಪರಿಣಾಮಗಳು ಇಂದು ಮನೆಯ ಬಾಗಿಲಿಗೆ ಬಂದಿದೆ. ಬೆಂಗಳೂರು ಭಾರತದ ಪ್ರಮುಖ ಕೈಗಾರಿಕಾ ಕೇಂದ್ರ. ಜಾಗತೀಕರಣ, ಉದಾರೀಕರಣದ ಪರಿಣಾಮವಾಗಿ ಬೆಂಗಳೂರಿನ ಸ್ವದೇಶಿ ಕಾರ್ಖಾನೆಗಳು ಮುಚ್ಚುತ್ತಿವೆ, ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಈ ಬಗ್ಗೆ ಕಾರ್ಮಿಕ ನಾಯಕ ಇ.ಕೆ.ಎನ್.ರಾಜನ್‌ರವನ್ನು ಐಕ್ಯರಂಗ ಸಂದರ್ಶಿಸಿದಾಗ ಅವರು ವ್ಯಕ್ತಪಡಿಸಿದ ಚಿಂತನೆಗಳು

ವಿದೇಶಿ ಬಂಡವಾಳದಿಂದ ಬೆಂಗಳೂರಿನಲ್ಲಿ ಕೈಗಾರಿಕೆಗಳು ಆರಂಭವಾಗಿವೆಯೇ? ಅದರ ಪರಿಣಾಮವೇನು?

ನರಸಿಂಹರಾವ್ ಸರ್ಕಾರ ಆರಂಭ ಮಾಡಿ ಹಾಗೂ ವಾಜಪೇಯಿ ಸರ್ಕಾರ ಮುಂದುವರೆಸುತ್ತಿರುವ ಹೊಸ ಆರ್ಥಿಕ ನೀತಿಯಿಂದ ಭಾರತದ ಸಣ್ಣ ಕೈಗಾರಿಕೆಗಳು ಮುಚ್ಚಿಹೋಗುತ್ತಿವೆ.

ಹೊಸ ಆರ್ಥಿಕ ನೀತಿಯಿಂದ ದೇಶಕ್ಕೆ ವಿದೇಶಿ ಬಂಡವಾಳ ಹರಿದು ಬರುತ್ತದೆ. ಆರೋಗ್ಯಕರ ಸ್ಪರ್ಧೆ ಏರ್ಪಡುತ್ತದೆ, ದೇಶೀಯ ಕೈಗಾರಿಕೆಗಳು ಉತ್ತಮಗೊಳ್ಳುತ್ತವೆ. ಉದ್ಯೋಗ ಅವಕಾಶಗಳು ಹೆಚ್ಚುತ್ತವೆ ಎಂದು ಉದಾರೀಕರಣದ ಪ್ರತಿಪಾದಕರು ಪ್ರಚಾರ ಮಾಡುತ್ತಾ ಬಂದರು. ಭಾರತದ ಕೈಗಾರಿಕೋದ್ಯಮಿಗಳು, ಮಧ್ಯಮ ವರ್ಗದ ಜನತೆ, ಕಾರ್ಮಿಕರು ಇದನ್ನು ನಂಬಿದರು. ಆದರೆ ಹೊಸ ಆರ್ಥಿಕ ನೀತಿ ಜಾರಿಯ ನಂತರದ ಭಾರತದ ಕೈಗಾರಿಕಾ ಪರಿಸ್ಥಿತಿ ವ್ಯತಿರಿಕ್ತವಾಗಿದೆ.

ಇಂದು ದೇಶದಲ್ಲಿ ವಿದೇಶಿ ಬಂಡವಾಳದಿಂದ ಭಾರೀ ಕೈಗಾರಿಕೆಗಳು ಆರಂಭವಾಗಿಲ್ಲ. ಉದ್ಯೋಗ ಅವಕಾಶಗಳು ಹೆಚ್ಚಿಲ್ಲ. ಬದಲಾಗಿ ಇಂದು ಮುಕ್ತ ಆಮದು ನೀತಿಯಿಂದ ವಿದೇಶಿ ವಸ್ತುಗಳು ನೇರವಾಗಿ ದೇಶಕ್ಕೆ ಯಾವ ಅಡೆತಡೆ ಇಲ್ಲದೆ ಬರುತ್ತಿರುವುದರಿಂದ ಸಾವಿರಾರು ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಮುಖ್ಯವಾಗಿ ಬೆಂಗಳೂರಿನಲ್ಲಿ ಏಷ್ಯಾದ ಅತೀ ದೊಡ್ಡ ಕೈಗಾರಿಕಾ ಪ್ರದೇಶವಾದ ಪೀಣ್ಯದಲ್ಲಿ ಶೇ 40 ರಷ್ಟು ಕೈಗಾರಿಕೆಗಳು ಮುಚ್ಚಿವೆ. ಬೆಂಗಳೂರು ಭಾರತದ ಕೇಂದ್ರ ಸಾರ್ವಜನಿಕ ಉದ್ಯಮಗಳ ಕೇಂದ್ರ. ಸಾರ್ವಜನಿಕ ಕೈಗಾರಿಕೆಗಳಲ್ಲಿ ಶೇ ಇಂತಿಷ್ಟು ಬಿಡಿ ಭಾಗಗಳ ಬೇಡಿಕೆಯನ್ನು ಸಣ್ಣ ಕೈಗಾರಿಕೆಗಳಿಗೆ ಕೊಡಬೇಕೆಂದು ನಿಯಮವಿದೆ. ಈ ರೀತಿ ಕೇಂದ್ರ ಸಾರ್ವಜನಿಕ ಉದ್ಯಮಗಳಿಗೆ ಪೂರಕವಾಗಿ ಬೆಂಗಳೂರಿನಲ್ಲಿ ಸಣ್ಣ ಕೈಗಾರಿಕೆಗಳು ಬೆಳೆದವು. ಆದರೆ ಇಂದು ಕೇಂದ್ರ ಸಾರ್ವಜನಿಕ ಉದ್ಯಮಗಳ ಪರಿಸ್ಥಿತಿ ಹದಗೆಟ್ಟಿದೆ. ಸಹಜವಾಗಿ ಇಂದು ನೂರಾರು ಸಣ್ಣ ಕೈಗಾರಿಕೆಗಳು ಮುಚ್ಚಿವೆ. ಹೆಚ್.ಎಂ.ಟಿ. ಸುತ್ತ ಇದ್ದ ಹೆಚ್.ಎಂ.ಟಿ. ಆನ್ಸಿಲರಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಎಲ್ಲಾ ಕೈಗಾರಿಕೆಗಳು ಮುಚ್ಚಿವೆ. ಕೋಲಾರ ಕೈಗಾರಿಕಾ ಪ್ರದೇಶದ ನೂರಾರು ಸಣ್ಣ ಕಾರ್ಖಾನೆಗಳು ಮುಚ್ಚಿವೆ. ಅನೇಕ ಸಣ್ಣ ಕೈಗಾರಿಕೆಗಳ ಮಾಲೀಕರು ಕಾರ್ಖಾನೆಗಳನ್ನು ಮುಚ್ಚಿ ನಾಪತ್ತೆಯಾಗಿರುತ್ತಾರೆ. ಕಾರ್ಖಾನೆಗಳನ್ನು ಬ್ಯಾಂಕ್‌ನವರು ಹಾಗೂ ಹಣಕಾಸು ಸಂಸ್ಥೆಗಳು ಮುಟ್ಟುಗೋಲು ಹಾಕಿಕೊಂಡಿವೆ. ಇವುಗಳಲ್ಲಿ ದುಡಿಯುತ್ತಿರುವ ಸಾವಿರಾರು ಕಾರ್ಮಿಕರು ಸಂಬಳವಿಲ್ಲದೆ, ಯಾವುದೇ ಪರಿಹಾರವಿಲ್ಲದೆ ಬೀದಿ ಪಾಲಾಗಿದ್ದಾರೆ. ಇವರ ಭವಿಷ್ಯ ನಿಧಿ ಹಣ ಕೂಡ ಮಾಲೀಕರು ಪಾವತಿಸಿರುವುದಿಲ್ಲ.

ಇಂದು ವಿದೇಶಿ ಬಂಡವಾಳ ಕೇವಲ ಕೆಲವು ಸೀಮಿತ ರಂಗದಲ್ಲಿ ಮಾತ್ರ ಬಂದಿದೆ. ಮುಖ್ಯವಾಗಿ ತಂಪು ಪಾನೀಯಗಳು, ಸಿದ್ಧ ಆಹಾರ ತಯಾರಿಕಾ ರಂಗದಲ್ಲಿ ವಿದೇಶಿ ಬಂಡವಾಳ ಬೆಳೆದಿದೆ. ಇವುಗಳಲ್ಲಿ ಮುಖ್ಯವಾಗಿ ವಿಶ್ವದ ಏಕಸ್ವಾಮ್ಯ ಬಂಡವಾಳಗಾರ ಸಂಸ್ಥೆಗಳು ದೇಶದ ಈ ರಂಗದಲ್ಲಿ ಬಂಡವಾಳ ತೊಡಗಿಸಿವೆ. ಇವರ ಉತ್ಪನ್ನಗಳ ಮಾರಾಟಕ್ಕೆ ಇಂದು ಪ್ರಸಾರ ಮಾಧ್ಯಮ ಮುಖ್ಯವಾಗಿ ದೂರದರ್ಶನ ಹೆಚ್ಚಿನ ರೀತಿಯಲ್ಲಿ ಸಹಾಯವಾಗಿ ನಿಂತಿದೆ. ವಿದೇಶದಲ್ಲಿರುವ ಕೊಳ್ಳು-ಬಾಕ ಸಂಸ್ಕೃತಿ ನಮ್ಮ ದೇಶದಲ್ಲೂ ಬೆಳೆದಿದೆ. ಬೆಂಗಳೂರಿನ ಹಳೆಯ ತಂಪುಪಾನೀಯ ತಯಾರಿಸುವ 'ಬೆಂಗಳೂರು ಸಾಫ್ಟ್ ಡ್ರಿಂಕ್ಸ್'(ಟೊರಿನೋ) ಕಾರ್ಖಾನೆ ವಿದೇಶಿ ಕಂಪನಿಗಳ ಎದುರು ಸೋತು ಮುಚ್ಚಿದೆ. ಬೆಂಗಳೂರಿನ ಅತಿ ಹಳೆಯ ಹಾಗೂ ಪ್ರಮುಖ ಸಂಸ್ಥೆಯಾದ ಚ್ಯೂಯಿಂಗ್ ಗಂ ತಯಾರಿಸುವ ಎನ್.ಪಿ.(ನ್ಯಾಷನಲ್ ಪ್ರಾಡೆಕ್ಟ್) ಕಾರ್ಖಾನೆ 10 ವರ್ಷಗಳ ಮೊದಲು ತನ್ನ ಉತ್ಪನ್ನವನ್ನು 43 ದೇಶಗಳಿಗೆ ರಫ್ತು ಮಾಡುತ್ತಿತ್ತು. ಆದರೆ ಇಂದು ಅಮೆರಿಕಾದ ರಿಗ್ಲೇನ್ ಹಾಗೂ ಸ್ವೀಡನ್ನಿನ ಪ್ರೆಪೆಟ್ ಚ್ಯೂಯಿಂಗ್ ಗಂ ಕಂಪನಿಗಳು ದೇಶಕ್ಕೆ ಕಾಲಿಟ್ಟ ನಂತರ ಇವರ ಎದುರು ಸ್ಪರ್ಧಿಸಲಾರದೆ ಬೆಂಗಳೂರಿನ ಎನ್.ಪಿ.ಕಾರ್ಖಾನೆ ಮುಚ್ಚಿದೆ. ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಅಮೆರಿಕಾದ ರಿಗ್ಲೇನ್ ಕಂಪನಿ ತನ್ನ ತಯಾರಿಕಾ ಘಟಕವನ್ನು ಬೆಂಗಳೂರಿನಲ್ಲಿ ಆರಂಭಿಸಿದೆ. ಮೊದಲಿಗೆ ತನಗೆ ಬೇಕಾದ ಸಕ್ಕರೆ, ಗಂ, ಸ್ಟಾರ್ಚ್ ಅನ್ನು ಅಸ್ಟ್ರೇಲಿಯದಿಂದ ತರಿಸುತ್ತಿತ್ತು. ಹಾಗೂ ಇದೇ ರೀತಿ ಪ್ರಚಾರ ಮಾಡುತ್ತಿತ್ತು. ಆದರೆ ಈಗ ಕಾರ್ಮಿಕರ ಹೇಳಿಕೆ ಪ್ರಕಾರ ದೇಶಿಯ ಸಕ್ಕರೆಯನ್ನೇ ಬಳಸುತ್ತಿದ್ದಾರೆ. ಆದರೆ ವಿದೇಶಿ ಕಚ್ಚಾ ವಸ್ತು ಬಳಸುವುದಾಗಿ ಪ್ರಚಾರ ಮಾಡುತ್ತಿದ್ದಾರೆ.


ಆಧುನಿಕ ತಂತ್ರಜ್ಞಾನವನ್ನು ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆಯೇ? ಉತ್ಪಾದನೆ ಮಾಡಲಾಗುತ್ತಿದೆಯೇ? ಉದ್ಯೋಗ ಸೃಷ್ಟಿಸಲಾಗಿದೆಯೇ?

ರಿಗ್ಲೇನ್ ಕಾರ್ಖಾನೆಯಲ್ಲಿರುವ ಯಂತ್ರೋಪಕರಣಗಳು ಈ ಹಿಂದೆ ಥಾಯ್ಲೆಂಡ್‌ನಲ್ಲಿದ್ದ ಕಾರ್ಖಾನೆಯದಾಗಿದ್ದು ಅಲ್ಲಿ ಕಾರ್ಖಾನೆ ಮುಚ್ಚಿದ ನಂತರ ಆ ಯಂತ್ರೋಪಕರಣಗಳನ್ನು ಭಾರತಕ್ಕೆ ತರಲಾಗಿದೆ. ಇಂದು ಅನೇಕ ವಿದೇಶಿ ಏಕಸ್ವಾಮ್ಯ ಬಂಡವಾಳ ಕಂಪನಿಗಳು ಆಹಾರ ಉತ್ಪನ್ನ ರಂಗಕ್ಕೆ ದಾಳಿಯಿಟ್ಟ ಕಾರಣ ಸಾವಿರಾರು ನಮ್ಮ ದೇಶದ ಘಟಕಗಳು ಮುಚ್ಚಿವೆ.

ಇಂದು ಬೆಂಗಳೂರಿನಲ್ಲಿರುವ ಎಲ್ಲಾ ಸ್ಟೀಲ್ ರಿರೋಲಿಂಗ್ ಮಿಲ್‌ಗಳು ಮುಚ್ಚಿ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಸಿಐಟಿಯು ಸಂಘಟನೆ ಇದ್ದ ಕ್ಯಾಪ್ ಸ್ಟೀಲ್, ಆಂಧ್ರ ಸ್ಟೀಲ್, ಮಿಟ್ಟಲ್ ಸ್ಟೀಲ್, ಶಿವಮೋನಿ ಸ್ಟೀಲ್ ಇತ್ಯಾದಿ ಕಾರ್ಖಾನೆಗಳು ಅನೇಕ ವರ್ಷಗಳಿಂದ ಮುಚ್ಚಿವೆ. ತಯಾರಿಕಾ ವೆಚ್ಚ ಹೆಚ್ಚಾದ ಕಾರಣ ಹಾಗೂ ಕಡಿಮೆ ಬೆಲೆಗೆ ತೆರಿಗೆಯಿಲ್ಲದೆ ವಿದೇಶಿ ಉಕ್ಕು ದೇಶಕ್ಕೆ ಬರುತ್ತಿರುವ ಕಾರಣ ಈ ಸ್ಟೀಲ್ ರೋಲಿಂಗ್ ಘಟಕಗಳಿಗೆ ದುಸ್ಥಿತಿ ಒದಗಿದೆ.

ಇಂದು ಹಲವಾರು ವಿದೇಶಿ ವಾಹನ ತಯಾರಿಕಾ ಘಟಕಗಳು ನಮ್ಮ ದೇಶದಲ್ಲಿ ಆರಂಭವಾಗಿವೆ. ಆದರೆ ವಾಸ್ತವವಾಗಿ ಇಲ್ಲಿ ಕೇವಲ ಜೋಡಣೆ ಕಾರ್ಯ ಮಾತ್ರ ಆಗುತ್ತಿದ್ದು ಸರ್ಕಾರದ ಭರವಸೆ ಪ್ರಕಾರ ಹೆಚ್ಚಿನ ಉದ್ಯೋಗ ಅವಕಾಶಗಳು ಸೃಷ್ಟಿಯಾಗಿಲ್ಲ. ಈ ವಾಹನಗಳ ಬಿಡಿ ಭಾಗಗಳು ಸಹ ವಿದೇಶದಿಂದ ಬರುತ್ತಿವೆ. ಕೆಲವು ದಿನಗಳ ಹಿಂದೆ ಈ ವಿದೇಶಿ ವಾಹನ ತಯಾರಿಕಾ ಕಂಪನಿಗಳ ಮುಖ್ಯಸ್ಥರು ಕೇಂದ್ರ ಸರ್ಕಾರದ ಮುಂದೆ ತಮ್ಮ ವಾಹನಗಳ ಬಿಡಿ ಭಾಗಗಳನ್ನು ದೇಶೀಯ ಸಣ್ಣ ಕೈಗಾರಿಕೆಯವರು ತಯಾರಿಸಲು ಅವಕಾಶ ಕೊಡಬಾರದು ಎಂದು ಬೇಡಿಕೆ ಇಟ್ಟಿರುತ್ತಾರೆ. ಬೆಂಗಳೂರಿನಲ್ಲಿ ಬೃಹತ್ ಪ್ರಚಾರದೊಡನೆ ವೋಲ್ವೋ ಟ್ರಕ್ ಹಾಗೂ ಟೊಯೋಟಾ, ಕಿರ್ಲೋಸ್ಕರ್ ಕಾರು ಕಾರ್ಖಾನೆಗಳು ಆರಂಭವಾದವು. ವೋಲ್ವೊ ಕಾರ್ಖಾನೆ ಬೆಂಗಳೂರಿನ ಹೊಸಕೋಟೆಯಲ್ಲಿ ಹಾಗೂ ಟೊಯೋಟಾ ಕಾರ್ಖಾನೆ ಬಿಡದಿಯಲ್ಲಿವೆ. ಸ್ಥಳಿಯರಿಗೆ ಉದ್ಯೋಗ ಕೊಡುವ ಭರವಸೆ ಈ ಕಾರ್ಖಾನೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸರ್ಕಾರದಿಂದ ಬಂದಿತು.

ಆದರೆ ಈ ಉದ್ಯೋಗ ಅವಕಾಶಗಳು ವಾಸ್ತವವಾಗಿ ಸೃಷ್ಟಿಯಾಗಿಲ್ಲ. ಬಹಳ ಕಡಿಮೆ ಖಾಯಂ ಕೆಲಸಗಾರರೊಡನೆ ಈ ಕಾರ್ಖಾನೆ ಕಾರ್ಯ ನಿರ್ವಹಿಸುತ್ತಿದೆ. ಸಣ್ಣ ಪುಟ್ಟ ಸಹಾಯಕರ ಹುದ್ದೆಗಳನ್ನು ಸ್ಥಳೀಯರಿಗೆ ಕೊಡಲಾಗಿದೆ. ಹೆಚ್ಚಿನ ಕೆಲಸಗಳನ್ನು ಗುತ್ತಿಗೆ ಹಾಗೂ ತಾತ್ಕಾಲಿಕ ಕಾರ್ಮಿಕರಿಗೆ ಕೊಡಲಾಗಿದೆ. ಈ ಸ್ಥಿತಿಯಲ್ಲಿ ದೇಶದ ಪ್ರಥಮ ಸಣ್ಣ ಕಾರು



ಮುಚ್ಚಿದ ಮೈಸೂರ್ ಲ್ಯಾಂಪ್ಸ್

ತಯಾರಿಕಾ ಘಟಕವಾದ ಬೆಂಗಳೂರಿನ ಸಿಪಾನಿ ಆಟೋಮೊಬೈಲ್ಸ್ ಮುಚ್ಚಿದೆ. ಇವರು ತಯಾರಿಸುತ್ತಿದ್ದ ಡಾಲ್ಫಿನ್ ಕಾರು ಅತ್ಯುತ್ತಮ ಗುಣಮಟ್ಟ ಹಾಗೂ ಕಡಿಮೆ ದರದಲ್ಲಿದ್ದು ವಿದೇಶಿ ಕಂಪನಿಗಳ ಸ್ಪರ್ಧೆ ತಾಳಲಾರದಾಯಿತು.

ವಿದೇಶಿ ಕಂಪನಿಗಳಲ್ಲಿ ಕಾರ್ಮಿಕರ ಸ್ಥಿತಿ ಹೇಗಿದೆ?

ಇಂದು ಈ ವಿದೇಶಿ ಕಂಪನಿಗಳಲ್ಲಿ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಸಂಘಟಿತರಾಗದಂತೆ ಆಡಳಿತ ವರ್ಗದವರು ವ್ಯವಸ್ಥೆ ರೂಪಿಸಿರುತ್ತಾರೆ. ಕಾರ್ಖಾನೆ ಆರಂಭವಾದೊಡನೆ ತಮಗೆ ಅನುಕೂಲಕರವಾಗುವ ರೀತಿಯಲ್ಲಿ ಕಾರ್ಮಿಕ ಇಲಾಖೆ ಮುಂದೆ ಸ್ಟ್ಯಾಂಡಿಂಗ್ ಆರ್ಡರ್ಸ್ ಮಾಡಿಸುತ್ತಾರೆ. ಈ ಕಾರ್ಖಾನೆಯಲ್ಲಿ ಕಾರ್ಮಿಕರು ಸಂಘ ರಚಿಸದಂತೆ ಸರ್ಕಾರ, ಕಾರ್ಮಿಕ ಇಲಾಖೆ, ಪೋಲೀಸರು, ಸ್ಥಳೀಯ ರಾಜಕಾರಣಿಗಳು ಸಹ ಪಾತ್ರ ವಹಿಸುತ್ತಾರೆ. ಇಂದು ಸರ್ಕಾರ ಎಕ್ಸ್‌ಪೋರ್ಟ್ ಜೋನ್ ಎಂಬ ಕೈಗಾರಿಕಾ ಪ್ರದೇಶಗಳನ್ನು ಆರಂಭ ಮಾಡಿ ಈ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕ ಕಾನೂನು ಜಾರಿಯಾಗದಂತೆ ಕ್ರಮ ವಹಿಸುತ್ತಿದೆ. ಮುಖ್ಯವಾಗಿ ಅಗ್ಗದ ಸಂಬಳದ ದೃಷ್ಟಿಯಿಂದ ಹಾಗೂ ಕಾರ್ಮಿಕ ಚಳುವಳಿಯ ನಿಶಕ್ತಿಯ ಕಾರಣ ಬೆಂಗಳೂರಿನಲ್ಲಿ ವಿದೇಶಿ ಕಂಪನಿಗಳು ಬಂಡವಾಳ ಹೂಡುತ್ತಿವೆ. ತೈವಾನಿನ ಕಂಪನಿಯೊಂದು ಬೆಂಗಳೂರಿನ ಹೊರವಲಯದಲ್ಲಿ ನಿಟೆಡ್ ಸಿದ್ಧ ಉಡುಪು ತಯಾರಿಸುವ ಘಟಕ ಆರಂಭ ಮಾಡಿದೆ. ಎಲ್ಲಾ ಯಂತ್ರಗಳನ್ನು ಹಾಗೂ ಕಚ್ಚಾ ಪದಾರ್ಥವನ್ನು ತೈವಾನಿನಿಂದ ತರಿಸುತ್ತಾರೆ. ಬೆಂಗಳೂರಿನ ಹೊರವಲಯದಲ್ಲಿರುವ ಅಶಿಕ್ಷಿತ ಮಹಿಳೆಯರನ್ನು ತರಬೇತಿ ನೆಪದಲ್ಲಿ ಈ ಕಾರ್ಖಾನೆಯಲ್ಲಿ ಬಹಳ ಕಡಿಮೆ ಸಂಬಳಕ್ಕೆ ದುಡಿಸುತ್ತಿದ್ದಾರೆ. ಕನಿಷ್ಟ ವೇತನ ಜಾರಿಯಲ್ಲಿರುವುದಿಲ್ಲ. ಕಾರ್ಮಿಕರ ಸೇವಾ ನಿರಂತರತೆಯನ್ನು ತರಬೇತಿ ನೆಪದಲ್ಲಿ ಪ್ರತಿ ಆರು ತಿಂಗಳಿಗೆ ಕಡಿತ ಮಾಡುತ್ತಾರೆ. ಈ ಕಾರ್ಖಾನೆ ಹಿಂದೆ ತಮಿಳುನಾಡಿನಲ್ಲಿದ್ದು ಅಲ್ಲಿಯ ಕಾರ್ಮಿಕರು ಸಂಘಟಿತರಾದ ಕಾರಣ ಬೆಂಗಳೂರಿಗೆ ವರ್ಗಾಯಿಸಿದ್ದಾರೆ. ಇಲ್ಲಿ ಆಡಳಿತ ವರ್ಗದವರಿಗೆ ಸ್ಥಳೀಯ ಭೂಮಾಲೀಕರು, ಪೋಲೀಸ್ ಅಧಿಕಾರಿಗಳು ಕಾರ್ಮಿಕ ಇಲಾಖೆ ನೆರವಿಗೆ ನಿಂತಿದೆ.

ಇತ್ತೀಚಿಗೆ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಭೇಟಿ ನೀಡಿದಾಗ ದೇಶದ ಪ್ರಮುಖ ಸಿಮೆಂಟ್ ತಯಾರಿಕಾ ಘಟಕವಾದ 'ಎವೆರೆಸ್ಟ್' ಕಾರ್ಖಾನೆ ಮುಚ್ಚಿ, ಕಟ್ಟಡ ಉತ್ಪನ್ನ ತಯಾರಿಸುವ ಅನೇಕ ವಿದೇಶಿ ಕಂಪನಿಗಳು ಆರಂಭವಾಗಿವೆ. ಬೆಂಗಳೂರಿನ ಪ್ರಮುಖ ಫ್ಲೋರಿಂಗ್ ಟೈಲ್ ಉತ್ಪಾದಿಸುವ ಕಾರ್ಖಾನೆಯಾದ ನಿಟ್ಕೋ ಟೈಲ್ಸ್ ಕಾರ್ಖಾನೆ ಕಳೆದ ಒಂದು ವರ್ಷದಿಂದ ಮುಚ್ಚಿದೆ. ಕಡಿಮೆ ದರದಲ್ಲಿ ವಿದೇಶಿ ಸಹಭಾಗಿತ್ವದ ಟೈಲ್‌ಗಳು ಮಾರುಕಟ್ಟೆ ಪ್ರವೇಶಿಸಿರುವುದರಿಂದ ನಿಟ್ಕೋ ಟೈಲ್ಸ್ ದುಸ್ಥಿತಿ ಕಂಡಿದೆ. ಕಡಿಮೆ ಕೆಲಸಗಾರರೊಡನೆ ಹೆಚ್ಚಿನ ಉತ್ಪನ್ನ ಮಾಡಿಸುವ ತಂತ್ರವನ್ನು ವಿದೇಶಿ ಕಂಪನಿಗಳು ಅನುಸರಿಸುತ್ತಿದೆ. ಈ ತಂತ್ರವನ್ನು ಇಂದು ದೇಶಿಯ ಮಾಲೀಕರು ಸಹ ನಕಲು ಮಾಡುತ್ತಿದ್ದಾರೆ.

ಈ ನಡುವೆ ಕೇಂದ್ರ ಸರ್ಕಾರ ವಾರ್ತಾ ಇಲಾಖೆಯನ್ನು ವಿಭಜಿಸಿ ಭಾರತೀಯ ಸಂಚಾರ ನಿಗಮ ಎಂಬ ಹೊಸ ನಿಗಮವನ್ನು ಮಾಡಲು ಹೊರಟಿದೆ. ಮಹಾನಗರ ಟೆಲಿಫೋನ್ ನಿಗಮ (ಎಂಟಿಎನ್‌ಎಲ್) ಕೇಂದ್ರ ಸರ್ಕಾರದ ಸಂಸ್ಥೆಯಾಗಿದ್ದು ಇದನ್ನು ಖಾಸಗೀಯವರಿಗೆ ಒಪ್ಪಿಸುವ ಕೆಲಸ ಆರಂಭವಾಗಿದೆ.

ಭಾರತದ ಶೇರು ಮಾರುಕಟ್ಟೆ ಪ್ರವೇಶಿಸಲು ವಿದೇಶಿ ಕಂಪನಿಗಳು ಹೊರಟಿವೆ. ಇವರು ಬಂಡವಾಳ ಹಿಂತೆಗೆದುಕೊಂಡ ಪಕ್ಷದಲ್ಲಿ ದೇಶದ ಶೇರು ಮಾರುಕಟ್ಟೆ ಅಲ್ಲೋಲ ಕಲ್ಲೋಲವಾಗುತ್ತದೆ. ಈ ನಡುವೆ ಕೇಂದ್ರ ಸರ್ಕಾರ ಕಾರ್ಮಿಕ ಭವಿಷ್ಯನಿಧಿ ಹಣವನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸಲು ಹೊರಟಿದೆ.

ಬೆಂಗಳೂರಿನಲ್ಲಿ ದುಡಿಯುವ ಜನರ ಪರಿಸ್ಥಿತಿ ಹೇಗಿದೆ?

ಅಗತ್ಯ ವಸ್ತುಗಳ ಬೆಲೆಗಳನ್ನು ವಿಪರೀತವಾಗಿ ಏರಿಸಲಾಗಿದೆ. ಸಣ್ಣ ಪುಟ್ಟ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಪೀಣ್ಯ, ಬೊಮ್ಮ ಸಂದ್ರ, ವೈಟ್ ಫೀಲ್ಡ್, ಕಾಮಾಕ್ಷಿ ಪಾಳ್ಯ, ಪ್ರದೇಶದ ಕಾರ್ಮಿಕರು ವಾಸ ಮಾಡುವ ಮನೆ ಬಾಡಿಗೆ ವಿಪರೀತ ಏರಿದೆ. ಒಂದು ಕೊಠಡಿಯ ಶೀಟ್ ಮನೆಗೆ ಒಂದೂವರೆ ಸಾವಿರ ಬಾಡಿಗೆ ಇದೆ. ಇದೇ ಸಂದರ್ಭದಲ್ಲಿ ಶ್ರೀಮಂತರು ವಾಸ ಮಾಡುವ ಫ್ಲಾಟ್‌ಗಳ ಬೆಲೆ ಕಡಿಮೆಯಾಗಿದೆ. ಕಡಿಮೆ ವರಮಾನವಿರುವ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ ಇಂದು ಮುಂದುವರಿಯಲಾಗದಂತ ಪರಿಸ್ಥಿತಿ ಇದೆ.

ವ್ಯಾಪಾರ ಹಾಗೂ ಆರ್ಥಿಕ ರಂಗದಲ್ಲಿ ಇಂದು ಬಿಕ್ಕಟ್ಟಿನ ಪರಿಸ್ಥಿತಿ ತಲೆದೋರಿದೆ.

...ಕದ ಕೈಗಾರಿಕೆಗಳು

...ಇಂದು ಸಾಮಾನ್ಯ ಜನರ ವರಮಾನ ಕಡಿಮೆಯಾಗಿದೆ. ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಸಣ್ಣಪುಟ್ಟ ಕೈಗಾರಿಕೆಗಳ ಕಾರ್ಮಿಕರ ಸ್ಥಿತಿ ಕೂಡ ಇಂದು ಅಪಾಯದಲ್ಲಿದೆ.

ಸರ್ಕಾರದ ಅಂಕಿಅಂಶದ ಪ್ರಕಾರ ಕಳೆದ ಒಂದು ವರ್ಷದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯುತ್ತಿರುವ ಎರಡು ಲಕ್ಷ ಜನರಿಗೆ ಕೆಲಸವಿಲ್ಲವಾಗಿದೆ. ಟೆಕ್ಸ್‌ಟೈಲ್ ರಂಗದಲ್ಲಿ 57 ಸಾವಿರ ಜನರಿಗೆ ಉದ್ಯೋಗವಿಲ್ಲವಾಗಿದೆ. ಬೆಂಗಳೂರಿನ ರಾಜಮಿಲ್ ಮುಚ್ಚಿದೆ. ಮಿನರ್ವ ಮಿಲ್, ಬಿನ್ನಿಮಿಲ್ ಮುಚ್ಚುವ ಹಂತದಲ್ಲಿವೆ.

ಇದಕ್ಕೆ ಎದುರಾಗಿ ರಾಷ್ಟ್ರವ್ಯಾಪಿಯಾಗಿ ಹಾಗೂ ಮುಖ್ಯವಾಗಿ ಬೆಂಗಳೂರಿನ ಕಾರ್ಮಿಕ ವರ್ಗದ ನಡುವೆ ಅದರಲ್ಲೂ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರ ನಡುವೆ ಐಕ್ಯತೆ ಬೆಳೆಯಬೇಕಾಗಿದೆ. ಈ ಐಕ್ಯ ಹೋರಾಟದಲ್ಲಿ ರಾಜಕೀಯ, ಜಾತಿ, ಗಡಿ ಭಿನ್ನಾಭಿಪ್ರಾಯ ತಲೆದೋರಬಾರದು. ಹೀಗಿದ್ದರೆ ಮಾತ್ರ ಮುಂಬರುವ ದೊಡ್ಡ ದುರಂತವನ್ನು ಕಾರ್ಮಿಕರು ಎದುರಿಸಬಹುದು. ಲಾಕ್‌ಔಟ್, ಕಾರ್ಖಾನೆಗಳ ಮುಚ್ಚುವಿಕೆ, ರಿಟ್ರೆಂಚ್‌ಮೆಂಟ್, ಲೇ ಆಫ್, ಗೋಲ್ಡನ್ ಹ್ಯಾಂಡ್ ಶೇಕ್, ಸ್ವಯಂ ನಿವೃತ್ತಿ ಯೋಜನೆ ಇತ್ಯಾದಿಗಳನ್ನು ಕಾರ್ಮಿಕರು ಸಂಘಟಿತರಾದಲ್ಲಿ ಮಾತ್ರ ಎದುರಿಸಲು ಸಾಧ್ಯ.

ಮತೀಯ, ಪ್ರಾದೇಶಿಕ ವಾದಕ್ಕೆದುರಾಗಿ ರಾಜಕೀಯ ವ್ಯತ್ಯಾಸಗಳಿಗೆ ಎದುರಾಗಿ ಕಾರ್ಮಿಕ ವರ್ಗ ಹಾಗೂ ಜನಸಾಮಾನ್ಯರ ಐಕ್ಯತೆ ಬೇಕಿದೆ.

ಈ ಹೋರಾಟವನ್ನು ಬೆಂಗಳೂರಿನ ಕಾರ್ಮಿಕವರ್ಗ ಬೆಳೆಸಿದ್ದಲ್ಲಿ ಮತೀಯ ಶಕ್ತಿಗಳ ಎದುರಾಗಿ ಹಾಗೂ ವಿದೇಶಿ ಕಂಪನಿಗಳ ಎದುರಾಗಿ ನಿಲ್ಲಲು ಸಾಧ್ಯ. -

ಕೈಗಾರಿಕಾ ಮರುಭೂಮಿಯಾಗುತ್ತಿರುವ ಹುಬ್ಬಳ್ಳಿ-ಧಾರವಾಡ

ನಿತ್ಯಾನಂದಸ್ವಾಮಿ

ಹುಬ್ಬಳ್ಳಿ ಧಾರವಾಡ ಹೊತ್ತಿ ಉರಿಯುತ್ತಿದೆ. ಹೈಕೋರ್ಟ್ ಪೀಠಕ್ಕಾಗಿ ನಡೆಯುತ್ತಿರುವ ಚಳುವಳಿಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ವಕೀಲರ ಕೋರ್ಟು ಬಹಿಷ್ಕಾರ ಕ್ರಮದಿಂದ ಕಕ್ಷಿದಾರರು ಕಂಗಾಲಾಗಿದ್ದಾರೆ. ಜೈಲುಗಳಲ್ಲಿರುವ ಆರೋಪಿಗಳು ಜಾಮೀನು ಪಡೆಯಲಾಗದೆ ಜೈಲಿನಲ್ಲಿಯೇ ಮುಷ್ಕರ ನಡೆಸುವಂತಾಗಿದೆ. ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಆತಂಕಪಡುವಂತಾಗಿದೆ. ತಮ್ಮ ಕೆಲಸದ ಸ್ಥಳಗಳಿಗೆ ಹೋಗಿ ಬರಲು ನಗರ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸುವವರು ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡುವಂತಾಗಿದೆ:

ಇಷ್ಟೊಂದು ವಿಶಾಲವಾಗಿರುವ ಕರ್ನಾಟಕ ರಾಜ್ಯಕ್ಕೆ ಇನ್ನೊಂದು ಹೈಕೋರ್ಟ್ ಪೀಠ ಬೇಕು ಎನ್ನುವುದರಲ್ಲಿ ವಿವಾದ ಇರಬೇಕಾಗಿಲ್ಲ. ಆದರೆ ಅಂತಹ ಒಂದು ಅವಶ್ಯಕತೆಯನ್ನು ಈಡೇರಿಸಿಕೊಳ್ಳಲು ಚಳುವಳಿ ನಡೆಸಬೇಕಾದ ಪರಿಸ್ಥಿತಿ ಬಂದಿರುವುದು ವಿಷಾದದ ಸಂಗತಿಯಾಗಿದೆ. ಇಂದು ಅನೇಕ ರಾಜ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಶಾಶ್ವತ ಹೈಕೋರ್ಟ್ ಪೀಠಗಳಿದ್ದು ಹೆಚ್ಚುವರಿ ಪೀಠಗಳನ್ನು ಪಡೆಯಲು ಆ ರಾಜ್ಯಗಳಲ್ಲಿ ಚಳುವಳಿಗಳು ನಡೆದಂತಿಲ್ಲ.

ನ್ಯಾಯಾಲಯಗಳು, ಸರ್ಕಾರಿ ಕಛೇರಿಗಳು, ಶಾಲೆ, ಆಸ್ಪತ್ರೆ ಮೊದಲಾದ ಸಂಸ್ಥೆಗಳು ಹತ್ತಿರದಲ್ಲೇ ಇರಬೇಕೆಂದು ಬಯಸುವುದು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಭಾಗವಾಗಿದೆ. ಆದರೆ ಒಂದು ಪ್ರದೇಶದ ಅಭಿವೃದ್ಧಿ ಕೇವಲ ಇಂತಹ ಕೆಲವು ಕಛೇರಿಗಳನ್ನು ಅವಲಂಬಿಸಿದೆ ಎನ್ನುವಂತೆ ಅವುಗಳಿಗೆ ಅನಾವಶ್ಯಕ ಪ್ರಾಮುಖ್ಯತೆ ನೀಡುವುದು ಸಮಂಜಸವಾಗದು. ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠಕ್ಕಾಗಿ ನಡೆಯುತ್ತಿರುವ ಚಳುವಳಿಯು ಪ್ರತ್ಯೇಕ ರಾಜ್ಯದ ಕೂಗನ್ನು ಎಬ್ಬಿಸಲು ಕಾರಣವಾಗಿರುವುದು ಕಳವಳಕಾರಿ ವಿಷಯವಾಗಿದೆ ಮಾತ್ರವಲ್ಲ ಇದಕ್ಕೂ ಹೆಚ್ಚು ಮಹತ್ವದ ಹಾಗೂ ತುರ್ತಾದ ಸಮಸ್ಯೆಗಳಿಂದ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯುಂತಾಗಿರುವುದು ವಿಷಾದದ ಸಂಗತಿಯಾಗಿದೆ.

ಕೆಲವು ವರ್ಷಗಳ ಹಿಂದೆ ಕರ್ನಾಟಕದ ಕೈಗಾರಿಕಾ ನಕ್ಷೆಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಕೆ ಒಂದು ಪ್ರಮುಖವಾದ ಸ್ಥಾನವಿತ್ತು. ಇಲ್ಲಿನ ನೂರಾರು ಚಿಕ್ಕ ಹಾಗೂ ದೊಡ್ಡ ಕೈಗಾರಿಕಾ ಘಟಕಗಳನ್ನು ಅವಲಂಬಿಸಿ ಸಾವಿರಾರು ಕಾರ್ಮಿಕರು ಮತ್ತು ಅವರ ಕುಟುಂಬಗಳು ಜೀವನ ಸಾಗಿಸುತ್ತಿದ್ದರೂ ಕೈಗಾರಿಕಾ ವಿಸ್ತರಣೆಗೆ ತುಂಬ ಅನುಕೂಲಕರ ಪರಿಸ್ಥಿತಿಯನ್ನು ಹೊಂದಿದ ಈ ಅವಳಿ ನಗರದಲ್ಲಿ ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆಯಾಗಿ ಇನ್ನೂ ಸಾವಿರಾರು ದುಡಿಯುವ ಕೈಗಳಿಗೆ ಉದ್ಯೋಗದ ಅವಕಾಶಗಳು ಸೃಷ್ಟಿಯಾಗಬಹುದೆಂಬ ನಿರೀಕ್ಷೆ ಇತ್ತು. ಆದರೆ ಅಂತಹ ನಿರೀಕ್ಷೆ ಇಂದು ಹುಸಿಯಾಗುತ್ತಿದೆ. ಹೊಸ ಕೈಗಾರಿಕೆಗಳ ಸ್ಥಾಪನೆಯ ಪ್ರಶ್ನೆ ದೂರ ಉಳಿಯಿತು. ಇರುವ ಕೈಗಾರಿಕೆಗಳು ಒಂದರ ನಂತರ ಒಂದರಂತೆ ಬಾಗಿಲು ಹಾಕುತ್ತಿರುವುದನ್ನು ನೋಡಿದರೆ ಇಲ್ಲೊಂದು ಕೈಗಾರಿಕಾ ಮರುಭೂಮಿ ಉದ್ಭವವಾಗುವ ಕಾಲ ದೂರವಿಲ್ಲ ಎಂದೆನಿಸುತ್ತದೆ.

ಮಹದೇವ ಜವಳಿ ಗಿರಣಿ



ಮುಚ್ಚಲ್ಪಟ್ಟಿರುವ ತಾಳಗುಪ್ಪ ಪ್ಲೈವುಡ್ ಕಾರ್ಖಾನೆ

ನೂರು ವರ್ಷಗಳ ಇತಿಹಾಸವಿರುವ ಮಹದೇವ ಟೆಕ್ಸ್‌ಟೈಲ್ಸ್ 4000 ಕಾರ್ಮಿಕರಿಗೆ ಕೆಲಸ ಒದಗಿಸುತ್ತಿತ್ತು. 1989-90 ರಲ್ಲಿ ಅದು ರೋಗಗ್ರಸ್ತವಾದಾಗ ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್(ಎನ್.ಟಿ.ಸಿ. ಅದನ್ನು ವಶಕ್ಕೆ ತೆಗೆದುಕೊಂಡಿತ್ತು. ಕೇಂದ್ರ ಸರ್ಕಾರವು ಆಗ ಅನುಸರಿಸಲಾರಂಭಿಸಿದ ಹೊಸ ಆರ್ಥಿಕ-ಕೈಗಾರಿಕಾ ನೀತಿಯ ಕಾರಣದಿಂದಾಗಿ ಮಿಲ್ಲಿನ ಪುನಃಶ್ಚೇತನಕ್ಕೆ ನೆರವು ದೊರೆಯಲಿಲ್ಲ. ಇಂದು ಅಲ್ಲಲ್ಲಿ ಬಿದ್ದುಹೋದ ಆವರಣ ಗೋಡೆಯ ಆಚೆಗೆ ಸಂಪೂರ್ಣವಾಗಿ ಶಿಥಿಲಗೊಂಡು ನಿಂತಿರುವ ಮಿಲ್ಲಿನ ಕಟ್ಟಡದ ದೃಶ್ಯವು ಭಯಾನಕವಾಗಿದೆ. ಮಾತ್ರವಲ್ಲ ಕಾನೂನುಬದ್ಧ ಪರಿಹಾರವನ್ನು ಸಹ ಪಡೆಯದೆ ಬೀದಿಪಾಲಾದ ಕಾರ್ಮಿಕ ಕುಟುಂಬಗಳ ಗೋಳಿಗೆ ಮೂಕ ಸಾಕ್ಷಿಯಂತಿದೆ.

ರೈಲ್ವೆ ವರ್ಕ್‌ಶಾಪ್

ಸುಮಾರು 15 ಸಾವಿರ ಕಾರ್ಮಿಕರಿಗೆ ಕೆಲಸ ಒದಗಿಸುತ್ತಿದ್ದ ಹುಬ್ಬಳ್ಳಿಯ ರೈಲ್ವೆ ವರ್ಕ್‌ಶಾಪ್ ಮುಚ್ಚುವ ಹಂತಕ್ಕೆ ಬಂದಿದೆ. ಇಲ್ಲಿ ಮೀಟರ್‌ಗೇಜ್ ಬೋಗಿಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಮೀಟರ್‌ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡುವ ಜೊತೆಯಲ್ಲೇ ವರ್ಕ್‌ಶಾಪ್‌ನಲ್ಲಿ ಬ್ರಾಡ್‌ಗೇಜ್ ಬೋಗಿಗಳನ್ನು ತಯಾರಿಸಲು ಕ್ರಮ ಕೈಗೊಂಡಿದ್ದರೆ ವರ್ಕ್‌ಶಾಪ್ ಉಳಿಯುತ್ತಿತ್ತು. ಈಗ ಉಳಿದಿರುವ ಸುಮಾರು ಒಂದು ಸಾವಿರ ಕಾರ್ಮಿಕರನ್ನು ಸ್ವಯಂ ನಿವೃತ್ತಿಹೊಂದಲು ಅಥವಾ ಬೇರೆಡೆಗೆ ವರ್ಗಾವಣೆಯಾಗಿ ಹೋಗಲು ಬಲವಂತ ಮಾಡಲಾಗುತ್ತಿದೆ.

ಉದಾರೀಕರಣವೆಂಬ ಶಾಪ

ಕೇಂದ್ರದ ಹಿಂದಿನ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಮತ್ತು ಈಗಿನ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅತ್ಯಂತ ರಭಸದಿಂದ ಅನುಷ್ಠಾನಗೊಳಿಸುತ್ತಿರುವ ಜಾಗತೀಕರಣ, ಉದಾರೀಕರಣದ ನೀತಿಗಳು ದೇಶಾದ್ಯಂತ ಕಾರ್ಮಿಕರ ಪಾಲಿಗೆ ಶಾಪವಾಗಿ ಪರಿಣಮಿಸಿದೆ. ಅದು ಕೇವಲ ಜೀವವನ್ನು ಮಾತ್ರ ಬಲಿತೆಗೆದುಕೊಳ್ಳುವ ನ್ಯೂಟ್ರಾನ್ ಬಾಂಬಿನಂತೆ ಕೇವಲ ದುಡಿಯುವ ಜಗಳ ಬದುಕನ್ನು ಮಾತ್ರ ಬರಡಾಗಿಸುತ್ತದೆ. ಒಂದು ನೂರು ಕೋಟಿಯಷ್ಟು ಜನಸಂಖ್ಯೆಯನ್ನು ಹೊಂದಿರುವ ನಮ್ಮ ದೇಶದಲ್ಲಿ ಅದು ಹೊಸ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವ ಬದಲು ಇರುವ ಕೈಗಾರಿಕೆಗಳನ್ನು ಮುಚ್ಚಿಸಿ ಕಾರ್ಮಿಕರನ್ನು ಬೀದಿ ಪಾಲು ಮಾಡುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಉದಾರೀಕೃತ ಆಮದು ನೀತಿಯಿಂದಾಗಿ ಕಾರ್ಖಾನೆಗಳನ್ನು ಮುಚ್ಚುವ ಪ್ರಕ್ರಿಯೆಗೆ ಮಿಂಚಿನ ವೇಗವನ್ನು ನೀಡಿದಂತಾಗಿದೆ. ಈ ನೀತಿಯಿಂದಾಗಿ ದೇಶದ ಒಟ್ಟು ಕೈಗಾರಿಕಾ ಉತ್ಪಾದನೆಯಲ್ಲಿ ಸುಮಾರು ಅರ್ಧದಷ್ಟನ್ನು ಒದಗಿಸುತ್ತಾ ಬಂದಿರುವ ಸಣ್ಣ ಕೈಗಾರಿಕಾ ಕ್ಷೇತ್ರವು ಸಂಪೂರ್ಣ ನಾಶವಾಗುವ ಅಪಾಯವನ್ನು ಎದುರಿಸುತ್ತಿದೆ.

ಆಮದು ಸುಂಕ ರಿಯಾಯ್ತಿಗಳಿಂದ ಕುಮ್ಮಕ್ಕು ಪಡೆದು ದೇಶದೊಳಗೆ ಹರಿದು ಬರುತ್ತಿರುವ ಎಣ್ಣೆ ಹಾಗೂ ಇತರ ವನಸ್ಪತಿಗಳ ಕಾರಣದಿಂದ ದೇಶದ ಇತರ ಭಾಗಗಳಲ್ಲಿ ಕಂಡುಬಂದಂತೆ ಹುಬ್ಬಳ್ಳಿ-ಧಾರವಾಡದಲ್ಲಿಯೂ ಎಣ್ಣೆ ಗಿರಣಿಗಳು ಬಾಗಿಲು ಹಾಕುತ್ತಿವೆ. ಸತ್ತೂರಿನ ಮೀನಾಕ್ಷಿ ಆಯಿಲ್ ಮಿಲ್ (ಮೊಪೆಕ್ಸ್) ಬಂದಾದಾಗ ಸುಮಾರು 300 ಜನ ಕಾರ್ಮಿಕರು ಬೀದಿಪಾಲಾದರು. ಹಳೆ ಹುಬ್ಬಳ್ಳಿಯ ಪ್ರತಿಷ್ಠಿತ ಸುಂದತ್ತಾ ಆಯಿಲ್ ಮಿಲ್ ಬಂದಾಗ ಸುಮಾರು ಒಂದು ಸಾವಿರ ಕಾರ್ಮಿಕರು ಕೆಲಸ ಕಳೆದುಕೊಂಡರು. ಖಾನ್‌ಜಿ ಆಯಿಲ್ ಮಿಲ್ ಮತ್ತು ಖಾನ್‌ಜಿ ರಿಫೈನರಿಗಳು ಸಹ ಮುಚ್ಚಿವೆ.

ಬಿಕೋ ಎನ್ನುತ್ತಿರುವ ಕೈಗಾರಿಕಾ ವಸಾಹತುಗಳು

ಹುಬ್ಬಳ್ಳಿ-ಧಾರವಾಡ ಮಹಾನಗರದ ಅಭಿವೃದ್ಧಿಯಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದ್ದ ಕೈಗಾರಿಕಾ ವಸಾಹತುಗಳಲ್ಲಿ ಇಂದು ಸ್ಮಶಾನ ಮೌನ ಆವರಿಸಿಕೊಂಡಿದೆ. ಸದಾ ಸದ್ದುಗದ್ದಲಗಳ ತಾಣಗಳಾಗಿದ್ದ ಗೋಕುಲ್ ರೋಡ್ ಕೈಗಾರಿಕಾ ವಸಾಹತು, ತಾರಿಹಾಳ ಕೈಗಾರಿಕಾ ವಸಾಹತು, ಸತ್ತೂರು ಲಕಮನಹಳ್ಳಿ ಕೈಗಾರಿಕಾ ವಸಾಹತು, ಸತ್ತೂರು ಕೈಗಾರಿಕಾ ವಸಾಹತು ಹಾಗೂ ಏಷ್ಯಾದ

ಪುಟ 11 ಕ್ಕೆ

ಬಳ್ಳಾರಿಯಲ್ಲಿ ಕೈಗಾರಿಕೆಗಳು

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಎರಡನೇ ಬಾರಿ ಬರುತ್ತದೆಂಬ ಪರಿಸ್ಥಿತಿ ಉಂಟಾದಾಗ ಬಿಜೆಪಿ ಸರಕಾರದ ನಿರ್ಣಯದಿಂದ ಕೈಗಾರಿಕೆಗಳನ್ನು ಚೇತರಿಸಿ ಲಾಭಗಳಿಸಬಹುದು, ಜಾಗತೀಕರಣದಿಂದ ಲಾಭಗಳಿಸಬಹುದೆಂದು ಕಾದಿದ್ದ ಕೈಗಾರಿಕೆಗಳ ಸ್ಥಿತಿ ಏನೆಂದು ನೋಡಿದರೆ ಜಾಗತೀಕರಣವೆಂದರೆ ಜಗತ್ತನ್ನು ಕೆಲವೇ ಬಹುರಾಷ್ಟ್ರೀಯ ಕಂಪನಿಗಳು ಜಗತ್ತನ್ನೆಲ್ಲಾ ಶೋಷಣೆ ಮಾಡಿ ಭಾರೀ ಭಾರೀ ಲಾಭ ಕೊಳ್ಳೆ ಹೊಡೆಯಲು ಸರ್ವಸ್ವತಂತ್ರ ಅಧಿಕಾರ ವಹಿಸಿಕೊಡುವುದಾಗಿದೆ ಎಂಬುದು ಅರ್ಥವಾಗಲು ಎಷ್ಟು ಕಾಲ ಬೇಕು? ಈ ಲಾಭದ ದುರಾಸೆಯ ದುರಾಕ್ರಮಣದಲ್ಲಿ ನುಚ್ಚುನೂರಾದ ಜನಸಾಮಾನ್ಯರಿಗೆ, ಕಾರ್ಮಿಕರಿಗೆ ಇದು ಅರ್ಥವಾಗಿದೆಯೇ? ಎಲ್ಲೋ ದೂರದ ದೇಶದಲ್ಲಿ ಕಣ್ಣಿಗೆ ಕಾಣದ, ಅಗೋಚರವಾದ ರೀತಿಯಲ್ಲಿ ನಡೆಯುವ ಕ್ರಮಗಳಿಂದ ಹೇಗೆ ನೇರವಾಗಿ ಸಾವಿರಾರು ಕಾರ್ಮಿಕರ ಕುಟುಂಬಗಳು ಬೀದಿಗೆಸೆಯಲ್ಪಡುತ್ತವೆಂಬುದನ್ನು ಇಲ್ಲಿ ನೋಡೋಣ.

ಜಾಗತೀಕರಣದ ಉಗ್ರ ವಿರೋಧಿಗಳೆಂದು ರಾಷ್ಟ್ರಭಕ್ತಿ, ರಾಷ್ಟ್ರೀಯ ಸಂಸ್ಕೃತಿಯ ಮಂತ್ರವನ್ನೇ ತಂತ್ರವನ್ನಾಗಿ ಮಾಡಿಕೊಂಡ ಪರಿಶುದ್ಧ ಸಂಘ ಪರಿವಾರದ ನಿರ್ದೇಶಿತ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದು ಅಬ್ಬಗಾರುಡಿಯ ಸೌಜನ್ಯ, ಕಪಟ, ವಿನಯ ತೋರುವ ವಾಜಪೇಯಿ ಪ್ರಧಾನಿ ಆದ ಕೂಡಲೇ ತೆಗೆದುಕೊಂಡ ನಿರ್ಣಯ 'ಕೋಕ್' ಬೆಲೆಯನ್ನು 18000 ರೂ. ಪ್ರತಿಟನ್ನಿಗೆ ಹೆಚ್ಚಳ ಮಾಡುವುದು. ಈ 'ಕೋಕ್' ಕೈಗಾರಿಕೆಗಳ ಉತ್ಪಾದನಾ ಪ್ರಕ್ರಿಯೆಗಳಲ್ಲಿ ಪ್ರಮುಖ ಕಚ್ಚಾ ವಸ್ತುವಾಗಿದೆ. ಇದರ ತೀವ್ರ ಬೆಲೆ ಏರಿಕೆಯ ಕಾರಣ ಉತ್ಪಾದನಾ ವೆಚ್ಚ ಹೆಚ್ಚಾಗಿ ಬಳ್ಳಾರಿಯ ...00 ಕಾರ್ಮಿಕರು ಕೆಲಸ ಮಾಡುವ ಹಗರಿಯ ...ರ್ಬೈಡ್ ಕಾರ್ಖಾನೆ ಮತ್ತು ಸಿರಗುಪ್ಪದ ...ರೂಸಿಮೆಟಲ್ ಕಾರ್ಖಾನೆಯ 300 ಕ್ಕೂ ಹೆಚ್ಚು ಕಾರ್ಮಿಕರು ಕಾರ್ಖಾನೆಗಳ ಮುಚ್ಚುವಿಕೆಯಿಂದ ಬೀದಿ ಪಾಲಾಗಿದ್ದಾರೆ. ಎಂ.ವೈ.ಘೋರ್ಪಡೆಯವರ SMIOR ಕಬ್ಬಿಣ ಕಾರ್ಖಾನೆಯು ಈ ಧಾಳಿಯಲ್ಲಿ ಉಳಿಯಲಾಗಿಲ್ಲ. ಕಿರ್ಲೋಸ್ಕರ್ ಕೆಲವು ತಿಂಗಳು ಉತ್ಪಾದನೆ ನಿಲ್ಲಿಸಬೇಕಾಯಿತು. ಅಲ್ಲದೇ ವೀರಾವೇಶವಾಗಿ ದೇಶದಲ್ಲಿ ಕಾರ್ಗಿಲ್ ಯುದ್ಧವನ್ನು ನಡೆಸುವ ಅನಿವಾರ್ಯತೆ ಸೃಷ್ಟಿಸಿದ ಬಿಜೆಪಿ ಸರ್ಕಾರದ ಪಾಕಿಸ್ತಾನ ವಿರೋಧಿ ಭಾವನೆಗಳನ್ನು ಒಂದು ಕಡೆ ಕೆರಳಿಸುತ್ತಾ ಮತ್ತೊಂದೆಡೆ ಮುಕ್ತ ಆಮದು ನೀತಿಯನ್ನು ಅನುಸರಿಸಿ ಪಾಕಿಸ್ತಾನದಿಂದ ದೊಡ್ಡ ಮಟ್ಟದಲ್ಲಿ ಸಕ್ಕರೆ ಆಮದನ್ನು ಮಾಡಿಕೊಳ್ಳುತ್ತಾ ಅದಕ್ಕೆ ತನ್ನ ಸರಕಾರದ ಜವಾಬ್ದಾರಿ ಏನೇನು ಇಲ್ಲವೆಂಬಂತೆ ನುಣುಚಿಕೊಳ್ಳಲು ಪ್ರಯತ್ನಿಸಿದ ಕಾರಣ ಸಕ್ಕರೆ ಕೈಗಾರಿಕೆಯು ಮಾರುಕಟ್ಟೆಯ ಬಿಕ್ಕಟ್ಟಿಗೆ ಸಿಕ್ಕು ಕಾರ್ಮಿಕರಿಗೆ ಸಕಾಲದಲ್ಲಿ ವೇತನವಿಲ್ಲ. ರೈತರ ಕಬ್ಬಿಗೆ ಮಾರಾಟದ ಹಣ ಪಾವತಿಯಾಗದೆ ಬೆಳೆಗಾರ ರೈತರು, ಸಕ್ಕರೆ ಕಾರ್ಖಾನೆ ಕಾರ್ಮಿಕರನ್ನು ದಿಕ್ಕೆಟ್ಟ ದುಸ್ಥಿತಿಗೆ ತಳ್ಳಲಾಗಿದೆ.

ಮುಕ್ತ ರಫ್ತು ನೀತಿಯಿಂದಾಗಿ ಸಾರ್ವಜನಿಕ ಕೇಂದ್ರ MMTC ಕಬ್ಬಿಣ ಅದಿರು ವ್ಯವಹಾರ ಅತ್ಯಂತ ಕುಸಿತ ಉಂಟಾಗಿ ಬಳ್ಳಾರಿ ಜಿಲ್ಲೆಯ 3 ಸಾವಿರ ಕಬ್ಬಿಣ ಅದಿರು ವ್ಯಾಗನ್ ಲೋಡಿಂಗ್ ಕಾರ್ಮಿಕರು ಉದ್ಯೋಗ ಅವಕಾಶದಿಂದ ವಂಚಿತರಾಗಿ ಕಷ್ಟಕೋಟಲೆಗೆ ಸಿಕ್ಕಿಕೊಂಡಿದ್ದಾರೆ. ಯಾವುದೇ ಗಣಿಮಾಲೀಕ ನೇರವಾಗಿ ಕಬ್ಬಿಣ ಅದಿರು ರಫ್ತು ಮಾಡುವ ಅವಕಾಶ ಉಂಟಾದ ಕಾರಣ MMTC ಸಾರ್ವಜನಿಕರಂಗದ ಸಂಸ್ಥೆಯು ಮುಚ್ಚಿ ಹೋಗುವ ಸ್ಥಿತಿ ಉಂಟಾಗಿದೆ. ಈಗಾಗಲೇ ಲಾಭದಾಯಕವಾಗಿದ್ದ MMTC ಯ ಇತರ ಎಲ್ಲಾ ವ್ಯವಹಾರವನ್ನು ಖಾಸಗೀಕರಣಗೊಳಿಸಲು ಬಿಜೆಪಿಯ ಕೇಂದ್ರ ಸರಕಾರ ನಿರ್ಣಯಿಸಿದೆ.

- ಪ್ರಸನ್ನಕುಮಾರ್

ಆಂಧ್ರ: ವಿದ್ಯುತ್ ದರ ಏರಿಕೆ ವಿರೋಧಿಸಿ ಪ್ರತಿಭಟನೆ

ಜಾಗತೀಕರಣದ ಫಲವಾಗಿ ಏರಿಕೆಯಾಗಿರುವ ವಿದ್ಯುತ್ ದರವನ್ನು ವಿರೋಧಿಸಿ ಆಂಧ್ರ ಪ್ರದೇಶದಲ್ಲಿ ನಡೆಯುತ್ತಿರುವ ಸಮರಶೀಲ ಚಳುವಳಿ ಇಡೀ ದೇಶದ ಗಮನವನ್ನು ಸೆಳೆದಿದೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಧೋರಣೆಗಳ ವಿರುದ್ಧ ಮುಂದಿನ ದಿನಗಳಲ್ಲಿ ನಡೆಯಬೇಕಾದ ಹೋರಾಟಗಳಿಗೆ ಮಾದರಿಯಾಗಿದೆ.

ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾದ ಚಂದ್ರಬಾಬು ನಾಯ್ಡು, ದೇಶ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಮಾಲೀಕರ ಮೆಚ್ಚುಗೆ ಗಳಿಸಲು ಅವರ ಕೋರಿಕೆ ಮೀರಿ ಅವರಿಗೆ ಲಾಭ ತರುವಂತಹ ನೀತಿಗಳನ್ನು ಜಾರಿ ಮಾಡುತ್ತಿದ್ದಾರೆ. ಮಾತ್ರವಲ್ಲ, ಈ ಧೋರಣೆಗಳ ವಿರುದ್ಧ ಪ್ರಜಾಸತ್ತಾತ್ಮಕವಾಗಿ ಹೋರಾಟ ನಡೆಸುತ್ತಿರುವ

ಜಿ.ಸಿ.ಬಯ್ಯಾರೆಡ್ಡಿ

ರೈತ-ಕಾರ್ಮಿಕ ಜನ ಸಾಮಾನ್ಯರ ಮೇಲೆ ಭಯಾನಕವಾದ ದಮನಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಪೋಲೀಸರಿಗೆ ಪೂರ್ಣ ಅಧಿಕಾರವನ್ನು ನೀಡಿ, ಕನಿಷ್ಟ ಪ್ರಮಾಣದಲ್ಲಿ ಪ್ರತಿಭಟನೆ ನಡೆಸುವ ಜನರ ಮೇಲೆ ಮತ್ತು ಜನ ಸಂಘಟನೆಗಳು ಮಹಿಳೆಯರು, ಹಿರಿಯರು ಎನ್ನದೇ ಕ್ರೂರ ದಬ್ಬಾಳಿಕೆಯನ್ನು ನಡೆಸಿ, ನೂರಾರು ಜನರನ್ನು ಗಾಯಗೊಳಿಸುತ್ತಿರುವುದು ಮಾತ್ರವಲ್ಲ, ಸಾವಿರಾರು ಕಾರ್ಯಕರ್ತರನ್ನು ಬಂಧಿಸಿ ಹತ್ತಾರು ಕೇಸ್‌ಗಳನ್ನು ಹಾಕಿಸುತ್ತಿದ್ದಾರೆ. ತಮಗೆ ಮತ ನೀಡಿರುವ ಜನತೆಗಿಂತ ವಿಶ್ವಬ್ಯಾಂಕ್‌ಗೆ ತುಂಬಾ ವಿಧೇಯನೆಂದು ತೋರಿಸಿಕೊಳ್ಳುತ್ತಿದ್ದಾರೆ. ಈ ಹೋರಾಟಗಳಿಗೆ ನಾಯಕತ್ವ ನೀಡುತ್ತಿರುವ ವಿವಿಧ ಪಕ್ಷಗಳ ನಾಯಕರ ಮೇಲೆ, ಆ ಪಕ್ಷದ ಕಚೇರಿಗಳ ಮೇಲೆ ದಾಳಿಯನ್ನು ನಡೆಸುತ್ತಿದ್ದಾರೆ.

ವಿದ್ಯುತ್ ದರ ಏರಿಕೆಯ ವಿರುದ್ಧ ಚಳುವಳಿಗೆ ಸಮರಶೀಲವಾದ ನಾಯಕತ್ವವನ್ನು ನೀಡುತ್ತಿರುವ ಎಡಪಕ್ಷಗಳು, ಅದರಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ಕಾಂ. ಬಿ.ವಿ.ರಾಘವಲು ಮೇಲೆ ಅಮಾನುಷವಾದ ಹಲ್ಲೆಯನ್ನು ನಡೆಸಿ, ಬಟ್ಟೆಗಳನ್ನು ಹರಿದುದಲ್ಲದೆ, ಪಕ್ಷದ ರಾಜ್ಯ ಕಛೇರಿ ಮೇಲೆ ದಾಳಿಯನ್ನು ನಡೆಸಿ ಪೋಲೀಸರು ಗೂಂಡಾಗಳಂತೆ ವರ್ತಿಸಿದ್ದಾರೆ. ಇಷ್ಟಕ್ಕೆ ತೃಪ್ತಿಯಾಗದೆ ಚಂದ್ರಬಾಬು ಹೋರಾಟ ನಿರತರನ್ನು ಭಯಭೀತರನ್ನಾಗಿ ಮಾಡಲು ರಾತ್ರಿ ವೇಳೆಯಲ್ಲಿ ಅವರ ಮನೆಗಳಿಗೆ ನುಗ್ಗಿ ಧಳಿಸಿ ಅವರುಗಳನ್ನು ಬಂಧಿಸಿ ಸುಳ್ಳು ಕೇಸ್‌ಗಳನ್ನು ಹಾಕಿಸು ತ್ತಿದ್ದಾರೆ.

ಈ ಎಲ್ಲಾ ದೌರ್ಜನ್ಯ ಗಳನ್ನು ಹಿಮ್ಮೆಟ್ಟಿಸಿ ಹೋರಾಟ ತೀವ್ರಗೊಳ್ಳುತ್ತಿರುವುದನ್ನು ಕಂಡ ಚಂದ್ರಬಾಬು ಭೂಮಾಲಿಕರ ಖಾಸಗಿ ಸೇನೆಯಾದ 'ರಣಬೀರ ಸೇನೆ'ಯಂತಹ ತೆಲುಗು ಸೇನೆಯನ್ನು ಕಟ್ಟುವುದರ ಬಗ್ಗೆ ಮಾತನಾಡುತ್ತಿದ್ದಾರೆ. ಆದಾಗ್ಯೂ ಹೋರಾಟಗಳು ಇನ್ನಷ್ಟು ಸ್ಫೂರ್ತಿಯಿಂದ ತೀವ್ರಗೊಳ್ಳುತ್ತಿವೆ. ದರ ಏರಿಕೆ ಕೈಬಿಡುವತನಕ ಹೋರಾಟವನ್ನು ಮುಂದುವರಿಸಲು 9 ಎಡಪಕ್ಷಗಳು ಮತ್ತು ಕಾಂಗ್ರೆಸ್ ಪಕ್ಷಗಳು ನಿರ್ಧರಿಸಿವೆ.

ವಿಶ್ವಬ್ಯಾಂಕ್ ನಿರ್ದೇಶಿತ ವಿದ್ಯುತ್ ದರ ಏರಿಕೆಯ ವಿರುದ್ಧದ ಹೋರಾಟ ಆಂಧ್ರ ಪ್ರದೇಶದಲ್ಲಿ ತೀವ್ರತರ ಹಂತಕ್ಕೆ ಪ್ರವೇಶಿಸಿದೆ. ಜೂನ್ 4 ರಿಂದ ಜಾರಿಗೆ ಬರುವಂತೆ ಗೃಹ, ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಂಬಂಧಿಸಿ ವಿದ್ಯುತ್ ದರ ವಿಪರೀತವಾಗಿ ಏರಿಸಿ ಮೇ ಕೊನೆಯ ವಾರದಲ್ಲಿ ಆಂಧ್ರ ಪ್ರದೇಶ ವಿದ್ಯುತ್ ನಿಯಂತ್ರಣ ಆಯೋಗ (APERC) ಪ್ರಕಟಿಸಿದ ತಕ್ಷಣ ಹೋರಾಟವನ್ನು ಆರಂಭಿಸಲಾಗಿತ್ತು.

ಪ್ರಧಾನ ಪಾತ್ರ ವಹಿಸುತ್ತಿರುವ ಸಿಪಿಐ(ಎಂ)ಒಳಗೊಂಡು 9 ಎಡ ಪಕ್ಷಗಳು ವಿವಿಧ ರೂಪಗಳಲ್ಲಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ಸಂಘಟಿಸಲು ಕರೆ ನೀಡಿದವು. ಕಾಂಗ್ರೆಸ್ ಪ್ರತ್ಯೇಕವಾಗಿ ಪ್ರತಿಭಟನೆ ಗಳನ್ನು ನಡೆಸಿತು. ಹೋರಾಟಗಳಲ್ಲಿ ಜನತೆಯಿಂದ ಸಿಕ್ಕಿದ ಪ್ರಚಂಡ ಪ್ರತಿಕ್ರಿಯೆಯನ್ನು ಗಮನಿಸಿದ ಸರ್ಕಾರ ದಬ್ಬಾಳಿಕೆಯನ್ನು ಹರಿಯಬಿಟ್ಟಿತು. ಪ್ರಸ್ತುತ ಹೋರಾಟದ ವಿವರಗಳಿಗೆ



ಹೋಗುವ ಮೊದಲು ಆಂಧ್ರಪ್ರದೇಶದ ಭಯಾನಕ ವಿದ್ಯುತ್ ಸುಧಾರಣೆಗಳ ಕುರಿತು ತಿಳಿಯೋಣ.

ವಿಶ್ವಬ್ಯಾಂಕ್ ಸುಧಾರಣಾ ಯೋಜನೆ

ವಿಶ್ವಬ್ಯಾಂಕ್ ನಿರ್ದೇಶನದಂತೆ ವಿದ್ಯುತ್ ಕ್ಷೇತ್ರ ಪುನರ್‌ರಚನೆ ಯೋಜನೆಗಳನ್ನು ಜಾರಿ ಮಾಡುತ್ತಿರುವ ಇತರೆ ರಾಜ್ಯಗಳಾದ ಒರಿಸ್ಸಾ, ಹರಿಯಾಣ ಮತ್ತು ಇತರೆ ರಾಜ್ಯಗಳಂತೆಯೇ ಆಂಧ್ರ ಪ್ರದೇಶದ ವಿದ್ಯುತ್ ಸುಧಾರಣೆಗಳ ಕಥೆಯೂ ಇದೆ.1996 ರಲ್ಲಿ ಚಂದ್ರಬಾಬು ವಿಶ್ವಬ್ಯಾಂಕ್ ಜೊತೆ ಒಪ್ಪಂದಕ್ಕೆ ಸಹಿ ಮಾಡಿದರು. ಆಂಧ್ರ ಪ್ರದೇಶ ಆರ್ಥಿಕ ಪುನರ್‌ರಚನಾ ಯೋಜನೆ ಎಂದು ಕರೆಯಲ್ಪಡುವ ಈ ಯೋಜನೆಯಂತೆ ನೀರು ಮತ್ತು ವಿದ್ಯುತ್ ಸೇರಿದಂತೆ ಸೇವಾ ಕ್ಷೇತ್ರದಿಂದ ಸರ್ಕಾರ ಪೂರ್ಣ ಪ್ರಮಾಣದಲ್ಲಿ

ಪಶ್ಚಿಮ ಬಂಗಾಳದ ಮೇಲೆ ಚಂದ್ರಬಾಬುವಿನ ಸುಳ್ಳಿನ ಪುರಾಣ

ವಿದ್ಯುತ್ ದರ ಏರಿಕೆಗೆ ಸಂಬಂಧಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಮರ್ಶೆ, ವಾದವನ್ನು ಎದುರಿಸಲು ಕೈಲಾಗದೇ ಪಶ್ಚಿಮ ಬಂಗಾಳ ಕುರಿತು ಸುಳ್ಳುಗಳನ್ನು ಹೇಳುತ್ತಾ ಸಾಂದರ್ಭಿಕವಲ್ಲದ ವಿಮರ್ಶೆಗಳನ್ನು ನಡೆಸುತ್ತಾ ಸಮಸ್ಯೆಯನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಸುಳ್ಳುಗಳನ್ನು ತಿರಸ್ಕರಿಸಿ ಆಧಾರ ಸಮೇತ 2 ವಿವರವಾದ ಪತ್ರಗಳನ್ನು ಬರೆದ ನಂತರವು ಚಂದ್ರಬಾಬು ಸುಳ್ಳು ಪ್ರಚಾರವನ್ನು ಮುಂದುವರೆಸಿದ್ದಾರೆ. ಇನ್ನಾದರೂ ಸುಳ್ಳಿನ ಪ್ರಚಾರವನ್ನು ಕೈಬಿಡಬೇಕೆಂದು ಆಗ್ರಹಿಸುತ್ತ ಸಿ.ಪಿ.ಐ(ಎಂ) ಆಂಧ್ರ ಪ್ರದೇಶ ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವಲು ಈ ಕೆಳಗಿನ ವಿವರಗಳನ್ನು ನೀಡಿದ್ದಾರೆ.

ಸುಳ್ಳು ನಂ 1: ಬಂಗಾಳದಲ್ಲಿ ಕನಿಷ್ಟ ದರ ರೂ. 1.48

ವಾಸ್ತವವಾಗಿ ಬಂಗಾಳದಲ್ಲಿ ಕನಿಷ್ಟ ದರ 0.80 ಪೈಸೆ. ಚಂದ್ರಬಾಬು ಹೇಳಿದ್ದು ಸುಳ್ಳು ಎಂದು ಸಾಬೀತು ಮಾಡುವ ಆಧಾರಗಳನ್ನು ನೀಡಲಾಗಿದ್ದರೂ ಅವರು ಪದೆ ಪದೇ ಸುಳ್ಳು ಹೇಳುತ್ತಿರುವುದು ಆಶ್ಚರ್ಯಕರ.

ಸುಳ್ಳು ನಂ. 2: ಬಂಗಾಳದಲ್ಲಿ ಕೃಷಿಗೆ ಯೂನಿಟ್ ದರ ರೂ. 1.23

ಬಂಗಾಳದ ಅತಿ ಹೆಚ್ಚಿನ ಸಂಖ್ಯೆಯ ರೈತರು 35 ರಿಂದ 46 ಪೈಸೆ ವಿದ್ಯುತ್ ದರವನ್ನು ಪಾವತಿ ಮಾಡುತ್ತಿದ್ದಾರೆ. ಈ ಬಗ್ಗೆ ಕಾಗದ ಪತ್ರಗಳನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡಲಾಗಿದೆ. ಆದರೂ ಅವರು ಈ ವಿಷಯುವನ್ನು ಮರೆಮಾಡಿ, ಶ್ರೀಮಂತ ರೈತರು, ದೊಡ್ಡ ಸಂಸ್ಥೆಗಳಿಂದ ವಸೂಲಿ ಮಾಡುತ್ತಿರುವ 1.23 ರೂ. ದರವನ್ನು ಮಾತ್ರ ಪ್ರಚಾರ ಮಾಡುತ್ತಿದ್ದಾರೆ.

ಸುಳ್ಳು ನಂ. 3 : ಬಂಗಾಳ ರಾಜ್ಯ ಹಿಂದುಳಿದ ರಾಜ್ಯವಾಗಿಬಿಟ್ಟಿದೆ. ನಾವು ಸಹ ಅವರಂತೆ ಆಗಬೇಕೆ?

ಚಂದ್ರಬಾಬುವನ್ನು ಕೊಂಡಾಡುವ, ಅವರೂ ಸಹ ತಲೆಬಾಗಿರುವ ವಿಶ್ವಬ್ಯಾಂಕ್, ಪಶ್ಚಿಮ ಬಂಗಾಳ ವೇಗವಾಗಿ ಅಭಿವೃದ್ಧಿಯಾಗುತ್ತಿರುವ 6 ರಾಜ್ಯಗಳಲ್ಲಿ ಒಂದಾಗಿದೆ ಎಂದು ಹೇಳುತ್ತಿದೆ. ಆಂಧ್ರ ಪ್ರದೇಶದ ಸ್ಥಾನ 10ನೇಯದ್ದು ಎಂದು ಹೇಳಿದೆ. ನಮ್ಮರಾಜ್ಯದ ಜೊತೆ ಹೋಲಿಸಿ ನೋಡಿದರೆ ಉತ್ಪಾದನೆ, ತಲಾ ಆದಾಯ, ಬೆಳವಣಿಗೆಯ ವೇಗ, ಆರೋಗ್ಯ, ಆಹಾರ ಪದಾರ್ಥಗಳ ಉತ್ಪಾದನೆ, ಉತ್ಪಾದಕತೆಯಲ್ಲಿ ಇನ್ನು ಅನೇಕ ಅಂಶಗಳಲ್ಲಿ ಮುಂದೆಯಿದೆ.

ಕಳೆದ ದಶಕದಲ್ಲಿ ಅಭಿವೃದ್ಧಿ ಶೇಕಡವಾರು ಬಂಗಾಳದಲ್ಲಿ 4.9 ಇದ್ದರೆ ನಮ್ಮ ರಾಜ್ಯದಲ್ಲಿ ಶೇ 3.8 ರಷ್ಟು ಮಾತ್ರ. ಆಹಾರ ಪದಾರ್ಥಗಳ ಉತ್ಪಾದನೆ ಬಂಗಾಳದಲ್ಲಿ 154.28 ಲಕ್ಷ ಟನ್ ಇದ್ದರೆ, ಆಹಾರ ಧಾನ್ಯಗಳಿಗೆ ಹೆಸರುವಾಸಿಯಾದ ನಮ್ಮರಾಜ್ಯದಲ್ಲಿ 123.1 ಲಕ್ಷ ಟನ್‌ಗಳು ಮಾತ್ರ. ಕೊನೆಗೆ ಭತ್ತ ಉತ್ಪಾದನೆಯಲ್ಲಿಯು ಸಹ ಬಂಗಾಳ ನಮ್ಮಮೀರಿ ಹೋಗಿದೆ. ಬಂಗಾಳದಲ್ಲಿ 133.16 ಲಕ್ಷ ಟನ್ ಉತ್ಪಾದನೆಯಾದರೆ, ನಮ್ಮರಾಜ್ಯದಲ್ಲಿ 114.34 ಲಕ್ಷ ಟನ್. ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ಬಂಗಾಳ ಎಷ್ಟು ಮುಂದಿದೆ. ಹೆಕ್ಟೆರ್‌ಗೆ ನಮ್ಮರಾಜ್ಯದಲ್ಲಿ 1776 ಕೆ.ಜಿ. ಆದರೆ ಬಂಗಾಳದಲ್ಲಿ 2113 ಕೆ.ಜಿ.ಇಳುವರಿ ಬರುತ್ತಿದೆ. ಕಣ್ಣು ತೆರೆದು ನೋಡಿದರೆ ಈ ವಾಸ್ತವಗಳು ಕಾಣಿಸುತ್ತವೆಂದು ಕಣ್ಣು ಮುಚ್ಚಿಕೊಂಡಿದ್ದಾರಾ?

ಸುಳ್ಳು ನಂ. 4 : ಅಂತರಜಲ ಮೇಲೆ ಇದ್ದರೂ ವಿದ್ಯುತ್ ನೀಡದೆ, ಕೊಳವೆ ಬಾವಿಗಳನ್ನು ಹಾಕದೇ ಕೃಷಿ ಹಿಂದೆ ಬಿದ್ದಿದೆ.

ಚಂದ್ರಬಾಬುನ ತಲೆಕೆಳಗಿನ ತರ್ಕವನ್ನು ನೋಡಿದ ಯಾರಾದರೂ ಮೂಗಿನಮೇಲೆ ಬೆರಳು ಇಟ್ಟುಕೊಳ್ಳಬೇಕಾಗಿದೆ. ಕೃಷಿಯಲ್ಲಿ ನಮಗಿಂತ ಹಿಂದುಳಿದಿದ್ದರೆ ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ನಮಗಿಂತ ಹೆಚ್ಚು ಹೇಗೆ ಸಾಧ್ಯ? ನೀರು ಬಳಕೆಯಲ್ಲಿ ಬಂಗಾಳ ನಮ್ಮರಾಜ್ಯಕಿಂತ ತುಂಬಾ ಮುಂದುವರಿದಿದೆ. ಒಂದು ಲಕ್ಷ ಕೊಳವೆ ಬಾವಿಗಳಿದ್ದರೂ ಬಂಗಾಳದಲ್ಲಿ ಶೇ 71 ಸಾಗುವಳಿ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಚಂದ್ರಬಾಬು ಲೆಕ್ಕದ ಪ್ರಕಾರ 21 ಲಕ್ಷಕೊಳವೆ ಬಾವಿಗಳು ಇದ್ದರೂ ನಮ್ಮರಾಜ್ಯದಲ್ಲಿ ಶೇ. 44 ರಷ್ಟು ಭೂಮಿಗೆ ಮಾತ್ರವೇ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಬಂಗಾಳದಲ್ಲಿ ಬೃಹತ್, ಸಣ್ಣ ನೀರಾವರಿ ಯೋಜನೆಗಳ ಮೂಲಕ ನೀರಾವರಿ ಸೌಲಭ್ಯ ಹೆಚ್ಚಿನ ರೀತಿಯಲ್ಲಿ ಕಲ್ಪಿಸಲಾಗಿದೆ. ಗೋದಾವರಿ, ಕೃಷ್ಣ ನದಿ ನೀರಿನ ಬಳಕೆಯಲ್ಲಿನ ನಮ್ಮವಿಫಲತೆ ಕಾರಣದಿಂದಲೇ ನಾವು ಹಿಂದೆ ಬಿದ್ದಿದ್ದೇವೆ. ಬೇರೆ ದಾರಿಯಿಲ್ಲದೆ ಅನಿವಾರ್ಯವಾಗಿ ರೈತರು ಕೊಳವೆ ಬಾವಿಗಳ ಮೇಲೆ ಆಧಾರ ಪಡುವ ಸ್ಥಿತಿ ಉಂಟಾಗಿದೆ. ಕೃಷಿಗೆ ವಿದ್ಯುತ್‌ನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗಿಸಬೇಕಿದೆ. ನದಿ ನೀರನ್ನು ಒದಗಿಸುವ ಸ್ಥಿತಿ ಇದ್ದಿದ್ದರೆ ನಮಗೆ ಕೊಳವೆ ಬಾವಿಗಳ ಅಗತ್ಯ ಕಡಿಮೆಯಾಗುತ್ತಿರಲ್ಲಿಲ್ಲವೇ? ಕೊಳವೆ ಬಾವಿಗಳ ಮೇಲೆ ಆಧಾರ ಪಟ್ಟಿರುವುದು ಹಿಂದುಳಿದಿರುವಿಕೆಗೆ ನಿದರ್ಶನವಲ್ಲವೇ? ಈ ವಾಸ್ತವತೆಯನ್ನು ಮರೆತು, ಬಂಗಾಳದಲ್ಲಿ ಪಂಪ್‌ಸೆಟ್‌ಗಳು ಕಡಿಮೆ ಇವೆಯೆಂದು ವಿಮರ್ಶೆ ಮಾಡುವುದು ಅವಿವೇಕ ಎನ್ನಿಸಿಕೊಳ್ಳುವುದಿಲ್ಲವೇ?

ಸುಳ್ಳು ನಂ. 5 : ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳು ದರಿದ್ರ್ಯವನ್ನು ಬೆಳೆಸಿ, ಪೋಷಿಸುತ್ತಿದ್ದಾರೆ.

ತಲಾ ಆದಾಯ ಬಂಗಾಳದಲ್ಲಿಯೇ ಹೆಚ್ಚು. 1997-98 ರ ಲೆಕ್ಕಗಳ ಪ್ರಕಾರ ತಲಾ ಆದಾಯ ನಮ್ಮ ರಾಜ್ಯಗಳಲ್ಲಿ ರೂ. 2432 ಇದ್ದರೆ ಬಂಗಾಳದಲ್ಲಿ 3146 ಇದೆ. ಅಂದರೆ ರೂ. 714 ಹೆಚ್ಚು. ಮೇಲಿನ ವಿವರಗಳು ಚಂದ್ರಬಾಬು ಸುಳ್ಳುಗಾರನೆಂದು ಸ್ಪಷ್ಟಪಡಿಸುತ್ತಿವೆ.

ವಿಶ್ವಬ್ಯಾಂಕ್ ಕೊಟ್ಟಿರುವ ಲೆಕ್ಕಗಳ ಪ್ರಕಾರ ಬಡತನದ ರೇಖೆಗಿಂತ ಕೆಳಗೆ ಇರುವವರ ಸಂಖ್ಯೆ ಆಂಧ್ರ ಪ್ರದೇಶದಲ್ಲಿ ಶೇ30 ಇದ್ದರೆ ಬಂಗಾಳದಲ್ಲಿ ಶೇ 26 ರಷ್ಟು ಇದೆ. ಬಂಗಾಳದಲ್ಲಿ ಪ್ರತಿವರ್ಷ ಬಡತನ ಶೇ 4.2 ವೇಗದಲ್ಲಿ ಕಡಿಮೆಯಾಗುತ್ತಿದ್ದರೆ ನಮ್ಮ ರಾಜ್ಯಗಳಲ್ಲಿ ಶೇ 2.9 ವೇಗದಲ್ಲಿ ಬಡತನ ಕಡಿಮೆಯಾಗುತ್ತಿದೆ. ಸಾಕ್ಷರತೆಯಲ್ಲಿಯು ಬಂಗಾಳ ನಮಗಿಂತ ಮುಂದಿದೆ. ಬಂಗಾಳದಲ್ಲಿ ಶೇ 72 ಸಾಕ್ಷರತೆಯಿದ್ದರೆ ನಮ್ಮ ರಾಜ್ಯದಲ್ಲಿ ಶೇ 54 ರಷ್ಟು ಮಾತ್ರ. ಮಹಿಳಾ ಸಾಕ್ಷರತೆ ಬಂಗಾಳದಲ್ಲಿ ಶೇ 63 ಇದ್ದರೆ ನಮ್ಮ ರಾಜ್ಯದಲ್ಲಿ ಶೇ 43 ಮಾತ್ರ ಇದೆ. ಇಷ್ಟು ಸ್ಪಷ್ಟವಾಗಿ ವಾಸ್ತವಗಳು ಕಾಣಿಸುತ್ತಿದ್ದರೂ ಚಂದ್ರಬಾಬು ವಾಸ್ತವಗಳಿಗೆ ಭಿನ್ನವಾಗಿ ಪ್ರಕಟಣೆಗಳನ್ನು ಮಾಡುವುದನ್ನು ಗಮನಿಸಿದರೆ ಹೈಟೆಕ್ ಚಂದ್ರಬಾಬು ಸಮಾಚಾರ ದಾರಿದ್ರ್ಯತೆಯಿಂದ ನರಳುತ್ತಿರುವುದು ಸ್ಪಷ್ಟವಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ರಾಜ್ಯದ ಮುಖ್ಯಮಂತ್ರಿಯ ಮಾತುಗಳಿಗೆ ಎಷ್ಟು ಮೌಲ್ಯವಿರುತ್ತದೆ. ಈ ಸ್ಥಾನದಿಂದ ಹೇಳುವ ಪ್ರತಿ ಮಾತನ್ನು ವಾಸ್ತವವೆಂದು ಜನತೆ ನಂಬುತ್ತಾರೆ. ಆದ್ದರಿಂದ ಸಂದೇಹಕ್ಕೆ ಎಡೆಯಿಲ್ಲದಂತ ರೀತಿಯಲ್ಲಿ ವಾಸ್ತವಗಳನ್ನು ಹೇಳಬೇಕು. ನೀತಿ, ಸತ್ಯಗಳಂತಹ ಮೌಲ್ಯಗಳನ್ನು ರಕ್ಷಿಸುವ ಜವಾಬ್ದಾರಿ ಉನ್ನತ ಸ್ಥಾನಗಳಲ್ಲಿ ಇರುವವರ ಮೇಲೆ ಇರುತ್ತೆ. ಆದರೆ ಮುಖ್ಯಮಂತ್ರಿಯಾಗಿ ಚಂದ್ರಬಾಬು ಇಂತಹ ಮೌಲ್ಯಗಳಿಗೆ ತಿಲಾಂಜಲಿಯನ್ನು ನೀಡಿರುವುದು ಶೋಚನೀಯ.

ಹಿಂತೆಗೆಯುವುದು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೌಕರರ ಕಡಿತ.

ಇದರ ನಂತರ ರಾಜ್ಯ ಸರ್ಕಾರ ಆಂಧ್ರ ಪ್ರದೇಶ ವಿದ್ಯುತ್ ಪುನರ್ ರಚನಾ ಯೋಜನೆಗೆ ಸಂಬಂಧಿಸಿ ವಿಶ್ವಬ್ಯಾಂಕ್ ಜೊತೆ ಒಂದು ತಿಳುವಳಿಕೆಗೆ ಬಂದಿತು. ಈ ಒಪ್ಪಂದದಂತೆ ಆಂಧ್ರ ಪ್ರದೇಶ ರಾಜ್ಯ ವಿದ್ಯುತ್ ಮಂಡಳಿಯನ್ನು ವಿಭಜಿಸಿ ಆಂಧ್ರ ಪ್ರದೇಶ ಉತ್ಪಾದನಾ ನಿಗಮ (APGENCO) ಮತ್ತು ಆಂಧ್ರ ಪ್ರದೇಶ ಪ್ರಸರಣಾ ನಿಗಮ (APTRANSCO) ಗಳನ್ನಾಗಿ ಮಾಡಲಾಗಿದೆ. (ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿ(ಕೆ.ಇ.ಬಿ) ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ಲಿಮಿಟೆಡ್ (ಕೆ.ಪಿ.ಸಿ.ಟಿ.ಎಲ್)ಯಾಗಿ ಮಾರ್ಪಟ್ಟಿದೆ. ಎಂಬುದನ್ನು ಗಮನಿಸಬೇಕು). ವಿದ್ಯುತ್ ಉತ್ಪಾದನೆಯನ್ನು ಖಾಸಗಿಯವರಿಗೆ ವಹಿಸಲಾಗಿದೆ. ವಿದ್ಯುತ್ ಪ್ರಸರಣಾ ನಿಗಮ ಈ ಖಾಸಗಿಯವರಿಂದ ವಿಪರೀತವಾದ ಬೆಲೆಯನ್ನು ನೀಡಿ ವಿದ್ಯುತ್ತನ್ನು ಕೊಂಡುಕೊಳ್ಳುವ ಒಪ್ಪಂದಗಳನ್ನು ಮಾಡಿಕೊಂಡಿದೆ. ಈ ಬಗ್ಗೆ ರಾಜ್ಯದ ಜನತೆ, ವಿಧಾನಸಭೆ, ವಿಶೇಷವೆಂದರೆ ಕೆಲವು ಸಚಿವರುಗಳನ್ನು ಕತ್ತಲೆಯಲ್ಲಿ ಇಡಲಾಗಿದೆ. ಈ ಒಪ್ಪಂದಗಳಲ್ಲಿ ಸಾಕಷ್ಟು ಅಕ್ರಮಗಳು ನಡೆದಿವೆ. ಸರ್ಕಾರಿ ಲೆಕ್ಕಪರಿಶೋಧಕರ ವರದಿಗಳು ಇವನ್ನು ಬಯಲಿಗೆಳೆದಿವೆ.

ನಾಲ್ಕು ವಿದ್ಯುತ್ ವಿತರಣಾ ಕಂಪನಿಗಳನ್ನು ರಚಿಸಲಾಯಿತು. ನಂತರ ಇವುಗಳನ್ನು ಖಾಸಗಿ ಕಂಪನಿಗಳಲ್ಲಿ ಹಸ್ತಾಂತರಿಸಲಾಗುವುದೆಂದು ಪೆಬ್ರವರಿ 1999 ರಲ್ಲಿ ಚಂದ್ರಬಾಬು ಸರ್ಕಾರ ವಿಶ್ವಬ್ಯಾಂಕ್ ಜೊತೆ ಒಂದು ಒಪ್ಪಂದವನ್ನು ಮಾಡಿಕೊಂಡರು. ಇದರಂತೆ 5 ವರ್ಷಗಳಲ್ಲಿ 5 ಕಂತಿನಲ್ಲಿ ರಾಜ್ಯಕ್ಕೆ 4000 ಕೋಟಿಗಳ ಸಾಲ ಸಿಗುತ್ತವೆ. ಇದಕ್ಕೆ ಪ್ರತಿಫಲವಾಗಿ ಒಪ್ಪಂದದ ಅವಧಿಯಲ್ಲಿ ಪ್ರತಿವರ್ಷ ಶೇ 15 ರಷ್ಟು ವಿದ್ಯುತ್ ದರಗಳನ್ನು ಏರಿಸಬೇಕೆಂದು ವಿಶ್ವಬ್ಯಾಂಕ್ ಹೇಳಿದೆ.

ಆಂಧ್ರ ಪ್ರದೇಶ ವಿದ್ಯುತ್ ನಿಯಂತ್ರಣ ಆಯೋಗ (APERC) ರಚಿಸಲು ವಿಶ್ವಬ್ಯಾಂಕ್ ಸರ್ಕಾರದ ಮೇಲೆ ಒತ್ತಡ ಹೇರಿತು. ಈ ವಿದ್ಯುತ್ ನಿಯಂತ್ರಣ ಆಯೋಗ ವಿದ್ಯುತ್ ದರಗಳನ್ನು ನಿಯಂತ್ರಿಸಬೇಕು. (ಕರ್ನಾಟಕದಲ್ಲಿಯೂ ಇಂತಹದೊಂದು ಆಯೋಗವನ್ನು ರಚಿಸಲಾಗಿದೆ. ವಿದ್ಯುತ್ ದರದ ನಿರ್ಧಾರ ಈ ಆಯೋಗದ್ದೇ ಎಂಬ ನಾಟಕ ಆರಂಭವಾಗಿದೆ.) 1999 ಮಾರ್ಚ್‌ನಲ್ಲಿಯೇ ಚಂದ್ರಬಾಬು 'ವಿದ್ಯುತ್ ದರಗಳನ್ನು ಏರಿಸಬೇಕಾಗಿತ್ತು. ಆದರೆ ಮುಂಬರುತ್ತಿದ್ದ ವಿಧಾನಸಭಾ ಚುನಾವಣೆಗಳ ಕಾರಣದಿಂದ ಒಂದು ವರ್ಷ ಬೆಲೆ ಏರಿಕೆಯನ್ನು ತಡ ಮಾಡಲು ಅನುಮತಿ ನೀಡಬೇಕೆಂದು ಸರ್ಕಾರ ವಿಶ್ವಬ್ಯಾಂಕ್‌ನಲ್ಲಿ ಮನವಿ ಮಾಡಿಕೊಂಡಿತು. ಬಾಬು ಚುನಾವಣೆಗಳಲ್ಲಿ ಸೋಲುವುದರಿಂದ ಉಂಟಾಗಬಹುದಾದ ಅಪಾಯವನ್ನು ಮನಗಂಡು ವಿಶ್ವಬ್ಯಾಂಕ್, ಸರ್ಕಾರಕ್ಕೆ ಅವಕಾಶ ನೀಡಿತು. ನಗರಸಭಾ ಚುನಾವಣೆ ಗಳು ಸೇರಿದಂತೆ ಎಲ್ಲಾ ಚುನಾವಣೆಗಳು ಪೂರ್ಣಗೊಂಡ ನಂತರ ರಾಜ್ಯ ಸರ್ಕಾರ ವಿದ್ಯುತ್ ದರಗಳನ್ನು ಏರಿಸಿದೆ. ಮೊದಲಿಗೆ APERC ಶೇ 20 ರಷ್ಟು ಏರಿಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ಸರ್ಕಾರ ತಕ್ಷಣ ಅದಕ್ಕೆ ಅಂಗೀಕಾರ ನೀಡಿತು. ನಂತರ ಜನರ ಸಿಟ್ಟನ್ನು ಶಮನಗೊಳಿಸುವ ನಾಟಕ ಮಾಡಿ ಸಣ್ಣ ರಿಯಾಯಿತಿ ತೋರಿಸಿದಂತೆ ಮಾಡಿ ವಿಶ್ವಬ್ಯಾಂಕ್ ಒಪ್ಪಂದದಂತೆ ಶೇ 15 ರಷ್ಟು ಏರಿಕೆಯನ್ನು ಮಾಡಿದೆ.

ಗೃಹ ಬಳಕೆದಾರರು ಮತ್ತು ಕೃಷಿಕರು ಈ ಬೆಲೆಏರಿಕೆಗೆ ತತ್ತರಿಸಿ ಹೋಗಿದ್ದಾರೆ. ಟೆಲಿಸ್ಕೋಪಿಂಗ್ ಎಂಬ ಪದ್ಧತಿಯ ಹೆಸರಿನಲ್ಲಿ ಗೃಹ ಬಳಕೆದಾರರ ಕೆಲವು ವಿಭಾಗದ ಗ್ರಾಹಕರಿಗೆ ಶೇ 120 ರಷ್ಟು ಭಾರವನ್ನು ಹಾಕಲಾಗಿದೆ. 50 ರಿಂದ 200 ಯೂನಿಟ್ ವಿದ್ಯುತ್‌ನ್ನು ಉಪಯೋಗಿಸುವ ಗ್ರಾಹಕನಿಗೆ 1.20 ರೂ. ಇದ್ದ ಯೂನಿಟ್ ದರ ಈಗ 2.55 ರೂ. ಆಗಿದೆ. ತಿಂಗಳಿಗೆ 400 ಯೂನಿಟ್‌ಗಿಂತ ಹೆಚ್ಚಿಗೆ ಉಪಯೋಗಿಸುವವನಿಗೆ ಯೂನಿಟ್ ದರ 3.87 ರೂ. ಕೃಷಿ ಪಂಪ್‌ಸೆಟ್‌ಗಳಿಗೆ ಶೇ 61 ರಷ್ಟು ಏರಿಕೆ ಮಾಡಲಾಗಿದೆ. ಆದರೆ ದೊಡ್ಡ ಕೈಗಾರಿಕೆಗಳು ಬಳಸುವ ಹೈಟೆನ್ಷನ್ ವಿದ್ಯುತ್‌ಗೆ ದರ ಹೆಚ್ಚಳ ಕೇವಲ ಶೇ 4.5 . ಇದರಿಂದಲೇ ಈ ವಿದ್ಯುತ್ ದರ ಏರಿಕೆಯ ಸ್ವರೂಪ ಅರ್ಥವಾಗುತ್ತದೆ.

ರಾಜ್ಯವ್ಯಾಪಿ ಹೋರಾಟ

ಇತ್ತೀಚಿನ ದಿನಗಳಲ್ಲಿ ಹಿಂದೆ ಎಂದೂ ಇಲ್ಲದ ರೀತಿಯಲ್ಲಿ ಜನರು ತೀವ್ರವಾಗಿ ಈ ಬೆಲೆ ಏರಿಕೆಯ ವಿರುದ್ಧ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಅವರು ದೊಡ್ಡ ಪ್ರಮಾಣದಲ್ಲಿ ಬೀದಿಗೆ ಇಳಿದರು. APERC ಬೆಲೆ ಏರಿಕೆಯನ್ನು ಪ್ರಕಟಿಸಿದ ತಕ್ಷಣ ಸಿಪಿಐ(ಎಂ) ರಾಜ್ಯಾದ್ಯಂತ ಪ್ರದರ್ಶನಗಳಿಗೆ ಕರೆ ನೀಡಿತು. ಇಡೀ ರಾಜ್ಯದಲ್ಲಿ ಜನ ದೊಡ್ಡ ಪ್ರಮಾಣದಲ್ಲಿ ಹೋರಾಟಗಳಲ್ಲಿ ಭಾಗವಹಿಸಿದರು. ಹೆಚ್ಚು ಭಾದಿಸಲ್ಪಟ್ಟ ಮಧ್ಯಮ ವರ್ಗದ ಜನ ತಮ್ಮ ಆಕ್ರೋಶವನ್ನು ನೇರವಾಗಿ ಸರ್ಕಾರದ ವಿರುದ್ಧ ತಿರುಗಿಸಿದರು. ಇತ್ತೀಚಿನ ಚುನಾವಣೆಗಳಲ್ಲಿ ಚಂದ್ರಬಾಬು ಜಯ ಸಾಧಿಸಲು ಬಹುತೇಕ ಕಾರಣವಾಗಿದ್ದವರು ಇದೇ ಮಧ್ಯಮ ವರ್ಗದ ಜನ ಎಂಬುದು ಗಮನಿಸಬೇಕಾದ ಅಂಶ. ಇದರ ನಂತರ 9 ಎಡ ಪಕ್ಷಗಳು ಒಟ್ಟಿಗೆ ಸೇರಿ ಹೋರಾಟದ ಕಾರ್ಯಕ್ರಮವನ್ನು ತೀರ್ಮಾನಿಸಿದವು. ಸಿಪಿಐ(ಎಂ), ಸಿಪಿಐ ಅಲ್ಲದೆ ಇತರೆ ಕೆಲವು ನಕ್ಸಲ್‌ವಾದಿ ಪಕ್ಷಗಳು ಸೇರಿವೆ.

ಪ್ರತಿಭಟನಾ ಪ್ರದರ್ಶನಗಳು, ರ್‍ಯಾಲಿಗಳು, ರಸ್ತೆ ತಡೆ, ಭೂತದಹನ ಕಾರ್ಯಕ್ರಮಗಳು ನಗರ, ಪಟ್ಟಣ, ಹಳ್ಳಿ ಹೀಗೆ ರಾಜ್ಯವ್ಯಾಪಿ ಯಾಗಿ ನಡೆದವು. ಆರಂಭದಲ್ಲಿ ಎಡ [illegible] ಪಕ್ಷಗಳ ಕಾರ್ಯಕರ್ತರು ಬೀದಿಗೆ ಬಂದರೂ, ಆ ನಂತರ ರೈತರು, ಮಧ್ಯಮವರ್ಗದ ಜನ ಸಾಮಾನ್ಯರು ಇವರನ್ನು ಸೇರಿಕೊಂಡರು. ಚಳುವಳಿ ಎಲ್ಲಾ ವಿಭಾಗದ ಜನತೆ ನಡುವೆ ಮತ್ತು ರಾಜ್ಯದ ಮೂಲೆ ಮೂಲೆಗೂ ವಿಸ್ತರಿಸಿತು. ಕಾಂಗ್ರೆಸ್ ಆರಂಭದಲ್ಲಿ ಹಿಂದೆ ಮುಂದೆ ನೋಡಿದರೂ, ಜನತೆಯ ಮನೋಭಾವವನ್ನು ನೋಡಿ ಅವರೂ ಸಹ ಹೋರಾಟದ ಹಾದಿಗೆ ಇಳಿದರು. ಎಡ ಪಕ್ಷಗಳು ಮತ್ತು ಕಾಂಗ್ರೆಸ್ ಚಳುವಳಿಗೆ ಪ್ರತ್ಯೇಕ ಕರೆಗಳನ್ನು ನೀಡಿದವು. ಆದರೂ ಕೆಲವೊಮ್ಮೆ ಕರೆಗಳ ಜಾರಿ ಸಮ್ಮಿಳನಗೊಳ್ಳುತ್ತಿದ್ದವು.

ಸರ್ಕಾರದ ಪ್ರತಿ ಕಾರ್ಯಕ್ರಮ


ತನ್ನ ತಂತ್ರಗಳು ಪ್ರತಿಫಲ ನೀಡುತ್ತಿಲ್ಲವೆಂದು ಮನವರಿಕೆ ಯಾಗ ತೊಡಗಿದಾಗ ತೆಲುಗು ದೇಶಂ ನ ಮುಖಂಡ ತನ್ನ ಪಕ್ಷದ ಶಾಸಕರು, ಸಂಸತ್ ಸದಸ್ಯರು ಹಾಗೂ ಸ್ಥಳೀಯ ಮುಖಂಡರ ವಿಸ್ತೃತ ಸಭೆಯೊಂದನ್ನು ಕರೆದು [illegible] ಅಕ್ರಮ [illegible] ಸಂಪರ್ಕಗಳನ್ನು ಸಕ್ರಮಗೊಳಿಸಲು ಕರೆ ನೀಡಿದರು. TRANSCO ಕಂಪನಿಗೆ ಉಂಟಾಗುತ್ತಿರುವ ನಷ್ಟದಲ್ಲಿ ಅಕ್ರಮ ಸಂಪರ್ಕಗಳ ಪಾಲು ತೀರ ಸಣ್ಣ ಭಾಗ. ಆದರೆ ಜನರ ಗಮನವನ್ನು ವಿದ್ಯುತ್ ದರ ಏರಿಕೆಯಿಂದ ಬೇರೆ ಕಡೆ ತಿರುಗಿಸಲು ಇವರು ಜೂನ್ 16 ರಿಂದ 25 ರ ತನಕ ಅಕ್ರಮ ಸಂಪರ್ಕಗಳ ಸಕ್ರಮಕ್ಕಾಗಿ ಅರ್ಜಿಗಳನ್ನು ತೆಗೆದುಕೊಳ್ಳುವ ಕಾರ್ಯಕ್ರಮವನ್ನು ಹಮ್ಮಿಕೊಂಡರು. APERC, ಮುಖ್ಯಮಂತ್ರಿಗಳು, ಅವರ ಸಚಿವರು ಎಲ್ಲಾ ರೀತಿಯ ಸುಳ್ಳು ವಿವರಣೆಗಳನ್ನು ನೀಡುತ್ತಾ ದರ ಏರಿಕೆಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು. ದರ ಏರಿಕೆಗೆ ಕಾರಣವಾದ ವಿಶ್ವಬ್ಯಾಂಕ್ ಶರತ್ತುಗಳ ಕುರಿತು ಮಾತ್ರ ಮಾತನಾಡಲಿಲ್ಲ. ಬದಲಿಗೆ ಅಕ್ರಮ ಸಂಪರ್ಕಗಳು, ವಿದ್ಯುತ್ ಸೋರಿಕೆ, ಬೇರೆ ರಾಜ್ಯಗಳಿಂದ ಹೆಚ್ಚಿನ ದರವನ್ನು ನೀಡಿ ವಿದ್ಯುತ್ ಕೊಂಡುಕೊಳ್ಳುತ್ತಿರುವುದೇ. ಈ ಎಲ್ಲದಕ್ಕೂ

ಪುಟ 10ಕ್ಕೆ

ಆಂಧ್ರ-ಬಂಗಾಳ-ಕೇರಳ ಅಭಿವೃದ್ಧಿ ಹೋಲಿಕೆ

ಅಭಿವೃದ್ಧಿಸೂಚಕ	ಆಂಧ್ರ	ಬಂಗಾಳ	ಕೇರಳ
ವಿಶಾಲತೆ(ಸಾವಿರ ಚ.ಮಿ.)	275	89	39
ಜನಸಂಖ್ಯೆ(000)	66300	68078	29900
ಜಿ.ಎಸ್.ಡಿ.ಪಿ.(97-98)ಶೇ	4.9	7.2	-
ತಲಾ ಆದಾಯ(97-98)	2432	3146	2705
ಬೆಳವಣಿಗೆ ದರ(91-97) ಶೇ	3.8	4.9	4.9
ಸಾಕ್ಷರತೆ ಶೇ (1997)	54	72	93
ಮಹಿಳಾ ಸಾಕ್ಷರತೆ(1997)	43	63	90
ಬಡತನ ರೇಖೆಗಿಂತ ಕೆಳಗೆ ಇರುವ			
1978 (ಶೇ)	47	51.8	53.2
1994 (ಶೇ)	29.4	26.0	29.2
ಬಡತನ ಕಡಿಮೆಯ ಶೇಕಡಾವಾರು	2.9	4.2	3.7
ಆರೋಗ್ಯ			
96 - ಜನನ ವೇಗ ಶೇ	22.7	22.8	17.8
ಶಿಶು ಮರಣ (ಪ್ರತಿಸಾವಿರಕ್ಕೆ)	63	55	12
ಜೀವನ ಮಟ್ಟ (ಸಂ)			
89-93 ಒಟ್ಟು ಪುರಷರು	59.5	60.8	68.8
ಮಹಿಳೆಯರು	61.5	62.3	74.7
ಆಹಾರ ಪದಾರ್ಥಗಳ ಉತ್ಪಾದನೆ			-
ಲಕ್ಷ ಟನ್‌ಗಳಲ್ಲಿ	128.1	154.28	-
(98-99) ಅಕ್ಕಿ	114.34	133.16	-
ಆಹಾರ ಪದಾರ್ಥಗಳ			
ಉತ್ಪಾದಕತೆ (ಕೆ.ಜಿ.ಗಳಲ್ಲಿ)	1776	2113	-
ನೀರಾವರಿಗೊಂಡ ಭೂಮಿ (ಶೇ)	41	71	

ಗಮನಕ್ಕಾಗಿ : ಈ ಮೇಲಿನ ವಿವರಗಳು ವಿಶ್ವಬ್ಯಾಂಕ್, ಕೇಂದ್ರ ಸರ್ಕಾರ, ಬಂಗಾಳ ಮತ್ತು ಆಂಧ್ರ ಸರ್ಕಾರಗಳ ವರದಿಗಳಿಂದ ಪಡೆಯಲಾಗಿದೆ.



ಸ್ವದೇಶಿ ಜಾಗರಣ ಎಂಬ ಪ್ರಹಸನ

ಆರೆಸ್ಸೆಸ್ ನಾಯಕ ಸುದರ್ಶನ್ ಬಿಜೆಪಿಯ ಆರ್ಥಿಕ ನೀತಿ ಸರಿಯಿಲ್ಲ. 'ಸಂಖ್ಯಾವಾಹಿನಿ' ಎಂಬ ಇಂಡೋ-ಅಮೆರಿಕನ್ ಕಂಪ್ಯೂಟರ್ ಜಾಲ ಪ್ರಾಜೆಕ್ಟ್ 'ರಾಷ್ಟ್ರೀಯ ಭದ್ರತೆ'ಗೆ ಅಪಾಯಕಾರಿ, ಇಂಟರ್‌ನೆಟ್-ವ್ಯಾಪಾರ, ತೈಲ, ವಿದ್ಯುತ್‌ಶಕ್ತಿ ಕ್ಷೇತ್ರಗಳಲ್ಲಿ ಶೇಕಡಾ ನೂರು ವಿದೇಶಿ ಬಂಡವಾಳಕ್ಕೆ ಅನುವು ಮಾಡುವ ಸರ್ಕಾರದ ನಿರ್ಧಾರವನ್ನು 'ದೇಶ ಮಾರುವ' ಕ್ರಮ, ಸಾರ್ವಜನಿಕ ಕ್ಷೇತ್ರವನ್ನು ಖಾಸಗೀಕರಿಸುವ ತರಾತುರಿಯಲ್ಲಿ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅವನ್ನು ಸಾರಾಸಗಟಾಗಿ ಮಾರಿಬಿಡುವ ಅಪಾಯ ಇದೆ. ವಾಜಪೇಯಿ ಸರ್ಕಾರದ ಆರ್ಥಿಕ ನೀತಿ ಯಾವುದೇ ರೀತಿಯಿಂದ ದೇಶಕ್ಕೆ ಲಾಭದಾಯಕ ವಾಗಿಲ್ಲ. ಈ ವಿಚಾರವನ್ನು ಜನರ ಬಳಿ ಒಯ್ಯುವೆವು ಎಂದಿದ್ದಾರೆ. ಈಗಾಗಲೇ ಸಂಘ ಪರಿವಾರದ 'ಸ್ವದೇಶಿ ಜಾಗರಣ ಮಂಚ್' ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು.

ಇದು ಸಂಘ ಪರಿವಾರದ ಮಾಮೂಲಿ ಎರಡು-ನಾಲಗೆ ನೀತಿ ಎಂಬುದರ ಬಗ್ಗೆ ಏನೂ ಸಂಶಯವಿಲ್ಲ. ಆದರೆ ಜಾಗತೀಕರಣದ ಬಗ್ಗೆ ಸಂಘ ಪರಿವಾರ 'ಎರಡು ನಾಲಗೆ' ತಂತ್ರ ಬಳಸುತ್ತಿರುವುದು ಇದೇ ಮೊದಲು. ಇದು ಯಾಕೆ ಈಗ ಅಗತ್ಯವಾಗಿದೆ - ಜಾಗತೀಕರಣವಿರೋಧಿ ಚಳುವಳಿ ಅರ್ಥ ಮಾಡಿಕೊಳ್ಳಬೇಕು. ಜಾಗತೀಕರಣದ ಆರ್ಥಿಕ ನೀತಿ 'ರಾಷ್ಟ್ರೀಯ ಸಹಮತ' ಇರುವ ನೀತಿ ಎಂದು 1991 ರಿಂದಲೂ ಆಳುವ ಪಕ್ಷ, ಆಳುವ ಬೂರ್ಜ್ವಾ, ಭೂಮಾಲಕ ವರ್ಗ ಹೇಳುತ್ತಾ ಬಂದಿದೆ. ಅದರ ವಿರುದ್ಧ ಯಾವುದೇ ಚರ್ಚೆ, ಚಳುವಳಿ-ಕೆಲವು ತಿಕ್ಕಲುಗಳ ಕೆಲಸ ಅಷ್ಟೇ ಎಂದು ಅವರ ತುತ್ತೂರಿಯಾದ ಮಾಧ್ಯಮಗಳು ಹೇಳುತ್ತಾ ಬಂದಿವೆ. ಆದರೆ ಜಾಗತೀಕರಣದ ವಿರುದ್ಧ ಪ್ರತಿರೋಧ ಗಟ್ಟಿಯಾಗುತ್ತಲೇ, ವ್ಯಾಪಕವಾಗುತ್ತಲೇ ಬಂದಿದೆ. ಹೆಚ್ಚು ಹೆಚ್ಚು ಜನ, ಜನವಿಭಾಗಗಳು ಜಾಗತೀಕರಣದ ಆರ್ಥಿಕ ನೀತಿ, ದೇಶದ ಜನರ ಹಿತಾಸಕ್ತಿಗೆ ವಿರುದ್ಧವಾದದ್ದು ಎಂದು ಮನಗಾಣುತ್ತಿದ್ದಾರೆ.

ಇತ್ತೀಚೆಗೆ ಕರ್ನಾಟಕ, ಉತ್ತರ ಪ್ರದೇಶದ ಪಂಚಾಯತ್ ಚುನಾವಣೆ ಸೇರಿದಂತೆ ಬಿಜೆಪಿ ಹಲವು ಪ್ರಮುಖ ಚುನಾವಣೆಗಳಲ್ಲಿ ನೆಲಕಚ್ಚಿರುವುದು ಸಂಘ ಪರಿವಾರವನ್ನು ಚಿಂತೆಗೀಡುಮಾಡಿದೆ. ಈ ಎರಡು ನಾಲಗೆ ನೀತಿ ಜನರನ್ನು ಗೊಂದಲಕ್ಕೀಡು ಮಾಡುವ, ಕೋಪ ಸ್ವಲ್ಪಮಟ್ಟಿಗಾದರೂ ಶಮನ ಮಾಡುವ ನಾಟಕ. ಅಲ್ಲದೆ ಸಂಘ-ಪರಿವಾರದ ಕಾರ್ಯಕರ್ತರ ಬೆಂಬಲ ನೀಡುವ ಹಿತೈಷಿಗಳ ವಿಭಾಗವನ್ನು ಗೊಂದಲಕ್ಕೀಡುಮಾಡುವ ನಾಟಕ ಸಹ. ಕನಿಷ್ಟ ಪಾಪ 'ಸ್ವದೇಶಿ ಜಾಗರಣ ಮಂಚ್' ನ ಕಾರ್ಯಕರ್ತರಂತೂ ಸಾರಾಸಗಟು ವಿದೇಶಿಕರಣವನ್ನು ಬೆಂಬಲಿಸುವಂತಿಲ್ಲವಲ್ಲ. ಆಗ ಅವರ ಸಂಘಟನೆ ಹೆಸರೇ ಬದಲಾಯಿಸಬೇಕಾದೀತು. 'ನೀನು ಸತ್ತ ಹಾಗೆ ಮಾಡು, ನಾನು ಅತ್ತ ಹಾಗೆ ಮಾಡ್ತೀನಿ' ಎಂಬ ನಾಟಕ ಇದು. ಇಲ್ಲದಿದ್ದರೆ ಆರೆಸ್ಸೆಸ್‌ಗೂ, ಬಿಜೆಪಿಗೂ ಆರ್ಥಿಕ ನೀತಿಯಲ್ಲಿ ವ್ಯತ್ಯಾಸವೇನಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವಂಥದು. ಆರೆಸ್ಸೆಸ್ ನಿಜವಾಗಲೂ ಈ 'ಸ್ವದೇಶಿ' ನೀತಿಯಲ್ಲಿ ನಂಬಿಕೆ ಇಟ್ಟುಕೊಂಡಿದ್ದರೆ ಬಿಜೆಪಿಯನ್ನು ಅದಕ್ಕೆ ಒಲಿಸಲು ಏನೂ ಕಷ್ಟವಿಲ್ಲ ಅಂತ.

ಇದೇ ವಾರ ದೇಶದ ಆಳುವವರ್ಗದ 'ಬಿ' ಟೀಮಾದ ಕಾಂಗ್ರೆಸ್‌ನಲ್ಲೂ ಜಾಗತೀಕರಣದ ಬಗ್ಗೆ 'ಮರುಚಿಂತನೆ' ಆರಂಭವಾಗಿರುವುದು ಕಾಕತಾಳೀಯವಲ್ಲ. ಜಾಗತೀಕರಣದ ಬಗ್ಗೆ 'ಭಯಂಕರ ಉಭಯ ಸಮ್ಮತಿ' ಪ್ರದರ್ಶಿಸಿದ ನಂತರ ಇದೇ ವಾರ ಕಾಂಗ್ರೆಸ್ 'ರಾಗ' ಬದಲಾಯಿಸಿದೆ. ಕಾಂಗ್ರೆಸ್ ಆರ್ಥಿಕ ನೀತಿಯಲ್ಲಿ 'ಪುನರ್ವಿಮರ್ಶೆ ಅಗತ್ಯವೇ?' ಎಂದು ಪರಿಶೀಲಿಸಲು, ಬಡವರ-ಪರ ಆರ್ಥಿಕ ನೀತಿ ತಯಾರಿಸಲು ಒಂದು 44 ಸದಸ್ಯರ ಸಮಿತಿ ನೇಮಿಸಿದೆ. ಇದರ ನಾಯಕತ್ವ ಮಾಜಿ ಅರ್ಥಮಂತ್ರಿ ಪ್ರಣಬ್ ಮುಖರ್ಜಿ ವಹಿಸುತ್ತಾರೆ. ಈ ಜಾಗತೀಕರಣದ ನೀತಿಯನ್ನು ಆರಂಭಿಸಿದ ಮನಮೋಹನ್ ಸಿಂಗ್ ಈ ಸಮಿತಿಯಲ್ಲಿ ಇರುವುದಿಲ್ಲ. ಜಾಗತೀಕರಣ ಆಗ ಅಗತ್ಯ ಬದಲಾವಣೆಯಾಗಿದ್ದರೂ, ಕಳೆದ ಒಂದು ದಶಕದಲ್ಲಿ ಅದರ ಪರಿಣಾಮದ ವಿಮರ್ಶೆ ನಡೆಸಿ 'ಅಗತ್ಯ ಬದಲಾವಣೆ' ಮಾಡಬೇಕಾಗಿದೆ ಎಂದು ಕಾಂಗ್ರೆಸ್ ಹೇಳಿದೆ. ಮನಮೋಹನ್ ಸಿಂಗ್‌ರನ್ನು ಸಮಿತಿಯಿಂದ ಕೈಬಿಡುವ ಮೂಲಕ ಬಿಜೆಪಿಯಿಂದ ಮತ್ತು ತನ್ನದೇ ಹಿಂದಿನ ಜಾಗತೀಕರಣ ಆಧಾರಿತ ಆರ್ಥಿಕ ನೀಯನ್ನು ಬದಲಾಯಿಸುವ ಪ್ರಯತ್ನ ಕಾಂಗ್ರೆಸ್ ಮಾಡುತ್ತಿದೆ. ಜಾಗತೀಕರಣ-ಪರ ನೀತಿ ಬದಲಾಯಿಸದೆ ಜನಬೆಂಬಲ ಗಳಿಸಲು ಸಾಧ್ಯವಿಲ್ಲ ಎಂದು ಹಲವು ಚುನಾವಣೆಯ ಸೋಲು ಅನುಭವಿಸಿದ ಕಾಂಗ್ರೆಸ್‌ಗೂ ಅರ್ಥವಾಗಿದೆ.

ಇದು ಜನಪರ ಆರ್ಥಿಕ ನೀತಿಗಾಗಿ ಹೋರಾಡುತ್ತಿರುವವರಿಗೆ ಒಳ್ಳೆ ಸುದ್ದಿ ಅಲ್ಲವೇ?

ಕಾರಣವೆಂದು ಹೇಳತೊಡಗಿದರು. ಆದರೆ ಇವು ಯಾವು ಗಣನೀಯ ಕಾರಣಗಳಲ್ಲ. ಒಟ್ಟಾರೆ TRANSCO ನಷ್ಟದಲ್ಲಿ ಇಲ್ಲ. ಮೇಲೆ ತಿಳಿಸಿದ ನಷ್ಟಗಳಿಗೆ TRANSCO ದರಗಳ ರೂಪಗಳಲ್ಲಿ ಗ್ರಾಹಕರಿಂದ ಸಂಗ್ರಹ ಮಾಡುತ್ತಿದೆ. ವಾಸ್ತವ ಏನೆಂದರೆ ವಿದ್ಯುತ್ ಸೋರಿಕೆಯನ್ನು ಸಮರ್ಥವಾಗಿ ತಡೆಯಲು ಸಾಧ್ಯವಾಗಿದ್ದರೆ, ಸರ್ಕಾರ ವಿದ್ಯುತ್ ದರಗಳನ್ನು ಏರಿಸುವುದಲ್ಲ ಇಳಿಸಬಹುದಿತ್ತು. TRANSCO ವಾಸ್ತವವಾಗಿ ನಷ್ಟದಲ್ಲಿ ಇಲ್ಲ. ವಿದ್ಯುತ್ ಉತ್ಪಾದನೆ, ಪ್ರಸರಣೆ ಹಾಗೂ ವಿತರಣೆ ಮಾಡುವ ಖಾಸಗಿ ಕಂಪನಿಗಳಿಗೆ ಲಾಭ ಮಾಡಿಕೊಡಲು ಪುಸ್ತಕಗಳಲ್ಲಿ ನಷ್ಟವನ್ನು ತೋರಿಸಲಾಗುತ್ತಿದೆ. ಆಂಧ್ರ ಪ್ರದೇಶ ಥರ್ಮಲ್ ಯೋಜನೆಗಳಲ್ಲಿ ಒಂದು ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಲು ರೂ. 2.4 ಕೋಟಿ ವೆಚ್ಚವಾಗುವುದಿದ್ದರೆ, ಸರ್ಕಾರ ಒಂದು ಮೇ.ವ್ಯಾಟಿಗೆ ವಿದ್ಯುತ್‌ನ್ನು ರೂ. 4.5 ಕೋಟಿಗೆ ಖಾಸಗಿ ಕಂಪನಿಗಳಿಂದ ಕೊಂಡುಕೊಳ್ಳುವ ಒಪ್ಪಂದಗಳನ್ನು ಮಾಡಿಕೊಂಡಿದೆ. ಉದಾ: ವಿಶಾಖಪಟ್ಟಣಂನ ಹಿಂದೂಜಾ ವಿದ್ಯುತ್ ಯೋಜನೆ ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ವೆಚ್ಚ ರೂ. 6 ಕೋಟಿ ಎಂದು ಹೇಳಿಕೊಳ್ಳುತ್ತಿದೆ. ಈ ರೀತಿಯಲ್ಲಿ ವಿದ್ಯುತ್ ಉತ್ಪಾದನಾ ವೆಚ್ಚವನ್ನು ಕೃತಕವಾಗಿ ಏರಿಸದೆ ಖಾಸಗಿಕಂಪನಿಗಳ ಲಾಭವನ್ನು ಹೆಚ್ಚಿಸಲಾಗುತ್ತಿದೆ ಎಂದು ಲೆಕ್ಕ ಪರಿಶೋಧಕರಾದ COC ನ ಇತ್ತೀಚಿನ ವರದಿಗಳಿಂದ ಗೊತ್ತಾಗಿದೆ. ಪ್ರಸರಣ ಮತ್ತು ವಿತರಣಾ ನಷ್ಟಗಳ ಕುರಿತು ಸಹ ತಪ್ಪು ಲೆಕ್ಕಗಳನ್ನು ನೀಡಿ ಹೆಚ್ಚಿನ ಮಟ್ಟದ ನಷ್ಟಗಳನ್ನು ತೋರಿಸಲಾಗುತ್ತಿದೆ. ಸುಧಾರಣೆಗಳ ಮೊದಲು ಪ್ರಸರಣೆ ಮತ್ತು ವಿತರಣೆ ನಷ್ಟ ಶೇ 19 ರಷ್ಟು ಇದ್ದದ್ದು ವಿಶ್ವಬ್ಯಾಂಕ್ ಜೊತೆ ಒಪ್ಪಂದವಾದ ನಂತರ ಈ ನಷ್ಟ ಕೂಡಲೇ ಶೇ 38 ಕ್ಕೆ ಏರಿದೆ. ಶೇ 1 ರಷ್ಟು ನಷ್ಟ ರೂ. 140 ಕೋಟಿಗೆ ಸಮ. ಶೇ 32 ರಿಂದ 38 ನಡುವಿನ ಬದಲಾವಣೆ ಶೇ 6. ಇದು ರೂ. 840 ಕೋಟಿಗೆ ಸಮ. ಈಗ ಸರ್ಕಾರ ಬೆಲೆ ಏರಿಕೆ ಮೂಲಕ ಜನತೆಯ ಮೇಲೆ ಹಾಕಿರುವ ಹೊರೆ ರೂ 840 ಕೋಟಿಗೆ ಸಮವಾಗಿದೆ.

ಈ ರೀತಿಯ ತಪ್ಪು ಲೆಕ್ಕಾಚಾರಗಳನ್ನು ಹೇಳದಿದ್ದರೆ ದರ ಏರಿಕೆಯನ್ನು ಸಮರ್ಥಿಸಿಕೊಳ್ಳಲು ಆಧಾರವೇ ಇಲ್ಲ. ಆದರೆ ರಾಜ್ಯ ಸರ್ಕಾರ ವಿಶ್ವಬ್ಯಾಂಕ್ ನಿರ್ದೇಶನಗಳಿಗೆ ಶರಣಾಗಿ ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭ ಮಾಡಿಕೊಡಲು ವಿದ್ಯುತ್ ದರ ಏರಿಸಿದೆ.

ರಾಜ್ಯ ಸರ್ಕಾರದ ಸುಳ್ಳು ಪ್ರಚಾರಕ್ಕೆ ಸಿಐಪಿ(ಎಂ) ಮತ್ತು ಇತರೆ ಎಡಪಕ್ಷಗಳು ಸಮರ್ಥವಾಗಿ ಪ್ರತ್ಯುತ್ತರ ನೀಡಿದವು. ಸಿಪಿಐ(ಎಂ) ರಾಜ್ಯಸಮಿತಿ ಆರಂಭದಿಂದಲೂ ಆಂಧ್ರ ಪ್ರದೇಶ ವಿದ್ಯುತ್ ಕ್ಷೇತ್ರ ಪುನರ್‌ರಚನಾ ಕಾರ್ಯಕ್ರಮದ ಅಪಾಯ ಮತ್ತು ಸರ್ಕಾರ ಹಾಗೂ ವಿಶ್ವಬ್ಯಾಂಕ್ ನಡುವಿನ ಒಪ್ಪಂದವನ್ನು ತೀವ್ರವಾಗಿ ವಿರೋಧಿಸುತ್ತಾ ಬಂದಿತು. ದರ ಏರಿಕೆಯ ನಂತರ ಮಾಧ್ಯಮ ಮತ್ತು ಜನತೆಯು ಮುನ್ನೆಚ್ಚರಿಕೆಯ ದೂರದೃಷ್ಟಿಯನ್ನು ಅರ್ಥಮಾಡಿಕೊಂಡರು. ಜನತೆ, ನಿರ್ದಿಷ್ಟವಾಗಿ ಮಧ್ಯಮ ವರ್ಗದ ಬುದ್ಧಿಜೀವಿಗಳಿಗೆ ವಿಶ್ವಬ್ಯಾಂಕ್ ಶರತ್ತುಗಳ ಕುರಿತು ಮನವರಿಕೆಯಾಗ ತೊಡಗಿದೆ. ಸುಧಾರಣೆಗಳಿಗೆ ಮೂಲಭೂತವಾಗಿ ವಿರೋಧವಿಲ್ಲದಿದ್ದರೂ ಕಾಂಗ್ರೆಸ್ ಸಹ ಸರ್ಕಾರದ ವಾದಗಳನ್ನು ಬಯಲು ಮಾಡಿತು.

ರಾಜ್ಯ ಸರ್ಕಾರ ಒಂದುವಾರದ ಕಾರ್ಯಕ್ರಮ ಹಮ್ಮಿಕೊಂಡು ಹಳ್ಳಿ, ನಗರಗಳಿಗೆ TRANSCO ಅಧಿಕಾರಿಗಳನ್ನು ಕಳುಹಿಸಿ ವಿದ್ಯುತ್ ಪರಿಸ್ಥಿತಿ ಕುರಿತು ವಿವರಣೆ ನೀಡುವುದು ಹಾಗೂ ಅಕ್ರಮ ಸಂಪರ್ಕಗಳ ಸಕ್ರಮಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲು ತಿಳಿಸಿತು.

ಎಡಪಕ್ಷಗಳು ಒಂದುಕಡೆ, ಕಾಂಗ್ರೆಸ್ ಮತ್ತೊಂದು ಕಡೆ ನಿರಂತರ ಪ್ರಯತ್ನದಿಂದ ಸರ್ಕಾರ ಜನರ ಗಮನವನ್ನು ಬೇರೆ ಕಡೆ ಸೆಳೆಯಲು ಪ್ರಯತ್ನಿಸುತ್ತಿರುವ ತಂತ್ರವನ್ನು ಬಯಲು ಮಾಡಲು ಸಾಧ್ಯವಾಯಿತು ಮತ್ತು ಪ್ರತ್ಯೇಕ ಕರೆಗಳನ್ನು ನೀಡಿ ಸರ್ಕಾರದ ವೇದಿಕೆಗಳನ್ನೇ ಉಪಯೋಗಿಸಿ ದರ ಏರಿಕೆಯ ವಿರುದ್ಧ ಚಳುವಳಿಯನ್ನು ನಡೆಸಿದವು. ಈ ಸಭೆಗೆ ಬರುವಾಗ ಸಚಿವರನ್ನು ಮತ್ತು ಅಧಿಕಾರಿಗಳನ್ನು ಘೆರಾವೋ ಮಾಡಲು ಕರೆ ನೀಡಲಾಯಿತು. ಇದರ ಫಲವಾಗಿ ಜನರ ದೊಡ್ಡ ಸ್ಪಂದನೆ ಸಿಕ್ಕಿ ಹಲವಾರು ಹಳ್ಳಿ, ನಗರಗಳಲ್ಲಿ ಹೋರಾಟ ಯಶಸ್ವಿಯಾಗಿ ನಡೆದು ಸರ್ಕಾರಿ ಸಭೆಗಳನ್ನು ರದ್ದು ಮಾಡಬೇಕಾಯಿತು. ಎಲ್ಲೆಡೆ ಜನ ಸಿಪಿಐ(ಎಂ) ಪ್ರಕಟಿಸಿದ್ದ ಕಿರುಪುಸ್ತಕ. ಕರಪತ್ರದ ಸರಿಯಾದ ಮಾಹಿತಿಗಳೊಂದಿಗೆ ಅಧಿಕಾರಿಗಳ ಜೊತೆಗೆ ವಾದಕ್ಕೆ ಇಳಿದು ಸರ್ಕಾರಿ ಸಭೆಗಳನ್ನು ಪರಿಣಾಮಕಾರಿ ಜನರ ವೇದಿಕೆಗಳಾಗಿ ಮಾರ್ಪಡಿಸಿದರು.

ಬರ್ಬರ ದಬ್ಬಾಳಿಕೆ

ಜನತೆಯ ದೊಡ್ಡ ಪ್ರಮಾಣದ ಪ್ರತಿಕ್ರಿಯೆಯಿಂದ ಸರ್ಕಾರ ವಿಪರೀತ ದಾಳಿ ದಬ್ಬಾಳಿಕೆಯನ್ನು ಹರಿಯಬಿಟ್ಟಿತು. ಪೋಲೀಸ್‌ದಾಳಿ ಎಡಪಕ್ಷಗಳು ನಿರ್ದಿಷ್ಟವಾಗಿ ಸಿಪಿಐ(ಎಂ) ಮೇಲೆ ಕೇಂದ್ರೀಕರಿಸಲಾಯಿತು. ವಿಜಯವಾಡ, ಹೈದ್ರಾಬಾದ್, ತಿರುಪತಿ ಇತ್ಯಾದಿ ಕಡೆಗಳಲ್ಲಿ ಜನತೆಯ ಮೇಲೆ ಕ್ರೂರ ಪೋಲೀಸ್ ದಾಳಿ ನಡೆಯಿತು. ನೂರಾರು ಜನ ಗಾಯಗೊಂಡರು. ಸಾವಿರಾರು ಜನರನ್ನು ಬಂಧಿಸಲಾಯಿತು. ಪೋಲೀಸ್ ಲಾಠಿ ಚಾರ್ಜ್, ಬಂಧನ ಪ್ರತಿನಿತ್ಯದ ಕಾರ್ಯಕ್ರಮವಾಯಿತು. ಪೋಲೀಸರು ಮಹಿಳೆಯರು, ಮುಖಂಡರು ಎನ್ನದೇ ಅತ್ಯಂತ ಕ್ರೂರವಾಗಿ ದೌರ್ಜನ್ಯಗಳನ್ನು ನಡೆಸಿದರು. ಈ ದಬ್ಬಾಳಿಕೆ ತಾರಕಕ್ಕೇರಿ ಕೊನೆಗೆ ಸಿಪಿಐ(ಎಂ) ಮತ್ತು ಇತರೆ ಎಡಪಕ್ಷಗಳ ರಾಜ್ಯ ಕಚೇರಿಗಳ ಮೇಲೆ ದಾಳಿ ನಡೆಸುವ ಮಟ್ಟಕ್ಕೆ ಹೋಗಿದೆ.

ಮುಖ್ಯಮಂತ್ರಿಗಳು ಜನರಿಂದ ಚಳುವಳಿಗೆ ಸಿಗುತ್ತಿರುವ ಮನ್ನಣೆಯನ್ನು ನೋಡಿ ಹತಾಶೆಯಿಂದ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ, ಕೇರಳದ ಎಡ ಪ್ರಜಾಪ್ರಭುತ್ವ ರಂಗದ ವಿದ್ಯುತ್ ಇತರೆ ಸಾಧನೆಗಳ ಬಗ್ಗೆ ಸುಳ್ಳು ಪ್ರಚಾರವನ್ನು ಹರಿಯಬಿಟ್ಟರು. ಇದನ್ನು ಸಮರ್ಥವಾಗಿ ಎದುರಿಸಲಾಯಿತು. (ಈ ಬಗ್ಗೆ ಪ್ರತ್ಯೇಕ ಲೇಖನವನ್ನು ನೋಡಿ)

ಚಳುವಳಿ ಮುಂದುವರಿದಿದೆ

ಚಳುವಳಿಯನ್ನು ಇನ್ನಷ್ಟು ದೃಢ ಮತ್ತು ವ್ಯಾಪಕಗೊಳಿಸಲು 9 ಎಡಪಕ್ಷಗಳು ನಿರ್ಧರಿಸಿವೆ. ವಿದ್ಯುತ್ ದರ ಏರಿಕೆಯನ್ನು ರದ್ದು ಮಾಡುವ ತನಕ ಈ ಹೋರಾಟವನ್ನು ಮುಂದುವರಿಸಲು ತೀರ್ಮಾನಿಸಿ, ಜೂನ್ 28 ರಿಂದ ಜುಲೈ 2 ರ ತನಕ ಪ್ರಚಾರ ಜಾಥಾಗಳನ್ನು ಸಂಘಟಿಸಿ, ಜುಲೈ 5 ರಿಂದ 8 ರ ತನಕ ಮಂಡಲ್ ಕಚೇರಿಗಳ ಎದುರು ಸರದಿ ಉಪವಾಸ ಸತ್ಯಾಗ್ರಹಗಳನ್ನು ನಡೆಸುವುದು ಮತ್ತು ಜುಲೈ 10 ರಿಂದ 15 ರ ತನಕ ಎಲ್ಲಾ ಗ್ರಾಮಗಳಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿ, ಗ್ರಾಮ ಪಂಚಾಯತಿ ನಗರಸಭೆಗಳಲ್ಲಿ ಧರ ಏರಿಕೆಯ ವಿರುದ್ಧ ನಿರ್ಣಯಗಳನ್ನು ಅಂಗೀಕಾರ ಮಾಡಲಾಗುವುದು. ಜುಲೈ 16-20 ರ ತನಕ ವಿದ್ಯುತ್ ದರ ಏರಿಕೆಯನ್ನು ವಿರೋಧಿಸಿ ಮಹಜರ್ ವರದಿಗಳನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡುವುದು. ನಗರಗಳಲ್ಲಿ ವಿಚಾರಸಂಕಿರಣ ಗಳನ್ನು ಸಂಘಟಿಸುವುದು. ಜುಲೈ 24 ಮತ್ತು 25 ರಂದು ರಾಜ್ಯಾದ್ಯಂತ ಮಂಡಲ್ ಕಚೇರಿಗಳ ಪಿಕೆಟಿಂಗ್ ಮತ್ತು 31 ರಂದು ಜಿಲ್ಲಾಧಿಕಾರಿಗಳ ಕಚೇರಿಗಳ ಪಿಕೆಟಿಂಗ್‌ಗಳನ್ನು ನಡೆಸಲು ನಿರ್ಣಯಿಸಲಾಗಿದೆ.

ಇಷ್ಟೆಲ್ಲ ಹೋರಾಟಗಳ ನಂತರವು ಸರ್ಕಾರ ತನ್ನ ಹಠಮಾರಿತನವನ್ನು ಬಿಟ್ಟು ವಿದ್ಯುತ್ ದರ ಏರಿಕೆಯನ್ನು ಕೈಬಿಡದಿದ್ದರೆ 9 ಎಡಪಕ್ಷಗಳು ವಿಧಾನಸಭೆ ಚಲೋ ಮತ್ತು ಆಂಧ್ರ ಬಂದ್ ಮಾಡಲು ಉದ್ದೇಶಿಸಿವೆ.

ಮುಖ್ಯಮಂತ್ರಿಗಳು ಜನತೆಯ ಆಕ್ರೋಶವನ್ನು ಅರ್ಥ ಮಾಡಿಕೊಂಡು ವಿದ್ಯುತ್ ದರ ಏರಿಕೆಯನ್ನು ಕೈ ಬಿಡಬೇಕು. ಪ್ರತಿಪಕ್ಷಗಳ ಚಳುವಳಿಯನ್ನು ಎದುರಿಸಲು ಸಾಧ್ಯವಾಗದೇ ಪೋಲೀಸ್ ಸೌಜನ್ಯದ ಜೊತೆಗೆ ತನ್ನ ಖಾಸಗಿ 'ತೆಲುಗು ಸೇನೆ'ಯನ್ನು ರಚಿಸಿ ಚಳುವಳಿಯನ್ನು ದಮನ ಮಾಡಲು ಹೊರಟಿರುವ ಪ್ರಯತ್ನ ತಕ್ಷಣ ನಿಲ್ಲಿಸಬೇಕು. ಇಲ್ಲವಾದಲ್ಲಿ ಇದರ ಪರಿಣಾಮ ತೀರ ಗಂಭೀರವಾಗುತ್ತದೆ. ವೀರ ತೆಲಂಗಾಣ ರೈತ ಹೋರಾಟದಲ್ಲಿ ಖಾಸಗಿ ಸೇನೆಗಳನ್ನು, ಕೊನೆಗೆ ಭಾರತ ಸರ್ಕಾರದ ಸೈನ್ಯವನ್ನು ಸಮರ್ಥವಾಗಿ ಎದುರಿಸಿ ಹೋರಾಟ ಮಾಡಿರುವ ಚರಿತ್ರೆ ಇರುವ ಆಂಧ್ರದ ಜನತೆ ಇಂತಹ ಬೆದರಿಕೆಗಳನ್ನು ಹಿಮ್ಮೆಟ್ಟಿಸಲು ಶಕ್ತರಾಗಿದ್ದಾರೆ ಎಂದು 9 ಎಡಪಕ್ಷಗಳ ಸಮಿತಿ ಎಚ್ಚರಿಸಿದೆ.

○

ಕಲ್ಕತ್ತ ಕಾರ್ಪೋರೇಷನ್ ಚುನಾವಣೆ

ಪುಟ 2 ರಿಂದ

ಯಂತ್ರವು ಹಾಳಾದುದರಿಂದ ಪುನ: ಮತದಾನ ನಡೆದು ವಿಜಯಗಳಿಸುವುದರೊಂದಿಗೆ. ಸಾಲ್ಟ್‌ಲೇಕ್ ಮುನಿಸಿಪಾಲಿಟಿ ಸಿಪಿಐ(ಎಂ) ತೆಕ್ಕೆಗೆ ಬಂದಿದೆ.

ಕಲ್ಕತ್ತ ಕಾರ್ಪೊರೇಶನ್ ಯಾವ ಪಕ್ಷಕ್ಕೂ ಬಹುಮತ ಇಲ್ಲ.

ಕಲ್ಕತ್ತ ಮಹಾನಗರಪಾಲಿಕೆ ಚುನಾವಣೆಯಲ್ಲಿ ಯಾವ ಪಕ್ಷ ಗುಂಪಿಗೂ ಬಹುಮತ ವಿಲ್ಲದಿದ್ದರೂ ಸಂದರ್ಭ ಸಾಧಕ ಕಾಂಗ್ರೆಸ್ ತಟಸ್ಥವಾಗಿ ಉಳಿದುದರಿಂದ ತೃಣಮೂಲ-ಬಿಜೆಪಿ ಅಭ್ಯರ್ಥಿ ಮೇಯರ್ ಆಗಿ ಆಯ್ಕೆಯಾದರು. ಕೋಮುವಾದಿ ಬಿಜೆಪಿಯೊಂದಿಗೆ ಯಾವುದೇ ರಾಜಿ ಇಲ್ಲ ಎಂದು ಘೋಷಿಸಿಕೊಂಡ ಕಾಂಗ್ರೆಸ್ ಅಂತಿಮವಾಗಿ ತನ್ನ ಕಮ್ಯುನಿಷ್ಟ್ ವಿರೋಧಿ ನೀತಿಯನ್ನು ಪ್ರದರ್ಶಿಸಿತು. ಕೋಮುವಾದಿ ಬಿಜೆಪಿ ಬೆಂಬಲಿತ ತೃಣಮೂಲ ಅಭ್ಯರ್ಥಿಯನ್ನು ಗೆಲ್ಲಿಸಿತು.

ಎಡರಂಗಕ್ಕೆ ಹಿನ್ನಡೆಯೇ? ಪಾನ್‌ಸ್ಕೂರಾ ಲೋಕಸಭಾ ಉಪ ಚುನಾವಣೆಯಲ್ಲಿ ಎಲ್ಲಾ ಪ್ರತಿಗಾಮಿಗಳೂ ಸೇರಿ ಎಡರಂಗ ಬೆಂಬಲಿತ ಸಿಪಿಐ ಅಭ್ಯರ್ಥಿ ಸೋತ ನಂತರ ಕಲ್ಕತ್ತದಲ್ಲಿ ಮೇಯರ್ ಸ್ಥಾನ ಗಿಟ್ಟಿಸಲು ಸಾಧ್ಯವಾಗಲಿಲ್ಲ ಎಂಬಕಾರಣ ನೀಡಿ, ಎಡರಂಗಕ್ಕೆ ದೊಡ್ಡ ಹಿನ್ನಡೆ ಎಂಬ ವಾದ ಬರುತ್ತಿದೆ. ಹಾಗೆ ನೋಡಿದರೆ, 1995 ರಲ್ಲೂ ಕಲ್ಕತ್ತಾ ಮಹಾನಗರ ಪಾಲಿಕೆಯಲ್ಲಿ ಎಡರಂಗಕ್ಕೆ ನಿಚ್ಚಳ ಬಹುಮತ ವಿರಲಿಲ್ಲ. 141 ಸ್ಥಾನಗಳಲ್ಲಿ 70 ಸ್ಥಾನಗಳಲ್ಲಿ ಮಾತ್ರ ಎಡರಂಗ ಗೆದ್ದಿದ್ದು 66 ಸ್ಥಾನಗಳಲ್ಲಿ ಅಂದಿನ ಕಾಂಗ್ರೆಸ್ ಗೆದ್ದಿತ್ತು. ಬಿಜೆಪಿ ಎರಡು ಮತ್ತು ಸ್ವತಂತ್ರರು 3 ಸ್ಥಾನಗಳನ್ನು ಗೆದ್ದಿದ್ದರು. ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದವರೊಬ್ಬರು ಎಡರಂಗಕ್ಕೆ ಬೆಂಬಲ ನೀಡಿದುದರಿಂದ ಸಿಪಿಐ(ಎಂ) ಅಭ್ಯರ್ಥಿ ಮೇಯರ್ ಆಗಿ ಆಯ್ಕೆಯಾಗಿದ್ದರು. ನಂತರದಲ್ಲಿ 66 ಕಾಂಗ್ರೆಸ್ ಕೌನ್ಸಿಲರ್‌ಗಳ ಪೈಕಿ 36 ಜನ ತೃಣಮೂಲ ಕಾಂಗ್ರೆಸಿಗೆ ಪಕ್ಷಾಂತರ ಗೈದ್ದರು.

ಈ ಬಾರಿ ನಡೆದ ಚುನಾವಣೆಯಲ್ಲಿ ಎಡರಂಗಕ್ಕೆ 61 ಸ್ಥಾನಗಳೂ ತೃಣಮೂಲ ಬಿಜೆಪಿಗೆ 61 ಸ್ಥಾನಗಳು ಲಭಿಸಿದ್ದವು. ಉಳಿದ 19 ಸ್ಥಾನಗಳಲ್ಲಿ ಕಾಂಗ್ರೆಸಿಗೆ 15, ಸ್ವತಂತ್ರರು 3 ಮತ್ತು ನ್ಯಾಶನಲಿಸ್ಟ್ ಕಾಂಗ್ರೆಸ್ ಪಾರ್ಟಿ-1 ಸ್ಥಾನ ಪಡೆದಿವೆ. ಈ ಹಿಂದೆ ನಡೆದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಸತತವಾಗಿ ಎಡರಂಗ ಅಭ್ಯರ್ಥಿಗಳು ಸೋಲುತ್ತಾ ಬಂದಿದ್ದರು. ಇದಕ್ಕೂ ಕಾರಣಗಳಿಲ್ಲದಿಲ್ಲ. ಪೂರ್ವ ಭಾರತದ ಹಲವಾರು ರಾಜ್ಯಗಳಿಗೆ ಬಿಹಾರ, ಒರಿಸ್ಸಾ, ಈಶಾನ್ಯ ರಾಜ್ಯಗಳು ಕಲ್ಕತ್ತವೊಂದೇ ಮಹಾನಗರ ಹಾಗಾಗಿ ಸಾವಿರಾರು ಜನರು ಕೆಲಸವನ್ನು ಅರಸುತ್ತಾ ಬರುತ್ತಾರೆ ಸಾಲದೆಂಬಂತೆ ಕೇಂದ್ರ ಸರಕಾರದ ದಿವಾಳಿ ಕೋರ ನೀತಿಯಿಂದಾಗಿ ಹಲವಾರು ಕೈಗಾರಿಕೆಗಳು ಮುಚ್ಚಿವೆ. ವರ್ಗ ಪ್ರಜ್ಞೆ, ಈ ರಾಜಕೀಯ ಅಂಶಗಳನ್ನು ಅರಿಯದ ಜನರ ಸಿಟ್ಟು 24 ವರ್ಷಗಳಿಂದ ಸತತವಾಗಿ ಅಧಿಕಾರ ನಡೆಸುತ್ತಿರುವ ಎಡರಂಗ ಸರಕಾರದ ಮೇಲೆ ಬರುತ್ತಿದೆ.

ಇನ್ನೊಂದು ಪ್ರಮುಖವಾದ ಅಂಶಎಂದರೆ, ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಭೂಸುಧಾರಣೆ ಮತ್ತು ಗ್ರಾಮಿಣ ಅಭಿವೃದ್ಧಿ ಯಿಂದಾಗಿ ಹಳ್ಳಿಗಳಿಂದ ಬಡ ಜನರು ಕಲ್ಕತ್ತಕ್ಕೆ ವಲಸೆ ಬರುವುದು ನಿಂತಿದೆ.

ಆದರೂ ಕಳೆದ 15 ವರ್ಷಗಳಲ್ಲಿ ಕಲ್ಕತ್ತಾ ಮಹಾ ನಗರ ಪಾಲಿಕೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗವು ಅಧಿಕಾರ ನಡೆಸಿದಂದಿನಿಂದ ಸಾಕಷ್ಟು ಅಭಿವೃದ್ಧಿಗಳಾಗಿವೆ ಎಂಬುದನ್ನು ಯಾರೂ ಅಲ್ಲಗಳೆಯಲಾಗದು.

ಮಮತಾ ಬ್ಯಾನರ್ಜಿ ರೈಲ್ವೆ ಮಂತ್ರಿ ಅಥವಾ ಬಂಗಾಳ ಮಂತ್ರಿ?

ಮೇಲಿನ ಎಲ್ಲಾ ಚುನಾವಣೆಗಳ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ರೈಲ್ವೆ ಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಗೂಂಡಾ ಪಡೆಗಳ ಜೊತೆ ಬಂಗಾಳದಲ್ಲಿ ಬೀಡು ಬಿಟ್ಟಿದ್ದಾರೆ. ಬಹುಶ: ಮುಂದಿನ ಒಂದು ವರ್ಷದವರೆಗೂ (ಅಸೆಂಬ್ಲಿ ಚುನಾವಣೆ) ಅವರು ಅಲ್ಲಿಯೇ ತಂಗಬಹುದು. ಖಾತೆ ಬದಲಾಯಿಸುವುದರಲ್ಲಿ ನಿಸ್ಸೀಮರಾದ ಪ್ರಧಾನ ಮಂತ್ರಿ ವಾಜಪೇಯಿ ಮಮತಾ ಬ್ಯಾನರ್ಜಿಯವರನ್ನು ರೈಲ್ವೆ ಖಾತೆಯ ಜತೆಯಲ್ಲಿ ಮುಂಧಿನ ಒಂದು ವರ್ಷಕ್ಕೆ ಬಂಗಾಳದ ಉಸ್ತುವಾರಿ ಸಚಿವರನ್ನಾಗಿ ನೇಮಿಸಲೂ ಬಹುದು.

ಏನೇ ಆಗಲಿ ಐ.ಎಂ.ಎಫ್. ವಿಶ್ವ ಬ್ಯಾಂಕ್ ವಿಶ್ವ ವ್ಯಾಪಾರ ಸಂಘಟನೆ (WTO) ಗಳಿಂದ ಪ್ರೇರಿತವಾದ ಆರ್ಥಿಕ ಧೋರಣೆಗಳಿಗೆ ಸಂಘಟಿತ ತಡೆಯೊಡ್ಡುತ್ತಿರುವುದು ಸಿಪಿಐ(ಎಂ) ನೇತೃತ್ವದ ಎಡರಂಗ ಮಾತ್ರ. ಆದ್ದರಿಂದಲೇ ದೇಶದ ದೊಡ್ಡ ಬಂಡವಾಳಶಾಹಿಗಳು ಹಾಗೂ ವಿದೇಶಿ ಹಣಕಾಸು ಬಂಡವಾಳ ಎಡರಂಗದ ಭದ್ರಕೋಟೆಯನ್ನು ಬುಡಮಟ್ಟ ಕೀಳಲು ಎಲ್ಲಾ ಪ್ರಯತ್ನ ನಡೆಸುತ್ತಿವೆ. ಇದಕ್ಕೆ ಬಂಗಾಳದ ಜನತೆ ಅವಕಾಶ ನೀಡುವುದಿಲ್ಲ ಎಂದು ಆತ್ಮ ವಿಶ್ವಾಸದಿಂದ ಹೇಳುತ್ತಾರೆ ಜನಪ್ರಿಯ ಮುಖ್ಯಮಂತ್ರಿ ಕಾಂ। ಜ್ಯೋತಿಬಸು

○

...ಸಂಘ ಪರಿವಾರದ ಕೈವಾಡ?

ಪುಟ 4 ರಿಂದ

ಜಾನ್ ಲೂಥರ್ನ್ ಚರ್ಚ್‌ಗೆ ಬಂದು ಬಾಂಬ್ ದಾಳಿಯಿಂದ ಅದರ ಬಾಗಿಲು-ಕಿಟಕಿಗಳಿಗಾದ ಹಾನಿಗಳನ್ನು ಪ್ರತ್ಯಕ್ಷ ವೀಕ್ಷಿಸಿದರು. ಚರ್ಚ್‌ನ ಫಾದರ್ ಮತ್ತಿತರ ಮುಖ್ಯಸ್ಥರನ್ನು ಭೇಟಿ ಮಾಡಿ ಸಾಂತ್ವನ ಸೌಹಾರ್ದ ವ್ಯಕ್ತ ಗೊಳಿಸಿದರು. ರಾಜ್ಯ ಗೃಹಸಚಿವ ಮಲ್ಲಿಕಾರ್ಜುನ ಖರ್ಗೆ ಮತ್ತಿತರ ಸಚಿವರೊಂದಿಗೆ ಆಶ್ವಾಸನೆ ನೀಡಿದರು. ಕೇಂದ್ರ ಸರಕಾರದ ಸಿಬಿಐ ಸದ್ಯ ಬಿಜೆಪಿಯ ರಾಜಕೀಯ ವೈರಿಗಳನ್ನು ಬೇಟೆಯಾಡುವು ದರಲ್ಲೇ ನಿರತವಾಗಿದೆ. ಬಿಜೆಪಿ-ಸಂಘ ಪರಿವಾರದವರ ಕೈವಾಡವಿರುವುದನ್ನು ಸಿಬಿಐ ಹೊರಗೆಡವಲಾರದೆಂದು ಸಂಶಯಿಸ ಬೇಕಾಗುವುದು. ದಿ. 10 ರಂದು ಸಂಜೆ ಸಮುದಾಯ, ಇಪ್ಟಾ, ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಉತ್ತರಕನ್ನಡ ಲೇಖಕಿಯರ ಸಂಘ, ವಿಮಾ ನೌಕರರ ಸಂಘ, ಎ.ಐ.ಎಸ್.ಎಫ್., ಮತ್ತು ಇತರ ಸಾಮೂಹಿಕ ಸಂಘಟನೆಗಳ 30 ಪ್ರತಿನಿಧಿಗಳು ಜಿಲ್ಲಾಧಿಕಾರಿಗಳಿಗೆ ಈ ದುರ್ಘಟನೆಯನ್ನು ಖಂಡಿಸಿ ಮನವಿಯನ್ನು ಸಲ್ಲಿಸಿದರು. ಈ ಮಧ್ಯೆ ಬಿಜೆಪಿ-ಸಂಘ ಪರಿವಾರದವರು ಅವಳಿ ನಗರದಲ್ಲಿ ತಮ್ಮ ರಾಜಕೀಯ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದು, ಒಂದಲ್ಲ ಒಂದು ವಿಚ್ಛಿದ್ರಕಾರಿ ಕೃತ್ಯಗಳಲ್ಲಿ ತೊಡಗಿಸಿಕೊಂಡು ತಮ್ಮ ರಾಜಕೀಯ ಪ್ರಭಾವವನ್ನು ಪುನರುಜ್ಜೀವನಗೊಳಿಸಲು ವಿಫಲ ಯತ್ನ ಮಾಡುತ್ತಿದ್ದಾರೆ. ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಕೋಮುವಾದಿಗಳ - ಮೂಲಭೂತವಾದಿಗಳ ದುಷ್ಕೃತ್ಯಗಳ ಕುರಿತು, ಫ್ಯಾಸಿಸ್ಟ್ ಪ್ರವೃತ್ತಿಯ ಕುರಿತು ಇನ್ನಷ್ಟು ಜನಜಾಗೃತಿ ಗೊಳಿಸುತ್ತಿರಬೇಕು.

ದಶಲಕ್ಷ ತಾಯಂದಿರ ಮೊರೆ!

ವರ್ಷಕ್ಕೆ ಒಂದೆರಡು ಬಾರಿ ಅಮೆರಿಕಕ್ಕೆ ಒಂದೆರೆಡು ವಾರದ ಭೇಟಿ ನೀಡುವ ಐಕ್ಯರಂಗದ ಮಿತ್ರರೊಬ್ಬರು ಇತ್ತೀಚಿನ ಭೇಟಿಯ ಅನುಭವದ ಚಿತ್ರ


ಅಮೆರಿಕಕ್ಕೆ ಬಂದಾಗಲೆಲ್ಲ, ಇಲ್ಲಿನ ಸುದ್ದಿ ಮಾಧ್ಯಮಗಳನ್ನು ತಡಕಾಡುವುದು ನನ್ನ ಅಭ್ಯಾಸ - ಇಲ್ಲಿ ಏನು ಬದಲಾವಣೆ ಆಗಿದೆ? ಹೊಸದೇನಾದರೂ ಇದೆಯಾ ಅಂತ ಹುಡುಕಾಟದಲ್ಲಿ. ಕಳೆದ ಬಾರಿ ಬಂದಾಗಲೂ, ಇಂಡಿಯಾದಲ್ಲಿ ಇದ್ದಾಗಲೂ ಸ್ಕೂಲ್‌ಗಳಲ್ಲಿ ಹುಡುಗರು ಗನ್ - ಯುದ್ಧದಲ್ಲಿ ತೊಡಗಿರುವ ಕಳವಳಕಾರಿ ಸುದ್ದಿ ನೋಡಿದ್ದೆ. ಈಗ ಒಂದೆರೆಡು ವಾರಕ್ಕೊಮ್ಮೆ ಇಂತಹ ಘಟನೆ ಅಮೆರಿಕದ ಯಾವುದೇ ಭಾಗದಿಂದ ವರದಿಯಾಗುತ್ತಿರುತ್ತದೆ. ನನಗೆ ಯಾವಾಗಲೂ ಆಶ್ಚರ್ಯವಾಗುತ್ತಿತ್ತು. ಸ್ಕೂಲು ಹುಡುಗರಿಗೆ ಗನ್ ಹೇಗೆ ಸಿಗುತ್ತದೆ ಎಂತ. ಅವರ ಮನೆಯಿಂದ ಎಂತ ತಿಳಿಯಲು ಸಂಶೋಧನೆ ಮಾಡಬೇಕಾಗಿಲ್ಲ. ಆದರೆ ಸರಾಸರಿ ಮನೆಯಲ್ಲಿ ಗನ್‌ನ ಅಗತ್ಯ ಏಕೆ ಎಂತಲೂ ಅರ್ಥವಾಗಿಲ್ಲ. ಅದೇನೇ ಇರಲಿ ಕಳೆದ ಕೆಲವು ವರ್ಷಗಳಿಂದ ಸಾಂಕ್ರಾಮಿಕವಾಗಿರುವ ಈ ಸ್ಕೂಲ್-ಗನ್ ಹಿಂಸಾಚಾರದ ಬಗ್ಗೆ ಸರ್ಕಾರ ಏನು ಮಾಡುತ್ತಿಲ್ಲ ಎಂಬುದು ಇನ್ನೂ ಆಶ್ಚರ್ಯಕರವಾಗಿತ್ತು.

'ದಶಲಕ್ಷ ತಾಯಂದಿರ ಜಾಥಾ'

ಈ ಬಾರಿ ಹೋದಾಗ, ಸ್ಕೂಲ್-ಗನ್ ಹಿಂಸಾಚಾರ ತಡೆಗಟ್ಟಲು ಮೂಲಭೂತವಾಗಿ ಗನ್ ಲೈಸೆನ್ಸ್ ಮೇಲೆ ತೀವ್ರ ನಿರ್ಬಂಧ ಹೇರಿಸಬೇಕು. ತೀರಾ ಅಗತ್ಯವಿರುವವರೆಗೆ ಬಿಟ್ಟು, ಇತರರಿಗೆ ಗನ್ ಲೈಸೆನ್ಸ್ ಸುಲಭವಾಗಿ ಸಿಗಬಾರದು ಎಂದು ಒತ್ತಾಯಿಸುತ್ತ ಮಿಲಿಯನ್ ಮಾಮ್ ಮಾರ್ಚ್ ಸಂಘಟಿತವಾಗಿದ್ದರ ಬಗ್ಗೆ ಟಿ.ವಿ.ಯಲ್ಲಿ ನೋಡಿದೆ. ಅಂದರೆ ಹತ್ತು ಲಕ್ಷಕ್ಕೂ ಹೆಚ್ಚು ಮಹಿಳೆಯರು (ಸ್ಕೂಲ್‌ಗೆ ಹೋಗುವ



ಮಕ್ಕಳ ತಾಯಂದಿರು) ದೇಶಾದ್ಯಂತ ಜಾಥಾ, ಮೆರವಣಿಗೆ ನಡೆಸಿದ್ದರು. ವಾಶಿಂಗ್‌ಟನ್‌ನ ಜಾಥಾ ಅಧ್ಯಕ್ಷ ಕ್ಲಿಂಟನ್ ಭೇಟಿ ಮಾಡಿ 'ಗನ್ ನಿಯಂತ್ರಣ' ಕಾನೂನು ತರುವಂತೆ ಒತ್ತಾಯಿಸಿದರು. ವೀರಾವೇಶದಿಂದ ಘೋಷಣೆ ಕೂಗುತ್ತಿದ್ದ ಮಹಿಳೆಯರ ಜಾಥಾದ ಮೊದಲ ಸಾಲಿನಲ್ಲಿದ್ದವರು ಇಂತಹ ಸ್ಕೂಲು-ಗನ್ ಹಿಂಸಾಚಾರದಲ್ಲಿ ತಮ್ಮ ಕಂದಮ್ಮಗಳನ್ನು ಕಳೆದುಕೊಂಡವರು. ತಮ್ಮ ಕಂದರ ಫೋಟೋ ಇದ್ದ ಪೋಸ್ಟರುಗಳನ್ನು ಹಿಡಿದಿದ್ದರು. ಇದು ನಿಮ್ಮ ಕಂದಮ್ಮಗಳಿಗೆ ಆಗಬೇಕೆ?, 'ಗನ್ ನಿಯಂತ್ರಣ ಇಲ್ಲದಿದ್ದರೆ ನಿಮ್ಮ ಕಂದಮ್ಮ ಫೋಟೋ ಇಲ್ಲಿರುತ್ತದೆ' ಎಂಬ ಅರ್ಥದ ಘೋಷಣೆಗಳು ಪೋಸ್ಟರುಗಳಲ್ಲಿದ್ದವು. ಅಧ್ಯಕ್ಷ ಕ್ಲಿಂಟನ್ ದಶಲಕ್ಷ ತಾಯಂದಿರ ಒತ್ತಾಯ ಬೆಂಬಲಿಸಿ ಮಾತನಾಡಿದರೂ, ಅವರ ಮಾತುಗಳು ತಮಾಷೆಯಾಗಿದ್ದವು. ಸೆನೆಟ್ ಇಂತಹ ಕಾನೂನು ತರಲು ಬಹಳ ಸಾರಿ ಪ್ರಯತ್ನ ಪಟ್ಟಿದ್ದರೂ. ಲಕ್ಷಾಂತರ ತಾಯಂದಿರ ಒತ್ತಾಯ ಇದ್ದರೆ ಇದು ಸುಲಭವಾದೀತು ಎಂತ. ಪ್ರಪಂಚದ ಅತ್ಯಂತ ಪ್ರಬಲ ದೇಶದ ಪ್ರಬಲ ಅಧ್ಯಕ್ಷ ಸ್ಕೂಲ್ ಕಂದಮ್ಮಗಳ ಕೊಲೆಯಾಗುತ್ತಿರುವುದನ್ನು ತಡೆಯಲು ಕಾನೂನು ಮಾಡುವ ಬಲ ಹೊಂದಿಲ್ಲವೇ?



ಇವರಿಗೆ ಕೇಳಿಸುತ್ತಿದೆಯೇ?

ರೈಫಲ್ ಮಾಫಿಯಾ

ಈ ಬಗ್ಗೆ ನಾನು ವಿಚಾರಿಸಿದಾಗ ತಿಳಿಯಿತು - ಕಾನೂನುಗಳನ್ನು ಮಾಡುವುದು ಅಮೆರಿಕದಲ್ಲಿ ಅಧ್ಯಕ್ಷರ ಮರ್ಜಿಯ ಪ್ರಕಾರವೂ ಅಲ್ಲ, ಅಲ್ಲಿನ ಪಾರ್ಲಿಮೆಂಟಿಗೆ ಜನರಿಂದ ಚುನಾಯಿಸಲಾದ ಸದಸ್ಯರ ಮರ್ಜಿಯ ಪ್ರಕಾರವೂ ಅಲ್ಲ. ಬದಲಾಗಿ 'ಪ್ರಬಲ ಕೈಗಾರಿಕಾ ಲಾಬಿ'ಗಳ ಮರ್ಜಿಯ ಮೇಲಿರತ್ತದೆ. 'ತೈಲ ಲಾಬಿ'"ಟೆಲಿವಿಷನ್ ಲಾಬಿ' 'ಮಿಲಿಟರಿ ಕೈಗಾರಿಕಾ ಲಾಬಿ' ಈ ರೀತಿ ಹಲವು ಲಾಬಿಗಳು ಅವರ ಹಣದ ಚೀಲ ದೊಡ್ಡದಿದ್ದಷ್ಟು ಅವರ 'ಲಾಬಿ' ಪ್ರಬಲ, ಈ ಎಲ್ಲಾ ಸದಸ್ಯರು ಮತ್ತು ಅಧ್ಯಕ್ಷರನ್ನು ನಿಜವಾಗಿ ಆರಿಸುವುದು(ಕನಿಷ್ಟ ಹಣ ಕೊಟ್ಟು ಗೆಲ್ಲಿಸಿ ಬೇಕಾದಂತೆ ಕುಣಿಸುವುದು) ಅವರೇ. ಗನ್ ತಯಾರಿಕರ, ಮದ್ದು ಗುಂಡು ತಯಾರಕರ ಲಾಬಿ ಬಹಳ ಪ್ರಬಲವಂತೆ. ಅವರದ್ದು ಒಂದು ಸಂಘಟನೆ ಸಹ ಇದೆಯಂತೆ. ನೇಶನಲ್ ರೈಫಲ್ ಅಸೋಸಿಯೇಷನ್ (ಎನ್.ಆರ್.ಎ) ಅಂತ. 'ದಶಲಕ್ಷ ತಾಯಂದಿರ ಜಾಥಾ' ನಡೆದಲ್ಲೆಲ್ಲಾ ಈ ಎನ್.ಆರ್.ಎ. ದ ಮಹಿಳಾ ಸದಸ್ಯರು ಪ್ರತಿ-ಪ್ರದರ್ಶನ ನಡೆಸಿದ್ದರಂತೆ. ಎನ್.ಆರ್.ಎ. ಬಹುಸಂಖ್ಯಾತರ ಸದಸ್ಯರನ್ನು 'ಖರೀದಿ ಮಾಡಿ' ಯಾವುದೇ ರೀತಿಯ ಗನ್ ನಿಯಂತ್ರಣಾ ಕಾನೂನು ಬರದಂತೆ ತಡೆಯುತ್ತದಂತೆ. ಹೀಗಿದೆ ಅತ್ಯಂತ ಪ್ರಬಲ ಪ್ರಜಾಪ್ರಭುತ್ವದ ಅವಸ್ಥೆ! ದಶಲಕ್ಷ ತಾಯಂದಿರು ತಮ್ಮ ಕಂದಮ್ಮಗಳ ಜೀವಕ್ಕಾಗಿ ಬೀದಿಗಿಳಿಯುವಂತೆ ಮಾಡುತ್ತದೆ. ಬೀದಿಗಿಳಿದಾಗಲೂ ಕೇರ್ ಮಾಡುವುದಿಲ್ಲ. ○

..........ರೆಫ್ಯೂಜಿ

ಪುಟ 12 ರಿಂದ

ಮದುವೆ ಮಾಡಿಸುವುದು ಮದುವೆ ನಂತರ ಹಿಂತಿರುಗಿ ಹೋಗುವಾಗ ಕರಿನಾಳಿಗೆ ಏಕಾಏಕಿಯಾಗಿ ಉಂಟಾಗುವ ಹೆರಿಗೆ ನೋವು, ಮೂರು ಜನ ಗಂಡಸರ ಮಧ್ಯೆ ಒಂದು ಹೆಣ್ಣು ಚೀರಾಡುವಾಗ ಗಡಿ ಬೇದ ಮರೆತು ಎರಡೂ ಗಡಿ ರಕ್ಷಣಾ ಪಡೆಯ ಮುಖ್ಯಸ್ಥರು ಒಂದಾಗಿ ಎರಡೂ ಗಡಿಯಾಚೆ ನಿಂತಿರುವ ಮಹಿಳೆಯರನ್ನು ಹೆರಿಗೆ ಮಾಡಿಸಲು ಕರೆಯುವುದು ಅದಕ್ಕೆ ಸ್ಪಂದಿಸಿ ಎರಡೂ ರಾಷ್ಟ್ರಗಳ ಹೆಂಗಸರು ಓಡಿ ಬಂದು ಒಂದಾಗಿ ಹೆರಿಗೆ ಮಾಡಿಸುವುದು ಹುಟ್ಟಿನೊಂದಿಗೆ ಯಾವುದೇ ಬೇದ ಬರದು ಎಂಬುದನ್ನು ಸೂಚಿಸುತ್ತದೆ. ಅಂತೆಯೆ ಮಗು ಜನನವಾದೊಡನೆ ಮಗು ಯಾವ ದೇಶಕ್ಕೆ ಸೇರಿದ್ದು ಎಂಬ ಜಾಕಿ ಹಾಗೂ ಸುನಿಲ್‌ರ ಮಧ್ಯೆ ನಡೆಯುವ ಮಾತುಕತೆ ಅಂತ್ಯದಲ್ಲಿ ಇಬ್ಬರೂ ಒಂದಾಗಿ ಈ ಮಗು "ನೋಮ್ಯಾನ್ಸ್ ಲ್ಯಾಂಡ್'' (ಎರಡು ದೇಶಕ್ಕೆ ಸೇರದ ಅಂತ್ರರಾಷ್ಟ್ರೀಯ ಪ್ರದೇಶದಲ್ಲಿ) ಹುಟ್ಟಿರುವ ಕಾರಣ ಮಗು ಮಾನವೀಯಸ್ಥಾನದಲ್ಲಿ ಹುಟ್ಟಿದೆ ಹಿಂದೂಸ್ಥಾನ-ಪಾಕಿಸ್ಥಾನದಲ್ಲಿ ಅಲ್ಲಾ ಎಂಬ ಒಮ್ಮತ ಅಭಿಪ್ರಾಯಕ್ಕೆ ಬಂದೊಡನೆ ಪ್ರೇಕ್ಷಕರು ಚಪ್ಪಾಳೆ ಒಡೆಯುವುದಂತೂ ಜನಸಾಮಾನ್ಯರು ಇಂತಹ ಸಂದರ್ಭದಲ್ಲಿ ಬಯಸುವ ಪರಿಹಾರ ಎಂತಹುದು ಎಂಬುದನ್ನು ಸೂಚಿಸುತ್ತದೆ.

ಬಹುತೇಕ ಅಶ್ಲೀಲ ಹಾಡು-ನೃತ್ಯಗಳನ್ನೆ ಒಳಗೊಳ್ಳುವ ಹಿಂದಿ ಚಿತ್ರಗಳು ತಯಾರಾಗುತ್ತಿರುವಾಗ, ಯಾವುದೇ ಅಶ್ಲೀಲ-ನೃತ್ಯ ಅಥವ ಹಾಡನ್ನು ಒಳಗೊಳ್ಳದೆ ಇಂಪಾದ ಸಂದೇಶ ನೀಡುವ ಹಾಡುಗಳನ್ನು ಒಳಗೊಂಡಿರುವುದು, ಈ ಸಿನಿಮಾದ ಮತ್ತೊಂದು ವಿಷಯ. ಹಾರುವ ಹಕ್ಕಿಗೆ ಬೀಸುವ ಗಾಳಿಗೆ ಬೆಳಕ ನೀಡುವ ಬೆಳಕಿಗೆ ಇರದ ಗಡಿ ಮನುಷ್ಯನಿಗೆ ಏಕೆ...." ಎಂಬರ್ಥ ನೀಡುವ ಪಂಚಿಉಡೆ... ಎಂಬ ಗಜಲ್ ಸಂಗೀತವುಳ್ಳ ಹಾಡು ಮತ್ತಿತರೆ ಹಾಡುಗಳು ಸಹಾ ಅಷ್ಟೆ ಅರ್ಥಗರ್ಭಿತವಾಗಿ ಭಾರತ-ಪಾಕ್ ಹಾಗೂ ಬಾಂಗ್ಲಾದ ಸಂಗೀತ ಪ್ರಿಯರನ್ನು ಒಂದೆಡೆ ಹಿಡಿದಿಡುವ ಶಕ್ತಿ ಒಳಗೊಂಡಿದೆ.

ನಿರಾಶ್ರಿತರಾಗಿ ಮರಳುಗಾಡಿನಲ್ಲಿ ಬದುಕಿನ ದಾರಿ ಕಾಣದೆ ಅಲೆದಾಡುವ ದಾರಿತಪ್ಪಿದವರಿಗೆ ದಾರಿ ತೋರುವ ರೆಫ್ಯೂಜಿಯೊಬ್ಬ ಮತ್ತೊಬ್ಬ ರೆಫ್ಯೂಜಿಗೆ ದಾರಿ ತೋರಿಸಿ ಬದುಕು ರೂಪಿಸಲು ಮುಂದಾದಾಗ ಜನಿಸುವ ಇವರಿಬ್ಬರ ಮಗು ಮತ್ತೊಬ್ಬ ರೆಫ್ಯೂಜಿಯಾದರೂ, ಎರಡು ದೇಶಗಳ ನಡುವಿನ ಜನತೆಯ ಸಮಾಜದ ಸೌಹಾರ್ದತೆಯ ಸಂಕೇತ.

......ಮರುಭೂಮಿಯಾಗುತ್ತಿರುವ ಹುಬ್ಬಳ್ಳಿ-ಧಾರವಾಡ

ಪುಟ 7 ರಿಂದ

ಅತಿದೊಡ್ಡ ಇಂಡಸ್ಟ್ರಿಯಲ್ ಎಸ್ಟೇಟುಗಳಲ್ಲಿ ಒಂದಾದ ಬೇಲೂರ್ ಕೈಗಾರಿಕಾ ವಸಾಹತುಗಳ ಬಹುತೇಕ ಘಟಕಗಳು ಮುಚ್ಚಿ ಬಿಕೋ ಎನ್ನುತ್ತಿವೆ. ಇಲ್ಲಿಯ ನೂರಾರು ಇಂಜಿನಿಯರಿಂಗ್, ಕೆಮಿಕಲ್ ಮತ್ತಿತರ ಕೈಗಾರಿಕಾ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಸಾವಿರಾರು ಕಾರ್ಮಿಕರು ಈಗ ಎಲ್ಲಿ ಹೋಗಿದ್ದಾರೆ, ಹೇಗೆ ಬದುಕುತ್ತಿದ್ದಾರೆ ಎಂಬುದನ್ನು ಊಹಿಸುವುದು ಕಷ್ಟ.

ಇಂಡಿಯನ್ ಪ್ಲಾಯುವುಡ್

1996 ರಲ್ಲಿ ಮುಚ್ಚಲ್ಪಟ್ಟ ಧಾರವಾಡದ ಇಂಡಿಯನ್ ಪ್ಲಾಯ್‌ವುಡ್ ಕಂಪನಿಯ ಕಾರ್ಮಿಕರ ಕಥೆ ಒಂದು ದೊಡ್ಡ ವ್ಯಥೆ. ಮಾಲೀಕರ ಲಾಭಕೋರತನ ಮತ್ತು ಸರ್ಕಾರದ ತಪ್ಪು ನೀತಿ ಒಟ್ಟಾಗಿ 500 ಜನ ಕಾರ್ಮಿಕರ ಬದುಕಿನ ಮೇಲೆ ಚೆಲ್ಲಾಟ ನಡೆಸಿದವು. ಸಮರ ಧೀರ ಹೋರಾಟಗಳಿಗೇನು ಕೊರತೆ ಇರಲಿಲ್ಲ. ಆದರೆ ಮುಚ್ಚಿದ ಕಾರ್ಖಾನೆ ಮತ್ತೆ ತೆರೆಯಲಿಲ್ಲ. ಕಾರ್ಮಿಕರು ಕಾನೂನುಬದ್ಧ ಪರಿಹಾರ ಪಡೆಯಲು ಇನ್ನೂ ಪರದಾಡುತ್ತಿದ್ದಾರೆ.

ಕೈಕೊಟ್ಟ ಕಿರ್ಲೋಸ್ಕರ್

ಇಂಜಿನಿಯರಿಂಗ್ ಕೈಗಾರಿಕೆಯಲ್ಲಿ ಮೈಸೂರ್ ಕಿರ್ಲೋಸ್ಕರ್ ಒಂದು ದೊಡ್ಡ ಹೆಸರು. ಇದರ ಕೇಂದ್ರ ಘಟಕ ಹರಿಹರದಲ್ಲಿದೆ. 1960 ರದಶಕದಲ್ಲಿ ಹುಬ್ಬಳ್ಳಿಯಲ್ಲಿ 1970.ರ ದಶಕದಲ್ಲಿ ಸತ್ತೂರಿನಲ್ಲಿ ಇವರು ಸ್ಥಾಪಿಸಿದ ಘಟಕಗಳು ಮಹಾನಗರದ ಹೆಮ್ಮೆ ಎನಿಸಿಕೊಂಡಿದ್ದವು. ಉದಾರೀಕರಣದ ವ್ಯಾಧಿ ಮೈಸೂರು ಕಿರ್ಲೋಸ್ಕರ್ ಕಂಪನಿಗೆ ತಟ್ಟದೆ ಇರಲಿಲ್ಲ. ಮೊದಲು ಸತ್ತೂರಿನ ಘಟಕವನ್ನು ಹರಿಹರಕ್ಕೆ ವರ್ಗಾಯಿಸುವ ಹೆಸರಿನಲ್ಲಿ ಅದನ್ನು ಮುಚ್ಚಲಾಯಿತು: ಅನಂತರ ಹುಬ್ಬಳ್ಳಿಯ ಘಟಕವನ್ನು ಹರಿಹರಕ್ಕೆ ವರ್ಗಾಯಿಸಿ ಬಹುತೇಕ ಕಾರ್ಮಿಕರನ್ನು ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಮನೆಗೆ ಕಳುಹಿಸಲಾಯಿತು. ಹೀಗೆ ಹುಬ್ಬಳ್ಳಿ- ಧಾರವಾಡದಲ್ಲಿ ಕೈಗಾರಿಕೆಗಳನ್ನು ಒಂದರ ಮೇಲೊಂದರಂತೆ ಗುಡಿಸಿ ಹಾಕಲಾಗುತ್ತಿರುವುದು ಕಳವಳಕಾರಿ ಬೆಳವಣಿಗೆಯಾಗಿದೆ.

ಬಿಜೆಪಿಗಳ ಕುಟಿಲ ತಂತ್ರ

ಈದ್ಗಾ ಮೈದಾನದ ವಿವಾದವನ್ನು ಎಬ್ಬಿಸಿ ಹುಬ್ಬಳ್ಳಿ-ಧಾರವಾಡದಲ್ಲಿ ಒಂದೆರಡು ಎಂ.ಎಲ್.ಎ. ಸ್ಥಾನಗಳನ್ನು ಗಿಟ್ಟಿಸಿಕೊಂಡ ಬಿಜೆಪಿಗೆ ಜನಬೆಂಬಲ ಕುಸಿಯುತ್ತಿರುವುದು ಆತಂಕವನ್ನು ಹುಟ್ಟಿಸಿತ್ತು. ಪಂಚಾಯತ್ ಚುನಾವಣೆಗಳಲ್ಲಿ ಗ್ರಾಮೀಣ ಜನತೆ ನೀಡಿದ ತೀರ್ಪು ಬಿಜೆಪಿಗಳಿಗೆ ತೀವ್ರ ಮುಖಭಂಗ ಉಂಟು ಮಾಡಿತ್ತು. ಈ ಅಘಾತದಿಂದ ಸುಧಾರಿಸಿಕೊಳ್ಳಲು ಅವಕಾಶದ ಹುಡುಕಾಟದಲ್ಲಿದ್ದ ಇವರಿಗೆ ಹೈಕೋರ್ಟ್ ಪೀಠದ ಚಳುವಳಿ ವರವಾಗಿ ಬಂದಂತಾಯಿತು. ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿಯೇ ಬಿಜೆಪಿ ಅವತಾರ ತಾಳಿದೆ ಎಂದು ಭಾಸವಾಗುವಂತೆ ಅವರು ಪ್ರಚಾರಗಿಟ್ಟಿಸತೊಡಗಿದರು. ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಎಲ್ಲಾ ಕೀರ್ತಿಯನ್ನು ತಮ್ಮದಾಗಿಸುವುದು ಬಿಜೆಪಿಗಳ ಉದ್ದೇಶ. ಆದರೆ ಗುಲ್ಬರ್ಗದ ಬಿಜೆಪಿಗಳು ಹೈಕೋರ್ಟ್ ಪೀಠ ಗುಲ್ಬರ್ಗದಲ್ಲಿ ಸ್ಥಾಪನೆಯಾಗಬೇಕು ಎಂದು ಕೇಳಲಾರಂಭಿಸಿರುವುದು ಆ ಪಕ್ಷದಲ್ಲಿನ ವಿರೋಧಾಭಾಸಗಳ ಪ್ರತೀಕವಾಗಿದೆ.

ಹುಬ್ಬಳ್ಳಿ-ಧಾರವಾಡದ ಬಿಜೆಪಿಗಳಿಗೆ ಹುಬ್ಬಳ್ಳಿ-ಧಾರವಾಡ ಹಾಳು ಹಂಪಿಯಾಗಿರುವುದು ಕಾಣುತ್ತಿಲ್ಲ. ವರ್ಷಕ್ಕೆ ಒಂದು ಕೋಟಿ ಉದ್ಯೋಗ ಸೃಷ್ಟಿಸುವ ಇವರ ಭರವಸೆ ಏನಾಯ್ತು ಎಂದು ಜನ ಕೇಳುತ್ತಿದ್ದಾರೆ. ಮುಗ್ಧ ಯುವಕರಲ್ಲಿ ಭ್ರಮೆಗಳನ್ನು ಸೃಷ್ಟಿಸಿ, ಅವರನ್ನು ಮಸೀದಿ ಚರ್ಚುಗಳನ್ನು ಉರುಳಿಸಲು, ಅಮಾಯಕರ ಮೇಲೆ ಹಲ್ಲೆ ಮಾಡಲು, ಹತ್ಯೆ ಮಾಡಲು ಬಳಸಿಕೊಂಡರು, ಆದರೆ ಯುವಕರ ಭವಿಷ್ಯ ನಿರ್ಮಾಣಕ್ಕಾಗಿ ಬಿಜೆಪಿ ಯಾವ ಕಾರ್ಯಕ್ರಮವನ್ನು ಹೊಂದಿರುವುದಿಲ್ಲ. ಹುಬ್ಬಳ್ಳಿ-ಧಾರವಾಡ ಮಹಾನಗರದ ಅಳಿವು-ಉಳಿವು ಇಲ್ಲಿನ ಕೈಗಾರಿಕೆಗಳನ್ನು ಅವಲಂಬಿಸಿದೆ ಎಂದರೆ ತಪ್ಪಾಗದು. ಕೇಂದ್ರ ಸರ್ಕಾರದ ಉದಾರೀಕೃತ ಆಮದು ನೀತಿಗೆ ಕಡಿವಾಣ ಹಾಕದಿದ್ದರೆ ಹುಬ್ಬಳ್ಳಿ-ಧಾರವಾಡವೂ ಸೇರಿದಂತೆ ಎಲ್ಲಾ ಕೈಗಾರಿಕಾ ನಗರಗಳು ಕೈಗಾರಿಕಾ ಮರುಭೂಮಿಗಳಾಗುವುದರಲ್ಲಿ ಸಂಶಯವಿಲ್ಲ. ಹುಬ್ಬಳ್ಳಿ-ಧಾರವಾಡದ ನಿಜವಾದ ಅಭಿವೃದ್ಧಿ ಹೈಕೋರ್ಟ್ ಪೀಠ ಸ್ಥಾಪನೆಗಿಂತಲೂ ಹೆಚ್ಚಾಗಿ ಇಲ್ಲಿನ ಕೈಗಾರಿಕರಣವನ್ನು ಅವಲಂಬಿಸಿದೆ ಎನ್ನುವುದನ್ನು ಅರಿತುಕೊಂಡು ಆ ದಿಕ್ಕಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಬಲವಾದ ಒತ್ತಡ ಹೇರಲು ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ○

ಮರಳು ಗಾಡಿನಲ್ಲಿ ದಾರಿತಪ್ಪಿದವರಿಗೆ ದಾರಿ ತೋರುವ

ರೆಫ್ಯೂಜಿ

ಕೆ.ಎನ್.ಉಮೇಶ್

ಭಾರಿ ಸುದ್ದಿ ನಿರೀಕ್ಷೆ -ಕಾತುರತೆಯೊಂದಿಗೆ ತೆರೆಕಂಡಿರುವ ರೆಫ್ಯುಜಿ, ಹಿಂದಿ ಚಿತ್ರರಂಗದ ಎರಡು ದಿಗ್ಗಜ ಕುಟುಂಬಗಳ ಹೊಸ ತಾರೆಯರನ್ನು ಪರಿಚಯಿಸುವ ಚಿತ್ರ. ಒಂದೆಡೆ ಹಿಂದಿ ಚಿತ್ರರಂಗದ "ಬಡಾಬಾಯಿ" ಅಮಿತಾಬ್ ಹಾಗು ತಾರೆ ಹೆಂಡತಿ ಜಯಾ ಬಚನ್‌ರ ಪುತ್ರ ಅಭಿಷೇಕ್ ಬಚನ್ ನಾಯಕ ನಟನಾಗಿದ್ದರೆ, ಕಪೂರ್ ಖಾನ್‌ದಾನ್‌ನ ಲೇಟೆಸ್ಟ್ ಕೊಡುಗೆ ಕರಿನಾ ಕಪೂರ್ ನಾಯಕ ನಟ ಚಿತ್ರದುದ್ದಕ್ಕೂ ನೋಡುಗರ ಪಿಸು ದನಿಯಂತೂ 'ಅಮಿತಾಬ್‌ಗಿಂತ ಉದ್ದ- ಉತ್ತಮ ನಡೆ-ಒಳ್ಳೆ ಡ್ರೈವ್ ಅವನೂ ಎಡಚ-ನೋಡು ಅಪ್ಪನಂತೆ ಎಡಗೈಯನ್ನೆ ಬಳಸುತ್ತಾನೆ, ನೋಡು ಕರಿನಾ ಸೈಡ್ ಪೋಸ್ ಕರಿಷ್ಮಾ ತರಾನೆ ಇಲ್ವಾ, ಸ್ವಲ್ಪ ದಪ್ಪ ಅಷ್ಟೆ ಆದರೆ ಅವಳಂತೆ ಕ್ಯಾಟ್ ಐಸ್ ಅಲ್ಲಾ, ಬಿಳಿ ಕಣ್ಣು ಎನ್ನುತ್ತಿರುವುದನ್ನು ಗಮನಿಸಿದರೆ ಅಮಿತಾಬ್ ಜಯಾ ಅಂತೆಯೆ ರಾಜ್‌ನಿಂದ ಹಿಡಿದು ಇತ್ತೀಚಿನ ಕರಿಷ್ಮಾ ಕಪೂರ್‌ವರೆಗಿನ ಹಿಡಿತ ವೀಕ್ಷಕರನ್ನ ಹೇಗೆ ಹಿಡಿದಿಟ್ಟಿದೆ ಎಂಬುದನ್ನು ತೋರಿಸುತ್ತಲೆ ಸಿನಿಮಾ ನೋಡಲು ಬರುವ ಜನ ಏನು ನಿರೀಕ್ಷೆಯೊಂದಿಗೆ ಬರುತ್ತಿದ್ದಾರೆಂದು ಊಹಿಸಬಹುದು.

ರೆಫ್ಯೂಜಿ ಸಿನೆಮಾ ಅಮಿತಾಬ್ ಮಗನದು ಕರಿಷ್ಮಾ ತಂಗಿಯದು ಎನ್ನುವುದಕ್ಕಿಂತ ಹೆಚ್ಚಾಗಿ, ಅದು ತನ್ನೊಳಗೆ ಹೊಂದಿರುವ ಆಶಯ ನೀಡುವ ಸಂದೇಶ ಅತ್ಯಂತ ಪ್ರಮುಖವಾದ ಅಂಶವಾಗಿದೆ. ಇಂಪಾದ ಹಾಡು- ಸಂಗೀತ, ಉತ್ತಮ ನಿರ್ದೇಶನ, ಚಿತ್ರೀಕರಣದೊಂದಿಗೆ ಯಾವುದೇ ಅಶ್ಲೀಲತೆಯಾಗಲಿ ಅಥವ ದೊಡ್ಡ ರೀತಿ ಹೊಡೆದಾಟವಾಗಲಿ ಇಲ್ಲದಿರುವುದು ಈ ಸಿನಿಮಾದ ಒಂದು ಪ್ರಮುಖ ಆಕರ್ಷಣೆಯಾಗಿದೆ.

ಸಿನಿಮಾ ಚಿತ್ರೀಕರಣಗೊಂಡಿರುವ ಪ್ರದೇಶ-ಸಿನಿಮಾದ ವಸ್ತು ವಿಷಯ ಅತ್ಯಂತ ಕುತೂಹಲಕಾರಿಯದಾಗಿದ್ದರೂ ಸಹಾ ಸಿನಿಮಾದಲ್ಲಿ ಯುದ್ಧವಾಗಲಿ ಹೊಡೆದಾಟವಾಗಲಿ ಇಲ್ಲ. ಅಂತರಾಷ್ಟ್ರೀಯ ಗಮನ ಸೆಳೆಯುವ ಭಾರತ-ಪಾಕ್ ಗಡಿಯಾಚೆ-ಗೀಚೆಗಿನ ಎರಡು ಹಳ್ಳಿಗಳನ್ನೆ ಅಲ್ಲಿನ ದೈನಂದಿನ ಜೀವನ ಜನತೆಯ ಮನಸ್ಸಿನಾಳದ ತುಡಿತ-ಮಿಡಿತಗಳನ್ನು ಚಿತ್ರೀಕರಿಸಲಾಗಿದೆ.

ಭಾರತ-ಪಾಕ್-ಬಾಂಗ್ಲಾ ನಡುವೆ ಇರುವ ಸಾವಿರಾರು ನಿರಾಶ್ರಿತರ ವಿಷಯವೇ ಪ್ರಧಾನವಾಗಿರುವ ಚಿತ್ರ ರೆಫ್ಯೂಜಿ (ನಿರಾಶ್ರಿತ). ನಾಯಕ ನಟನೆ ಒಬ್ಬ ರೆಫ್ಯೂಜಿ- ಅವನ ಅಪ್ಪ-ಅಮ್ಮ ಊರು-ದೇಶ ಯಾವುದೂ ಅವನಿಗಾಗಲಿ ಅಥವ ಅವನ ಸಾಕು ತಂದೆ -ತಾಯಿ ಊರಿನವರಿಗ್ಯಾರಿಗೂ ಗೊತ್ತಿಲ್ಲಾ. ಅವನು ಪಾಕ್ ಗಡಿಯಲ್ಲಿರುವ ಭಾರತದ ಒಂದು ಹಳ್ಳಿಯ ವಾಸಿ, ಅವನ ಪೂರ್ಣ ಹೆಸರು ರಾಮ್ ರೆಫ್ಯೂಜಿ ಅವನ ಸಾಕು ತಂದೆ -ತಾಯಿ ಇಬ್ಬರು ಮುಸಲ್ಮಾನರು, ಹಾಗೂ ಊರಿನ ಮುಖ್ಯಸ್ಥ ಅವನ ಸಾಕು ತಂದೆಯ ಸ್ವಂತ ತಮ್ಮ ಗಡಿಯಾಚೆಗಿನ ಪಾಕ್ ಹಳ್ಳಿಯೊಂದರ ವಾಸಿಯಾಗಿರುತ್ತಾನೆ. ಮಾನವೀಯತೆಯನ್ನು ಸದಾ ಜನರಲ್ಲಿ ಪ್ರಚಾರ ಮಾಡುವ ಅವನ ಸಾಕು ತಂದೆ ಭಾರತದಿಂದ ಪಾಕ್‌ಗೆ ಹಾಗೂ ಅಲ್ಲಿಂದ ಭಾರತಕ್ಕೆ ವಲಸೆ ಬರುವ ಜನರಿಗೆ ಸಹಾಯ ಮಾಡುತ್ತಾ ಅವರನ್ನು ಗಡಿದಾಟಿಸುವ ಕೆಲಸವನ್ನು ಮಾಡಿಸುತ್ತಿರುತ್ತಾನೆ. ಆದಕ್ಕಾಗಿ ಮರಳುಗಾಡಿನ ದಾರಿಯಲ್ಲದ ದಾರಿಯಲ್ಲಿ ಭಾರತದ BSF ಹಾಗೂ ಪಾಕ್‌ನ ರೇಂಜರ್ಸ್ ಕಣ್ಣುತಪ್ಪಿಸಿ, ಜನರನ್ನು ಗಡಿದಾಟಿಸುವ ಕೆಲಸದಲ್ಲಿ ನಿಪುಣನಾದ ರಾಮ್ ರೆಫ್ಯೂಜಿಯನ್ನು ಬಳಸುತ್ತಾನೆ. ಗಡಿಯಾಚೆಗಿನ ತನ್ನ ತಮ್ಮನ ಮನೆಗೆ ಕಳುಹಿಸುತ್ತಾನೆ, ಅಲ್ಲಿಂದ ಬರುವವರನ್ನು ತಮ್ಮ ಮನೆಯಲ್ಲಿರಿಸಿ ಅವರು ಮುಂದೆ ಬದುಕಿಗಾಗಿ ದಾರಿ ನೋಡಿಕೊಳ್ಳಲು ಅನುವುಗೊಳಿಸುತ್ತಾನೆ. ಈ ಎಲ್ಲಾ ಕೆಲಸವನ್ನು ಮಾಡಲು ರಾಮ್ ರೆಫ್ಯೂಜಿಯ ತಂದೆಗೆ ಗಿರಾಕಿಗಳನ್ನು ಭಾರತದ ಉದ್ದಗಲದಿಂದಲ್ಲದೆ ಪೂರ್ವ ಗಡಿಯ ಬಾಂಗ್ಲಾ ದೇಶ ದಿಂದಲೂ ಗಿರಾಕಿಗಳನ್ನು ಹುಡುಕಿ ತರುವ ಮನುಷ್ಯ ಒಬ್ಬ ಹಿಂದೂ ಆಗಿರುತ್ತಾನೆ.

ಭಾರತ ಪಾಕ್ ಬಾಂಗ್ಲಾ ಮೂರು ದೇಶಗಳ ಜನ ಅಣ್ಣ ತಮ್ಮಂದಿರು ಯಾರೊ ಹಾಕಿದ ಗೆರೆ ಗಡಿಯಾಗಿ ನಮ್ಮ ಸೌಹಾರ್ದತೆ ಸ್ನೇಹ ಮುಕ್ತ ಹೋಗು-ಬರುವಿಕೆಗೆ ಅಡ್ಡಿಯಾಗಿದೆ-ಸಾಮಾನ್ಯ ಜನರ ಮುಕ್ತ ಓಡಾಟಕ್ಕೆ ಅವಕಾಶ ವಿರಬೇಕೆ ವಿನಹ ಹೊಡೆದಾಟಕ್ಕಲ್ಲ ಎಂಬ ನಂಬಿಕೆಯನ್ನು ಬಹಳ ದೃಡವಾಗಿ ಉಳ್ಳವವಾಗಿರುತ್ತಾರೆ ರಾಮ್ ರೆಫ್ಯೂಜಿಯ ಸಾಕು ತಂದೆ -ತಾಯಿಯರು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವಾಗ ಗಡಿ ದಾಟುವ ಜನರು ಇವರಿಗೆ ಹಣ ನೀಡುತ್ತಾರೆ ಅದರಿಂದ ಅವರು ಸಂಸಾರ ಸಾಗಿಸುತ್ತಾರೆ. ಈ ಕೆಲಸದಲ್ಲಿ ತೊಡಗಿರುವಾಗಲೆ ಇವರಿಗೆ ಗಿರಾಕಿಗಳನ್ನು ಹುಡುಕಿ ತರುವ ಆ ಊರಿನ ಹಿಂದೂ ಒಬ್ಬ ಕೆಲವೊಮ್ಮೆ ಅವರು ನಿರಾಶ್ರಿತರು ಅಸಾಹಾಯಕರು ಎಂದು ಹೇಳಿ ಕೆಲವೊಮ್ಮೆ ಭಯೋತ್ಪಾದಕರನ್ನು ಉಗ್ರಗಾಮಿ ಸಂಘಟನೆಗಳ ಮೂಲಭೂತವಾದಿಗಳನ್ನು ಗಡಿ ದಾಟಿಸಲು ಹೇಳಿ- ಮುಗ್ಧವಾಗಿ ಅವರು ಸಹಾ ಜನಸಾಮಾನ್ಯರೆಂದು ಹೇಳಿ ಇವರು ಗಡಿ ದಾಟಿಸಿದ ನಂತರ ವಿಷಯ ತಿಳಿದು ಅವರು ಪರಿತಪಿಸುವ ಪರಿ ಮನಮಿಡಿಯುವಂತಿದೆ. ಈ ಪ್ರಕಿಯೆಯಲ್ಲಿ ಆ ಮುಖಿಯಾನ ಸ್ವಂತ ಮಗ ಉಗ್ರಗಾಮಿಗಳ ಜೊತೆ ಸೇರುವುದು ದೆಹಲಿ ಮತ್ತಿತರೆಡೆಗಳಲ್ಲಿ ಬಾಂಬ್ ಸ್ಫೋಟಗಳಲ್ಲಿ ಭಾಗಿಯಾಗುವುದು, ಆನಂತರ ಅವನನ್ನು ಮನೆಗೆ ಸೇರಿಸದೆ ಮನೆಯಿಂದ ಆಚೆ ಅಟ್ಟುವುದು ಎಲ್ಲವು ಮಾನವೀಯತೆಗೆ ಅವನ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಅಂತೆಯೆ ಚಿತ್ರದ ಕೊನೆ ಕೊನೆಯಲ್ಲಿ ಉಗ್ರಗಾಮಿಗಳ ನಾಯಕನ ಮಾತಿಗೆ ಮರುಳಾಗಿ ಗಡಿಯಾಚೆಗಿನ ಈ ಮುಖಿಯಾನ ತಮ್ಮ ಹಾಗೂ ಮನೆಯಿಂದ ಓಡಿಸಲಾದ ಆತನ ಸ್ವಂತ ಮಗ ಬಹುಸಂಖ್ಯಾತ ಮುಸಲ್ಮಾನರಿರುವ ಭಾರತದ ಗಡಿಯಲ್ಲಿನ ಈ ಹಳ್ಳಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಬೇಕೆಂದು ಉಗ್ರಗಾಮಿಗಳ ಜೊತೆ ಸೇರಿ ಶಸ್ತ್ರ ಸಜ್ಜಿತರಾಗಿ ಊರಿನೊಳಗೆ ನುಸುಳಿದಾಗ ಅದನ್ನು ವಿರೋಧಿಸಿ ರಾಷ್ಟ್ರದ ಐಕ್ಯತೆ- ಸಮಗ್ರತೆಯನ್ನು ಎತ್ತಿಹಿಡಿಯುವ ಸಲುವಾಗಿ ಪ್ರಾಣ ಬಿಡುವ ಕ್ಷಣಗಳಲ್ಲಿ ಅವನ ಬಾಯಿಂದ ಬರುವ ಭಾರತದ ಮುಸಲ್ಮಾನರಿಗೆ ದೇಶದ ಹಾಗೂ ಮಣ್ಣಿನ ರಕ್ಷಣೆಗಾಗಿ ಸಾಯುವ ಹಾಗೂ ಸಾಯಿಸುವ ಎರಡು ವಿಷಯ ಗೊತ್ತಿದೆ" ಎಂಬ ಮಾತುಗಳಿಗೆ ಪ್ರತಿಯಾಗಿ ವೀಕ್ಷಕರಿಂದ ತತ್‌ಕ್ಷಣ ಬರುವ ಕರತಾಡನ ಹಾಗೂ ಸಿಳ್ಳೆಗಳು ಆ ವಿಷಯಕ್ಕಿರುವ ಗಂಭೀರತೆ ಮತ್ತು ಜನಸಮಾನ್ಯರಲ್ಲಿ ಒಬ್ಬರ ಮೇಲೊಬ್ಬರಿಗಿರುವ ವಿಶ್ವಾಸದ ಪ್ರತೀಕವಾಗಿದೆ. ತಂದೆಯ ಸಾವಿನಿಂದ ಅವನ ತ್ಯಾಗದಿಂದ ಉತ್ತೇಜಿತನಾಗಿ ಉಗ್ರಗಾಮಿಗಳ ಕಣ್ಣುತಪ್ಪಿಸಿ ಅಲ್ಲಿಂದ ಓಡಿ ಹೋಗಿ BSF ನವರಿಗೆ ವಿಷಯ ಮುಟ್ಟಿಸಿ ಉಗ್ರಗಾಮಿಗಳ ಗುಂಡಿಗೆ ಬಲಿಯಾಗಿ ಪ್ರಾಣಬಿಡುವ ಮುಖಿಯಾನ ದಾರಿ ತಪ್ಪಿದ ಸ್ವಂತ ಮಗ ಸಾಯುವ ಆ ಕ್ಷಣಗಳ ದೃಶ್ಯ ದಾರಿ ತಪ್ಪಿದ ಜನ ಅಂತಿಮವಾಗಿ ಪ್ರಾಯಶ್ಚಿತ್ತ ಪಡುವ ಪರಿಯನ್ನು ಗಂಭೀರವಾಗಿ ಚಿತ್ರಿಸಲಾಗಿದೆ.

ರಾಮ್ ರೆಫ್ಯೂಜಿ ಈ ರೀತಿ ನಿರಾಶ್ರಿತರನ್ನು ಗಡಿದಾಟಿಸುವ ಕೆಲಸದಲ್ಲಿ ತೊಡಗಿರುವಾಗ ಒಮ್ಮೆ ನಾಯಕ ನಟಿಯ ತಂದೆ -ತಾಯಿ ಆಕೆಯನ್ನು ಗಡಿದಾಟಿಸುತ್ತಾನೆ. ಈ ಸಮಯದಲ್ಲಿ ಒಬ್ಬರೊಬ್ಬರಲ್ಲಿ ಬರುವ ವಿಶ್ವಾಸ ಮೂಡುವ ಆತ್ಮೀಯತೆ ನಂತರ ಅದು ಪ್ರೀತಿಯಾಗಿ ಪರಿಣಮಿಸುತ್ತದೆ. ಈತನೊಂದಿಗೆ ಸಂಸಾರ ನಡೆಸುವ ಕನಸನೊತ್ತು ಮೂಲತಃ ನಿರಾಶ್ರಿತರಾದ ಆಕೆ ಮತ್ತೊಬ್ಬ ನಿರಾಶ್ರಿತ ಆದರೆ ಭಾರತ ವಾಸಿಯನ್ನು ಮದುವೆಯಾಗಿ ಸಂಸಾರ ನಡೆಸಬೇಕೆಂದು ತನ್ನ ಕನಸಿನ ಸಂಸಾರಕ್ಕಾಗಿ ಮನೆ ಕಟ್ಟುವ ಅಂತೆಯೆ ರಾಮ್ ರೆಫ್ಯೂಜಿಯೂ ಸಹಾ ಪ್ರತಿ ದಿನವು ತನ್ನ ಪ್ರೀತಿಯನ್ನು ನೋಡಲು ಗಡಿದಾಟುವ ಅಂಶ, ಈ ಮಧ್ಯೆ ಅವನು BSF ನವರಿಂದ ಗುಂಡೇಟು ತಿಂದು ಹಾಗೂ ರೇಂಜರ್‌ಗಳಿಗೆ ಸಿಕ್ಕಿ ಬೀಳುವ ಅಂಶಗಳು ಪ್ರೇಕ್ಷಕರಲ್ಲಿನ ಕೂತೂಹಲಗಳನ್ನು ಹಿಡಿದಿಡುತ್ತವೆ. ಹುಡುಗ ಹಿಂದೂ ಹುಡುಗಿ ಮುಸ್ಲಿಂ ಎಂಬ ಪ್ರಶ್ನೆಯೆ ಬರುವುದಿಲ್ಲ. ಅವರ ಮದುವೆಗೆ ಅಡಿಯಾಗುವ ಅಂಶವೆಂದರೆ ಆಕೆ ಪಾಕ್ ವಾಸಿ -ಈತ ಭಾರತದ ವಾಸಿ ಇವರ ನಡುವೆ ಬರುವುದೊಂದು ಬಾರ್ಡರ್ ಸಮಸ್ಯೆ -ಜಾತಿ



ರೆಫ್ಯೂಜಿ ಚಿತ್ರದಲ್ಲಿ ಅಬಿಷೇಖ್ ಬಚ್ಚನ್, ಕರೀನಾ

ಧರ್ಮವಲ್ಲ. ಈ ನಿಟ್ಟಿನಲ್ಲಿ ಅವರಿಬ್ಬರ ಮಾತುಕತೆ ಅರ್ಥ ಗರ್ಭಿತವಾಗಿವೆ. ಕರಿನಾ ಒಮ್ಮೆ "ಎ ಕ್ಯಾ ಬಾರ್ಡರ್ ಹೈ ಇಸೆ ಮಿಟಾ ನಹಿ ಸಕತೆ ಕ್ಯಾ? (ಏನು ಗಡಿ ಇದು? ಇದನ್ನು ಅಳಿಸಲು ಸಾಧ್ಯವಿಲ್ಲವೇ?) ಎಂದಾಗ "ಇಸೆ ಕ್ಯಾ ನೋಟ್ ಬುಕ್ ಮೆ ಲಿಕೆ ಹುವೆ ಲೈನ್ ಸಮಜೆ ಕ್ಯಾ ಮಿಟಾನೆ ಕೂ"(ಇದನ್ನೇನು ಶಾಲೆಯಲ್ಲಿ ನೋಟ್‌ಬುಕ್‌ನಲ್ಲಿ ಹಾಕಿದ ಗೆರೆ ಎಂದಿರುವೆಯೂ ಅಳಿಸಲು..) ಎನ್ನುವ ರಾಮ್‌ನ ಉತ್ತರ ಅದಕ್ಕೆ ಪ್ರತ್ಯುತ್ತರವಾಗಿ ಆಕೆ ಹೇಳುವ ಮಾತು ಹಮಾರಾ ಜಿಂದಗಿ ಮಿಟಾಯಗಾ ಇಸೆ...(ನಮ್ಮ ಬದುಕು ಅದನ್ನು ಅಳಿಸುತ್ತದೆ...) ಎಂಬುದು ಜನರ ಬದುಕು ಗಡಿಯನ್ನು ದಾಟಿ ನಿಲ್ಲುತ್ತದೆ ಎಂಬುದನ್ನು ಸೂಚಿಸುತ್ತದೆ.

ಅವರ ಪ್ರೀತಿಗೆ ಅಡ್ಡಿಯಾಗುವ ಆಕೆಯನ್ನು ಪಾಕ್ ರೇಂಜರ್ಸ್‌ಗಳ ಅಧಿಕಾರಿಯೊಬ್ಬರಿಗೆ ಮದುವೆ ಮಾಡಿ ಕೊಡಬೇಕೆನ್ನುವ ತಂದೆ-ತಾಯಿಯ ಆಶಯ ಸುಲಲಿತವಾಗಿ ಕೊನೆಗೆ ಪರಿಹಾರವಾಗುವ ಅಂಶವು ಆಕೆ ಗಂರ್ಭಿಣಿಯಾಗಿದ್ದರೂ ಸಹಾ ಅದು ಪ್ರಮುಖ ಚರ್ಚೆಯ ವಿಷಯವಾಗದೆ ಉಳಿಯುವುದು ಸಹಾ ಅಷ್ಟೆ ಸೂಕ್ಷ್ಮವಾಗಿ ಗಮನಿಸಬೇಕು. ಅಂದರೆ ಒಟ್ಟಾರೆಯಾಗಿ ಈ ಸಿನಿಮಾದ ಕೇಂದ್ರ ವಸ್ತು ವಿಷಯವಾದ ಬಹುತೇಕ ವೀಕ್ಷಕರು ತಮ್ಮ ಗಮನ ಹರಿಸುವ ಅಂಶವಾದ ರಾಮ್ ಮತ್ತು ಕರಿನಾಳ ನಡುವಿನ ಪ್ರೀತಿ ಸಾರುವ ಅಂಶವೆಂದರೆ ಯಾವುದೇ ದೇಶ ಬಾಷೆ-ಜಾತಿ ಧರ್ಮ ಸಾಮಾಜಿಕ ಕಟ್ಟಲೆಗಳು ಮನುಷ್ಯನ ಆಂತರಿಕ ತುಡಿತವಾದ ಪ್ರೀತಿ ಸೌಹಾರ್ದತೆ ಹಾಗೂ ಬದುಕಿಗೆ ಅಡ್ಡ ಬಂದರೂ ಅದನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆ ಎಂಬುದು, ಈ ನಿಟ್ಟಿನಲ್ಲಿ ಇದೊಂದು ಸಾಕಾರಾತ್ಮಕ ಚಿತ್ರವಾಗಿದೆ.

ದೇಶದ ರಕ್ಷಣಾ ಕಾನೂನಿನ ಪ್ರಕಾರ ದೇಶದ್ರೋಹದ ಕೆಲಸಗಳಾದ ನಿರಾಶ್ರಿತರಿಗೆ ಗಡಿ ದಾಟಿಸುವುದರಲ್ಲಿ ತೊಡಗಿ ಬದುಕುಸಾಗಿಸುತ್ತಿದ್ದ ಯುವಕನೊಬ್ಬ ನಂತರ BSF ನ ಯೋಧನಾಗಿ ದೇಶದ್ರೋಹದ ಕೆಲಸದಲ್ಲಿ ತೊಡಗುವವರನ್ನು ಹಿಡಿದುಕೊಡುವ ಉಗ್ರಗಾಮಿಗಳು ಹಿಡಿದುಕೊಳ್ಳುವ ಹಳ್ಳಿಯನ್ನು ಉಗ್ರಗಾಮಿಗಳಿಂದ ವಿಮೋಚನೆಗೊಳಿಸುವ ಕೆಲಸದಲ್ಲಿ ನಾಯಕ ನಟ ತೊಡಗಿಕೊಳ್ಳುತ್ತಾನೆ. 1947 ರಲ್ಲಿ ಭಾರತದಿಂದ ಪಾಕ್ ಭಾಗವಾದ ಬಾಂಗ್ಲಾದೇಶಕ್ಕೆ ವಲಸೆ ಹೋದ ಜನ ಪಾಕಿಸ್ತಾನ ಇಬ್ಭಾಗವಾಗಿ ಬಾಂಗ್ಲಾದೇಶ ರಚನೆಗೊಂಡ ನಂತರ ಭಾರತ ಬಾಂಗ್ಲಾ ಎರಡೂ ಅವರದಲ್ಲ ಎಂದಾದಾಗ ಪಾಕಿಸ್ತಾನ ನಮ್ಮದೆಂದು ಅಕ್ರಮವಾಗಿ ಪಾಕಿಸ್ಥಾನಕ್ಕೆ ವಲಸೆ ಹೋಗುವ ನಿರಾಶ್ರಿತರ ಪಾತ್ರದಲ್ಲಿರುವ ಕರಿನಾಳ ತಂದೆ-ತಾಯಿ ಪಾಕಿಸ್ಥಾನಕ್ಕೆ ನಿರಾಶ್ರಿತರಾಗಿ ವಲಸೆ ಹೋದ ಮೇಲೆ ಗಡಿ ಹಳ್ಳಿಗಳಲ್ಲಿ ದಿನ ನಿತ್ಯದ ಕೆಲಸವಾಗಿರುವ ತಲೆ ಎಣಿಸುವ ಕೆಲಸವನ್ನು ಸೈನ್ಯ ಮಾಡುವಾಗ ಕರಿನಾಳ ತಂದೆಯ ಬಾಯಿಂದ ಬರುವ ಮಾತುಗಳು ಅಸಂಖ್ಯಾತ ನಿರಾಶ್ರಿತರ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತದೆ. ದೇಶಗಳ ವಿಭಜನೆ ಎಂಬುದು ವಿಭಜನೆಯೊಂದಿಗೆ ಅಂತ್ಯವಾಗುವ ಅಂಶವಲ್ಲ ನಂತರವೂ ಅನೇಕ ವರ್ಷಗಳ ಕಾಲ ಅದರ ಪರಿಣಾಮವನ್ನು ಬೀರುತ್ತಲೆ ಇರುತ್ತದೆ, ಎಂಬುದರ ಸೂಚಕವಾಗಿವೆ.

ಸಿನಿಮಾದ ಮಧ್ಯದಲ್ಲೆ ನಡೆಯುವ ಎರಡು ರಾಷ್ಟ್ರಗಳ ಗಡಿ ರಕ್ಷಣಾ ಪಡೆಗಳ ತ್ರೈಮಾಸಿಕ ಸಭೆಗಳು ಅಲ್ಲಿ ನಡೆಯುವ ಸೌಹಾರ್ದತೆಯ ಮಾತುಗಳು -ಅಭಿಪ್ರಾಯ ವಿನಿಮಯಗಳು ಹಾಗೂ ಎರಡೂ ಗಡಿ ರಕ್ಷಣಾ ಪಡೆಗಳ ಮುಖ್ಯಸ್ಥರ ಪಾತ್ರ ನಿರ್ವಹಿಸಿರುವ ಜಾಕಿ ಶರೀಫ್ ಹಾಗೂ ಸುನಿಲ್ ಶೆಟ್ಟಿ ಇಬ್ಬರ ಪಾತ್ರ ನಿರ್ವಹಣೆಯಲ್ಲಿ ನಟನೆಯಲ್ಲಿನ ಪ್ರಬುದ್ಧತೆಯನ್ನು ಗಮನಿಸಬಹುದು. ಚಿತ್ರದ ಕ್ಲೈಮಾಕ್ಸ್‌ನಲ್ಲಿ ರಾಮ್‌ನ ಪ್ರತಿನಿಧಿಯಾಗಿ ಜಾಕಿ ಶ್ರಾಫ್ ಕರಿನಾಳ ಪ್ರತಿನಿಧಿಯಾಗಿ ಸುನಿಲ್ ಶೆಟ್ಟಿ ಇಬ್ಬರೂ ಭಾರತ್-ಪಾಕ್‌ಗಡಿಯಲ್ಲಿರುವ ದರ್ಗಾ ಶರೀಫ್‌ನ ಉರುಸ್‌ನಲ್ಲಿ ಭಾಗವಹಿಸುವುದು, ನಾಯಕ ನಟ ನಟಿಯರಿಬ್ಬರನ್ನು ಕರೆ ತಂದು

ಪುಟ 11 ಕ್ಕೆ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ